ನಮ್ಮ ಒಡೆಯರ ಕಥೆಗಳು

ಜಿ. ಪಿ. ರಾಜರತ್ನಂ



ಶ್ರೀ ಹೆಚ್. ಭೀಮರಾವ್ ಸ್ಮಾರಕ ಗ್ರಂಥಮಾಲೆ-೧೦

ನಮ್ಮ ಒಡೆಯರ ಕಥೆಗಳು

ಜಿ. ಪಿ. ರಾಜರತ್ನಂ

ಸ್ಟ್ಯಾಂಡರ್ಡ್ ಬುಕ್ ಡಿಪೋ
ಅವೆನ್ಯೂ ರೋಡ್ : ಬೆಂಗಳೂರು-೨

ಶ್ರೀ ಹೆಚ್. ಭೀಮರಾವ್ ಸ್ಮಾರಕ ಗ್ರಂಥಮಾಲೆ-೧೦.

ನಮ್ಮ ಒಡೆಯರ ಕಥೆಗಳು

ಜಿ. ಪಿ. ರಾಜರತ್ನಂ

ಸ್ಟ್ಯಾಂಡರ್ಡ್ ಬುಕ್ ಡಿಪ್ಪೋ
ಅವೆನ್ಯೂ ರೋಡ್, ಬೆಂಗಳೂರು-೨.

ಮೊದಲನೆಯ ಮುದ್ರಣ : ೧೯೭೪

ಪುಟಗಳು : ೮+೧೧೨

ಶ್ರೀ ಹೆಚ್. ಭೀಮರಾವ್ ಸ್ಮಾರಕ ಗ್ರಂಥಮಾಲೆಯ ಪುಸ್ತಕಗಳು

೧.	ವಚನರಾಮಾಯಣ	(೧೯೬೨)	ರೂ ೪-೫೦
೨.	ಸೈಂಧವ ಕುದುರೆ	(೧೯೬೩)	ಮುಗಿದಿದೆ.
೩.	ಆಶ್ಚರ್ಯ ಪರಂಪರೆ	(೧೯೬೩)	ಮುಗಿದಿದೆ.
೪.	ಆರು ಕೊಂಬಿನ ಆನೆ	(೧೯೬೪)	ರೂ ೨-೦೦
೫.	ಬೆಂಕಿಯ ಬಣ್ಣದ ಸಿಂಹ	(೧೯೬೫)	ಮುಗಿದಿದೆ.
೬.	ಬೋಧಿಸತ್ತ್ವನ ಕತೆಗಳು	(೧೯೬೬)	ಮುಗಿದಿದೆ.
೭.	ಮಣಿಕಂಠ	(೧೯೬೭)	ರೂ ೩-೫೦
೮.	ಗುಟ್ಟಿಲ	(೧೯೬೭)	ರೂ ೩-೫೦
೯.	ಬುದ್ಧನು ಹೇಳಿದ ಕತೆಗಳು	(೧೯೬೭)	ಮುಗಿದಿದೆ.
೧೦.	ನಮ್ಮ ಒಡೆಯರ ಕತೆಗಳು	(೧೯೭೪)	ರೂ ೨-೭೫
೧೧.	ತೆನಾಲಿ ರಾಮ	(೧೯೭೪)	ರೂ ೨-೫೦

ಮುದ್ರಕರು
ಶ್ರೀ ಸತ್ಯನಾರಾಯಣ ಪ್ರೆಸ್
ಅರಳೇಪೇಟೆ : : ಬೆಂಗಳೂರು-೫೩

ಪ್ರಕಾಶಕರ ಅರಿಕೆ

ಸುಲಭ ಬೆಲೆಯಲ್ಲಿ ಉತ್ತಮ ಗ್ರಂಥಗಳನ್ನು ಪ್ರಕಟಿಸಿ ಕನ್ನಡನಾಡು ನುಡಿಗಳ ಸೇವೆಯನ್ನು ಮಾಡಲು ನಾವು ಆರಂಭಿಸಿ ಸುಮಾರು ಇಪ್ಪತ್ತು ವರ್ಷಗಳಾದುವು. ಈ ಅವಧಿಯಲ್ಲಿ ನೂರಕ್ಕೂ ಮೇಲ್ಪಟ್ಟು ಪುಸ್ತಕಗಳು ನಮ್ಮಿಂದ ಪ್ರಕಟವಾಗಿವೆ. ಕಾದಂಬರಿ, ಕಥಾಸಂಕಲನ, ಪ್ರಬಂಧ, ವಿಮರ್ಶೆ, ವಿಜ್ಞಾನ, ನಾಟಕ, ಬಾಲಸಾಹಿತ್ಯ ಮೊದಲಾದ ಅನೇಕ ಪ್ರಕಾರಗಳು ನಮ್ಮಿಂದ ಪ್ರಕಟವಾಗಿ ಜನಪ್ರಿಯವಾಗಿವೆ.

ಇವೆಲ್ಲಕ್ಕಿಂತ ಹೆಚ್ಚಾಗಿ, ಭಾರತ ಸಂಸ್ಕೃತಿಯ ಪ್ರತೀಕಗಳಾದ ರಾಮಾಯಣ, ಭಾರತ, ಭಾಗವತ, ಭಗವದ್ಗೀತೆಗಳನ್ನು ಪ್ರತಿಯೊಬ್ಬರಿಗೂ ದೊರಕತಕ್ಕಂತಹ ಸುಲಭ ಬೆಲೆಗೆ ಒದಗಿಸಬೇಕೆಂದು ನನ್ನ ಪೂಜ್ಯ ತಂದೆಯವರಾದ ಶ್ರೀ ಹೆಚ್. ಭೀಮರಾಯರು ಆಸೆಯಿಟ್ಟುಕೊಂಡಿದ್ದರು. ಕಾರಣಾಂತರಗಳಿಂದ ಆ ಆಸೆ ಒಡನೆಯೆ ಕೈಗೂಡಲಿಲ್ಲ.

ಅವರ ಆಸೆ ಈಡೇರುವುದಕ್ಕೆ ಸೂಚನೆಯಾಗಿ **'ವಚನ ರಾಮಾಯಣ'** ರಚನೆಯಾಗುತ್ತಿದ್ದಾಗಲೇ ನನ್ನ ತಂದೆಯವರು ಪ್ಲವನಾಮ ಸಂವತ್ಸರದ ಕಾರ್ತಿಕ ಶುದ್ಧ ಸೋಮವಾರ (೨೦-೧೧-೧೯೬೧) ನಮ್ಮನ್ನು ಅಗಲಿ ಶಾಶ್ವತ ಬ್ರಹ್ಮಲೋಕವನ್ನು ಸೇರಿದರು.

ಅವರ ಹೆಸರಿನಲ್ಲಿ ಆರಂಭವಾದ ಸ್ಮಾರಕ ಗ್ರಂಥಮಾಲೆಯ ಮೊದಲನೇ ಪುಸ್ತಕವಾಗಿ ಶ್ರೀಮಾನ್ ತ. ಸು. ಶಾಮರಾಯರ **'ವಚನ ರಾಮಾಯಣ'** ಸೆಪ್ಟೆಂಬರ್ ೧೯೬೨ರಲ್ಲಿ ಪ್ರಕಟವಾಯಿತು.

ಈ ಮಾಲೆಯಲ್ಲಿ ಪ್ರಕಟಿಸಲು ತಮ್ಮ ಕೃತಿಯೊಂದನ್ನು ಕೊಡಿರೆಂದು ನನ್ನ ಗುರುಗಳಾದ ಶ್ರೀ ಜಿ. ಪಿ. ರಾಜರತ್ನಂ ಅವರನ್ನು ಕೇಳಿದಾಗ, ಅವರು ನನ್ನ ಮೇಲಿನ ವಿಶ್ವಾಸದಿಂದ, ನನ್ನ ತಂದೆಯವರ ಮೇಲಿನ ಅಭಿಮಾನದಿಂದ ಒಡನೆ ಒಪ್ಪಿ, **'ಸೈಂಧವ ಕುದುರೆ ಮೊದಲಾದ ಬೋಧಿಸತ್ತ್ವನ ಕತೆಗಳು'** ಎಂಬ ಪುಸ್ತಕವನ್ನು ರಚಿಸಿಕೊಟ್ಟರು. ಇದು ಶ್ರೀ ಹೆಚ್. ಭೀಮ

ರಾವ್ ಸ್ಮಾರಕ ಗ್ರಂಥಮಾಲೆಯಲ್ಲಿ ಎರಡನೇ ಪುಸ್ತಕವಾಗಿ ನನ್ನ ತಂದೆಯವರ ಹುಟ್ಟುಹಬ್ಬದ ದಿವಸ (೧೭-೧೦-೧೯೬೩) ಪ್ರಕಟವಾಯಿತು.

ಅದರ ಮುಂದಿನ ತಿಂಗಳು, ನನ್ನ ತಂದೆ ಪರಲೋಕಪ್ರಾಪ್ತರಾದ ದಿವಸ (೨೦-೧೧-೧೯೬೩) ಶ್ರೀ ರಾಜರತ್ನಂ ರಚಿಸಿಕೊಟ್ಟ **'ಆಶ್ಚರ್ಯ ಪರಂಪರೆ'** ಯನ್ನು ಪ್ರಕಟಿಸಿದೆವು. ಬಾಣಭಟ್ಟನು ಸಂಸ್ಕೃತದಲ್ಲಿ ಗದ್ಯರೂಪವಾಗಿ ಬರೆದ 'ಕಾದಂಬರಿ' ಯನ್ನು ನಾಗವರ್ಮ ಕವಿ ಹಳಗನ್ನಡದಲ್ಲಿ ಚಂಪೂರೂಪವಾಗಿ ಬರೆದ. ಅದರ ಸಂಗ್ರಹದ ಹೊಸಗನ್ನಡ ಅನುವಾದ ಈ **'ಆಶ್ಚರ್ಯ ಪರಂಪರೆ'**. ಇದು ಮಾಲೆಯ ಮೂರನೆಯ ಪುಸ್ತಕ.

ಹೀಗೆ ೧೯೬೨ರಲ್ಲಿ ಆರಂಭವಾದ ಈ ಮಾಲೆಯಲ್ಲಿ ೧೯೬೭ರವರೆಗೆ ಐದು ವರ್ಷಗಳಲ್ಲಿ ಒಂಬತ್ತು ಪುಸ್ತಕಗಳು ಪ್ರಕಟವಾದುವು. ಕಾರಣಾಂತರಗಳಿಂದ ನಿಂತುಹೋಗಿದ್ದ ಈ ಮಾಲೆಯನ್ನು ಈಗ ಮತ್ತೆ ಮುಂದುವರಿಸುತ್ತಿದ್ದೇವೆ. ಹತ್ತನೇ ಪುಸ್ತಕವಾದ **'ನಮ್ಮ ಒಡೆಯರ ಕಥೆಗಳು'** ಮತ್ತು **'ತೆನಾಲಿ ರಾಮ'** ಎಂಬ ಹನ್ನೊಂದನೇ ಪುಸ್ತಕ ಈಗ ತಾನೇ ಪ್ರಕಟವಾಗಿವೆ.

ಮಾಲೆಗಾಗಿ ಈ ಪುಸ್ತಕಗಳನ್ನು ಕೊಡುತ್ತಿರುವ ಶ್ರೀ ರಾಜರತ್ನಂ ಅವರಿಗೂ ನಮ್ಮ ಪ್ರಕಟಣೆಗಳನ್ನು ಕೊಂಡುಕೊಂಡು ನಮ್ಮನ್ನು ಪ್ರೋತ್ಸಾಹಿಸುತ್ತಿರುವ ನಮ್ಮ ವಾಚಕರಿಗೂ ನಮ್ಮ ವಂದನೆಗಳು.

೩೦-೮-೭೪ **ಹೆಚ್. ಕಮಲಾನಾಥ್**
ಬೆಂಗಳೂರು

ಅರಿಕೆ

ಶ್ರೀದೇವರ ಕೃಪೆಯಿಂದ ಕನ್ನಡದಲ್ಲಿ ಮಕ್ಕಳಿಗಾಗಿ ಪದ್ಯ ಕತೆ ನಾಟಕ ಬರೆಯುವ ಅವಕಾಶ ನಲವತ್ತು ವರ್ಷಗಳ ಹಿಂದೆ ನನಗೆ ಒದಗಿಬಂತು. ಅಂಥ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಪ್ರವೃತ್ತಿಯನ್ನೂ ಸದ್ಬುದ್ಧಿಯನ್ನೂ ಆ ದೇವರೇ ಅನುಗ್ರಹಿಸುತ್ತಿದ್ದಾನೆ. ಹೀಗೆ ಆತನು ಒದಗಿಸಿದ ಅವಕಾಶಗಳಲ್ಲಿ ಇತ್ತೀಚಿನದು : ಕರ್ಣಾಟಕದ ಜನಪ್ರಿಯ ವಾರಪತ್ರಿಕೆಯಾದ '**ಸುಧಾ**'. ಕಳೆದ ಹತ್ತು ವರ್ಷಗಳಿಂದ ಆ ಪತ್ರಿಕೆಗಾಗಿ ನಾನು ಬರೆದ ಕತೆಗಳು ವಾರವಾರವೂ ಅಲ್ಲಿ ಪ್ರಕಟವಾಗಿವೆ. ದೇವರು ಅನುಕೂಲ ಒದಗಿಸಿದ ಹಾಗೆಲ್ಲಾ ನಾನೇ ಅವುಗಳನ್ನು ಪುಸ್ತಕವಾಗಿ ಪ್ರಕಟಿಸಿದ್ದೇನೆ. ಅವುಗಳಲ್ಲಿ ಕೆಲವು ಈಗಾಗಲೇ ಮಾರಾಟವಾಗಿ ಮುಗಿದಿವೆ.

'**ಸುಧಾ**' ದಲ್ಲಿ ಪ್ರಕಟವಾಗಿ, ಇನ್ನೂ ಪುಸ್ತಕರೂಪದಲ್ಲಿ ಬಾರದೆ ಇರುವವುಗಳನ್ನು ಪ್ರಕಟಿಸಲು ಸನ್ಮಿತ್ರರಾದ ಶ್ರೀ ಹೆಚ್. ಕಮಲಾನಾಥರು ನನ್ನ ನೆರವಿಗೆ ಬಂದಿದ್ದಾರೆ. ಅವರು ಈ ಮೊದಲೇ ನನ್ನ ಕೆಲವು ಬಾಲಸಾಹಿತ್ಯವನ್ನು ಪ್ರಕಟಿಸಿದ್ದಾರೆ ; ಈಗ ಮತ್ತೆ ಪ್ರಕಟಿಸಲು ತೊಡಗಿದ್ದಾರೆ. ಅವರಿಗೆ ನನ್ನ ವಂದನೆಗಳು.

'**ನಮ್ಮ ಒಡೆಯರ ಕಥೆಗಳು**' ಎಂಬ ಈ ಪುಸ್ತಕದೊಳಗಿರುವ ೧೯ ಕತೆಗಳು ಮೊದಲು '**ಸುಧಾ**' ದಲ್ಲಿ ಪ್ರಕಟವಾದುವು. ಇವುಗಳನ್ನು ತಮ್ಮ ವಾರಪತ್ರಿಕೆಯಲ್ಲಿ ಪ್ರಚುರಪಡಿಸಿದ್ದಕ್ಕಾಗಿ '**ಸುಧಾ**'**ದ** ವ್ಯವಸ್ಥಾಪಕರಿಗೂ ಸಂಪಾದಕವರ್ಗಕ್ಕೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ.

ಮಕ್ಕಳಿಗಾಗಿ ನಾನು ಬರೆದಿರುವ ಕೆಲವು ಪುಸ್ತಕಗಳ ಪಟ್ಟಿಯನ್ನು ಮಗ್ಗಲು ಪುಟದಲ್ಲಿ ಕೊಟ್ಟಿದ್ದೇನೆ. ವಾಚಕಮಿತ್ರರು ಇವುಗಳನ್ನು ಕೊಂಡುಕೊಂಡ ಹಾಗೆಲ್ಲಾ ಇನ್ನಷ್ಟು ಮಕ್ಕಳ ಪುಸ್ತಕಗಳನ್ನು ಬರೆದು ಪ್ರಕಟಿಸಲು ಅನುಕೂಲವಾಗುತ್ತದೆ ಎರದು ಬಿನ್ನವಿಸಿಕೊಳ್ಳುತ್ತೇನೆ.

೩೦-೮-೧೯೭೪ **ಜಿ. ಪಿ. ರಾಜರತ್ನಂ**

ಮಲ್ಲೇಶ್ವರಂ

ಒಳಗಿನ ಕತೆಗಳು

ಮೈಸೂರಿನ ಒಡೆಯರನ್ನು ಕುರಿತು
ಸಂಸಕವಿ ಬರೆದಿರುವ
ಆರು ನಾಟಕಗಳ ಕಥೆಗಳು

೧. ಯದುರಾಯರು

ಸುಮಾರು ಆರುನೂರು ವರ್ಷಗಳ ಹಿಂದೆ ಶ್ರೀಕೃಷ್ಣನ ವಂಶದಲ್ಲಿ ಹುಟ್ಟಿದ ಯದುರಾಯ, ಕೃಷ್ಣರಾಯ ಎಂಬ ಅಣ್ಣತಮ್ಮಂದಿರು ದ್ವಾರಕೆಯಲ್ಲಿ ಇದ್ದರು.

ಒಂದು ರಾತ್ರಿ ಶ್ರೀಕೃಷ್ಣದೇವರು ಯದುರಾಯನಿಗೆ ಕನಸಿನಲ್ಲಿ ಕಾಣಿಸಿಕೊಂಡು, 'ನೀನು ನಿನ್ನ ತಮ್ಮನೊಡನೆ ವಿಂಧ್ಯಪರ್ವತಕ್ಕೆ ಹೋಗಿ, ಅಲ್ಲಿ ವಿಂಧ್ಯವಾಸಿನೀ ಅಮ್ಮನವರನ್ನು ಕುರಿತು ತಪಸ್ಸು ಮಾಡು' ಎಂದರು.

ಅದರಂತೆ ಯದುರಾಯರು ತಮ್ಮ ತಮ್ಮನೊಡನೆ ವಿಂಧ್ಯಕ್ಕೆ ಬಂದು ತಪಸ್ಸು ಮಾಡಿದಾಗ, ವಿಂಧ್ಯವಾಸಿನೀದೇವಿ ಪ್ರತ್ಯಕ್ಷಳಾಗಿ 'ನೀವು ಇನ್ನೂ ದಕ್ಷಿಣದ ಕಡೆಗೆ ಹೋಗಿರಿ. ಅಲ್ಲಿ ಕಾವೇರೀ ಕಪಿಲಾ ನದಿಗಳ ನಡುವೆ ಮಹಾಬಲವೆಂಬ ಪರ್ವತ ಇದೆ. ಚಾಮುಂಡೇಶ್ವರಿ ಎಂಬ ಹೆಸರಿನಿಂದ ನಾನು ಆ ಪರ್ವತದ ಮೇಲಿದ್ದೇನೆ. ಅಲ್ಲಿಗೆ ಹೋಗಿ ನನ್ನನ್ನು ಪೂಜಿಸಿರಿ. ಆ ಪರ್ವತದ ಸಮೀಪದಲ್ಲಿ ಮಯಿಸೂರೆಂಬ ಪಟ್ಟಣವಿದೆ. ಅದರ ಒಡೆಯನ ಮಗಳನ್ನು ನೀನು ಮದುವೆಯಾಗುತ್ತೀಯೆ. ಆ ಪಟ್ಟಣಕ್ಕೆ ನೀನು ಒಡೆಯನಾಗುತ್ತೀಯೆ' ಎಂದು ಹೇಳಿದಳು.

ಯದುರಾಯರು ದೇವಿಯ ಮಾತಿನಂತೆ ತಮ್ಮನನ್ನು ಕರೆದುಕೊಂಡು ವಿಜಯನಗರದ ಮೂಲಕವಾಗಿ ಯಾದವಗಿರಿಗೆ ಬಂದರು. ಅಲ್ಲಿನ ಕಲ್ಯಾಣಿಯೆಂಬ ತೀರ್ಥದಲ್ಲಿ ಮಿಂದು, ಯೋಗನೃಸಿಂಹಸ್ವಾಮಿ, ಚೆಲುವರಾಯಸ್ವಾಮಿ ಮೊದಲಾದ ದೇವರುಗಳ ದರ್ಶನ ಮಾಡಿಕೊಂಡು ದಕ್ಷಿಣಾಭಿಮುಖವಾಗಿ ಮುಂದುವರಿದರು.

ಶ್ರೀರಂಗಪಟ್ಟಣದ ಹತ್ತಿರ ಕಾವೇರೀ ನದಿಯನ್ನು ದಾಟಿದರು. ಮಹಾಬಲವನ್ನು ಭಕ್ತಿಯಿಂದ ಹತ್ತಿದರು. ಜಗಜ್ಜನನಿಯಾದ ಶ್ರೀ ಚಾಮುಂಡೇಶ್ವರೀ ಅಮ್ಮನವರನ್ನು ಪೂಜಿಸಿದರು. ಹತ್ತಿರದಲ್ಲಿಯೇ ದಕ್ಷಿಣದ ಕಡೆ

ಹರಿಯುತ್ತಿದ್ದ ಕಪಿಲಾನದಿಯ ದಡದ ಶ್ರೀಕಂಠೇಶ್ವರಸ್ವಾಮಿಗೆ ಅಲ್ಲಿಂದಲೇ ನಮಸ್ಕಾರಗಳನ್ನು ಅರ್ಪಿಸಿ, ಆ ರಾತ್ರಿ ಬೆಟ್ಟದ ಮೇಲೆ ತಂಗಿದರು.

ರಾತ್ರಿ ಕಳೆದು ಬೆಳಕು ಹರಿಯುತ್ತಿರುವಾಗ ಅಮ್ಮನವರು ಪುನಃ ಯದುರಾಯರ ಕನಸಿನಲ್ಲಿ ಕಾಣಿಸಿಕೊಂಡು 'ಈ ಪರ್ವತಕ್ಕೆ ಆಗ್ನೇಯಭಾಗದಲ್ಲಿ ಜ್ವಲಜ್ಜಿಹ್ವಾ ಎಂಬ ಹೆಸರಿನಿಂದ ನಾನು ನೆಲಸಿದ್ದೇನೆ. ನೀನು ಹೋಗಿ ಆ ದೇವಿಯನ್ನೂ ಹೀಗೆಯೇ ಪೂಜಿಸು. ಅನಂತರ ಮಯಿಸೂರು ಪಟ್ಟಣಕ್ಕೆ ಹೋಗು. ಅಲ್ಲಿ ತೃಣಬಿಂದು ಮುನಿಯಿಂದ ಆರಾಧಿತನಾದ ಈಶ್ವರನ ಒಂದು ಆಲಯವಿದೆ. ಆ ತೃಣೇಶ್ವರಾಲಯದ ಹಿಂದುಗಡೆ, ಮೈಸೂರಿನ ಪೂರ್ವಕ್ಕೆ ಇರುವ ಕೆರೆಯ ಕೋಡಿಯ ಬಳಿ ಒಂದು ಭೈರವನ ದೇವಾಲಯವಿದೆ. ಅಲ್ಲಿಗೆ ಹೋಗಿ ಇರು. ಲಿಂಗಧಾರಿಯಾದ ಒಬ್ಬ ಪುರುಷ ಅಲ್ಲಿಗೆ ಬರುತ್ತಾನೆ. ಆತ ಹೇಳಿದಂತೆ ನೀನು ನಡೆದುಕೊ. ವಿಂಧ್ಯಪರ್ವತದಲ್ಲಿ ನಾನು ನಿನಗೆ ಕೊಟ್ಟ ವರ ವಶವಾಗುತ್ತದೆ' ಎಂದಳು.

ಯದುರಾಯರು ಎದ್ದು, ತಮ್ಮ ಸ್ವಪ್ನವನ್ನು ತಮ್ಮನಿಗೆ ಹೇಳಿದರು. ಇಬ್ಬರೂ ಸ್ನಾನ ಮಾಡಿ ಶುಚಿರ್ಭೂತರಾಗಿ, ಜ್ವಲಜ್ಜಿಹ್ವಾ ದೇವತೆಯನ್ನು ಪೂಜಿಸಿ, ಕೋಡಿ ಭೈರವನ ಗುಡಿಗೆ ಹೋದರು. ಶ್ರೀಚಾಮುಂಡೇಶ್ವರಿ ಹೇಳಿದ ಲಿಂಗಧಾರಿಯ ಆಗಮನವನ್ನು ಎದುರುನೋಡುತ್ತಿದ್ದರು.

ಸ್ವಲ್ಪ ವೇಳೆಯಲ್ಲೇ ಒಬ್ಬ ತೇಜಸ್ವಿಯಾದ ಲಿಂಗಧಾರಿ ಅಲ್ಲಿಗೆ ಬಂದ. ಸಾಕ್ಷಾತ್ ಪರಶಿವನಂತೆ ಕಂಗೊಳಿಸುತ್ತಿದ್ದ ಆತನಿಗೆ ಅಣ್ಣತಮ್ಮಂದಿರು ಅಡ್ಡಬಿದ್ದು ಸತ್ಕಾರ ಮಾಡಿದರು. ಬಂದ ಜಂಗಮ ಅವರನ್ನು ಕುಶಲಪ್ರಶ್ನೆ ಮಾಡಿ, ಅನಂತರ ಅವರಿಗೆ ಹೀಗೆ ಹೇಳಿದ :—

ಅಯ್ಯಾ ರಾಜಕುಮಾರರೇ, ಬಹಳ ಹಿಂದಿನ ಕಾಲದಲ್ಲಿ ಶೂರದೇವರಾಯನೆಂಬವನು ಕಾರಣಾಂತರದಿಂದ ಮಧುರಾನಗರವನ್ನು ಬಿಟ್ಟು ಈ ಕರ್ಣಾಟಕ ದೇಶಕ್ಕೆ ಬಂದನು. ಇಲ್ಲಿ ಶ್ರೀ ಚಾಮುಂಡೇಶ್ವರಿಯ ಅನುಗ್ರಹದಿಂದ ಈ ಮೈಸೂರಿಗೆ ಒಡೆಯನಾದನು. ಆ ಶೂರದೇವರಾಯನ ವಂಶದವನಾದ ಚಾಮರಾಜನೆಂಬ ದೊರೆ ಸ್ವಲ್ಪ ಕಾಲದ ಹಿಂದೆ ಕಾಲಾಧೀನನಾದನು. ಆತನಿಗೆ ಗಂಡುಮಕ್ಕಳಿಲ್ಲ. ಒಬ್ಬಳೇ ಹೆಣ್ಣುಮಗಳು. ಮನೆಗೆ ಯಾರೂ ಗಂಡುದಿಕ್ಕು ಇಲ್ಲ ಎಂಬುದರಿಂದ ಧೈರ್ಯಗೊಂಡು ದಳವಾಯಿಯಾದ

ಮಾರನಾಯಕ ದೊರೆಯ ಪತ್ನಿಗೆ ಕಿರುಕುಳ ಕೊಡುತ್ತಿದ್ದಾನೆ. ರಾಜಕುಮಾರಿಯನ್ನು ತಾನು ಮದುವೆಯಾಗಿ, ರಾಜ್ಯಕ್ಕೆ ತಾನೇ ಒಡೆಯನಾಗಬೇಕೆಂದು ಕುತಂತ್ರ ಮಾಡುತ್ತಿದ್ದಾನೆ. ಅವನ ದುರಾಲೋಚನೆ ನಡೆಯದಂತೆ ಪ್ರತಿಬಂಧಕಮಾಡುವುದಕ್ಕಾಗಿ ವಿಂಧ್ಯವಾಸಿನೀದೇವಿ ನಿಮ್ಮನ್ನು ಇಲ್ಲಿಗೆ ಕಳಿಸಿದ್ದಾಳೆ. ದೇವಿಯ ಸಂಕಲ್ಪ ನೆರವೇರಬೇಕಾದರೆ ನೀವು ಏನು ಮಾಡಬೇಕು ಎಂಬುದನ್ನು ಇನ್ನೊಬ್ಬ ಜಂಗಮ ಬಂದು ನಿಮಗೆ ಹೇಳುತ್ತಾನೆ. ಅದರಂತೆ ನೀವು ನಡೆಯಿರಿ. ನಿಮಗೆ ಶ್ರೇಯಸ್ಸಾಗಲಿ' ಎಂದು ಹೇಳಿ ಆತ ಅಂತರ್ಧಾನವಾದನು.

ಅಣ್ಣ ತಮ್ಮಂದಿರಿಬ್ಬರೂ ಆಶ್ಚರ್ಯಪಟ್ಟು, ಮುಂದೆ ಏನಾಗುವುದೋ ಎಂದು ಕುತೂಹಲದಿಂದ ನಿರೀಕ್ಷಿಸುತ್ತಿದ್ದರು.

ಅತ್ತ ಚಾಮರಾಜರ ಪತ್ನಿ 'ಮಾರನಾಯಕನ ಬಾಧೆಯಿಂದ ಪಾರಾಗುವುದು ಹೇಗೆ?' ಎಂದು ಚಿಂತಿಸುತ್ತಿರುವಾಗ, ಒಂದು ಬೆಳಗಿನ ಜಾವದಲ್ಲಿ ಪರಮೇಶ್ವರನು ಆಕೆಯ ಕನಸಿನಲ್ಲಿ ಕಾಣಿಸಿಕೊಂಡು ಹೀಗೆಂದನು:—

'ಮಗಳೆ, ವ್ಯಸನಪಡಬೇಡ. ನಿಮ್ಮ ಆಪತ್ತನ್ನು ಹೋಗಲಾಡಿಸುವ ಇಬ್ಬರು ರಾಜಕುಮಾರರನ್ನು ವಿಂಧ್ಯವಾಸಿನೀ ದೇವಿ ಈ ನಗರಕ್ಕೆ ಕಳಿಸಿದ್ದಾಳೆ. ಅವರು ಕೋಡಿಭೈರವನ ದೇವಾಲಯದಲ್ಲಿ ತಂಗಿದ್ದಾರೆ. ಅವರು ಉತ್ತಮವಂಶದಲ್ಲಿ ಹುಟ್ಟಿದವರು, ವೀರರು, ರೂಪಸಂಪನ್ನರು. ಅವರಿಂದ ಮಾರನಾಯಕನ ವಧೆಯಾಗುತ್ತದೆ. ಅವರಲ್ಲಿ ಹಿರಿಯನಿಗೆ ನಿನ್ನ ಮಗಳನ್ನು ಕೊಟ್ಟು ಮದುವೆಮಾಡು. ಅದರಿಂದ ನಿಮ್ಮ, ವಂಶದ ಪುರೋಭಿವೃದ್ಧಿಯಾಗುತ್ತದೆ.'

ರಾಜಪತ್ನಿ ತಾನು ಕಂಡ ಕನಸನ್ನು ಮಗಳಿಗೆ ಹೇಳಿದಳು. ಇಬ್ಬರಿಗೂ ಧೈರ್ಯ ಬಂತು.

ರಾಣಿ ಆಪ್ತನಾದ ಒಬ್ಬ ಜಂಗಮನನ್ನು ಕರೆದು, ಕೋಡಿ ಭೈರವನ ದೇವಾಲಯದಲ್ಲಿರುವ ರಾಜಕುಮಾರರು ಯಾರು ಎಂದು ತಿಳಿದು ಬರಲು ಕಳಿಸಿದಳು. ಬಂದಿರುವ ರಾಜಕುಮಾರರ ರೂಪ ಲಾವಣ್ಯಗಳನ್ನು ತಿಳಿದು ಬರಲು ರಾಜಪುತ್ರಿ ತನ್ನ ಸಖಿಯರನ್ನು ಕಳಿಸಿದಳು.

ಅವರು ಹೋಗಿ ಬಂದು ತಿಳಿಸಿದ ವರ್ತಮಾನ ವರದಿಗಳಿಂದ ರಾಜಪತ್ನಿಗೂ ಸಂತೋಷವಾಯಿತು; ರಾಜಪುತ್ರಿಗೂ ಸಂತೋಷವಾಯಿತು.

ಅನಂತರ ರಾಜಪತ್ನಿಯ ಅಪೇಕ್ಷೆಯ ಮೇರೆಗೆ ಆಸ್ಥಾನದ ಕರಣಿಕರಿಬ್ಬರು ಕಾರ್ಯಪರರಾದರು. ಮಾರನಾಯಕನಿಗೆ ವಿರೋಧಿಗಳಾಗಿದ್ದವರನ್ನು ಗುಟ್ಟಾಗಿ ಕರಸಿಕೊಂಡು, ಅವರಿಗೆ ಹೇಳಬೇಕಾದುದನ್ನು ಹೇಳಿ, ಅಲ್ಲಲ್ಲಿ ಆಯಕಟ್ಟಿನ ಸ್ಥಾನಗಳಲ್ಲಿ ಯಾರಿಗೂ ಗೊತ್ತಾಗದಂತೆ ನಿಲ್ಲಿಸಿದರು. ಅನಂತರ ಯದುರಾಯರನ್ನೂ ಕೃಷ್ಣರಾಯರನ್ನೂ ಕಂಡು, ರಾಣಿ ಕಂಡ ಕನಸನ್ನೂ ಆಕೆಯ ಮನೋಗತವನ್ನೂ ಬಿನ್ನವಿಸಿಕೊಂಡರು. ದೈವಸಂಕಲ್ಪಕ್ಕೆ ವಿಧೇಯರಾಗಿ ಅಣ್ಣ ತಮ್ಮಂದಿರು ಪಟ್ಟಣವನ್ನು ಪ್ರವೇಶಿಸಿದರು.

ಕೋಟೆಯ ಹೆಬ್ಬಾಗಿಲಿನಲ್ಲಿ ನಿಂತಿದ್ದ ಮಾರನಾಯಕನ ಭಟರು ಅವರನ್ನು ತಡೆದರು. ಕೂಡಲೆ ಆ ಅಣ್ಣ ತಮ್ಮಂದಿರ ಖಡ್ಗಗಳಿಗೆ ಆಹುತಿಯಾದರು.

ತನ್ನ ಕಡೆಯವರು ವಧೆಯಾದ ಸುದ್ದಿ ಕೇಳಿ ಮಾರನಾಯಕ ತನ್ನ ಸೇನೆಯೊಡನೆ ಅಲ್ಲಿಗೆ ಧಾವಿಸಿ ಬಂದ. ಈ ಕಡೆ ಯದುರಾಯರ ನಾಯಕತ್ವದಲ್ಲಿ ಸ್ವಾಮಿಭಕ್ತರ ಸೈನ್ಯ ! ಆ ಕಡೆ ಮಾರನಾಯಕನ ದಳವಾಯಿತನದಲ್ಲಿ ಸ್ವಾಮಿದ್ರೋಹಿಗಳ ಸೈನ್ಯ ! ಜಯಾಪಜಯಗಳನ್ನು ನಿಷ್ಕರ್ಷಿಸುವ ದೇವಿ ಮಾರನಾಯಕನ ವಧೆಗಾಗಿಯೇ ಆ ಅಣ್ಣ ತಮ್ಮಂದಿರನ್ನು ಅಲ್ಲಿಂದ ಇಲ್ಲಿಗೆ ಕರೆದು ತಂದಿರುವಾಗ, ಮಾರನಾಯಕನ ವಧೆಯಾದದ್ದು ಏನು ಆಶ್ಚರ್ಯ !

ಅನಾಥವಾಗಿದ್ದ ಚಾಮರಾಜರ ಮನೆತನ ಈಗ ಸನಾಥವಾಯಿತು. ಯದುರಾಯರು ರಾಜಪುತ್ರಿಯನ್ನು ಮದುವೆಯಾದರು. ಮೈಸೂರಿಗೆ ತಾವು ಒಡೆಯರಾದರು.

ಮೈಸೂರಿನ ಒಡೆಯರ ವಂಶಕ್ಕೆ ಇವರೇ ಮೂಲಪುರುಷರು. ದೈವದ ಅನುಗ್ರಹಕ್ಕೆ ಪಾತ್ರರಾಗಿ, ತಮ್ಮ ಪೌರುಷವನ್ನು ದೈವದ ಸೇವೆಗೆ ಸಮರ್ಪಿಸಿದರು. ಇದರಿಂದ, ಅದುವರೆಗೆ 'ಮಹಿಷಾಸುರ ಪುರ' ಎಂದು ಹೆಸರಾಗಿದ್ದ ಪಟ್ಟಣವು 'ಮಹೀಶೂರಪುರ' ಎಂದು ಹೆಸರಾಯಿತು.

[ಆಧಾರ: ವಂಶಾವಳಿ]

೨. ಬಿರುದಂತೆಂಬರ ಗಂಡ

ಯದುರಾಯರಾದ ಮೇಲೆ ಮೈಸೂರನ್ನು ಆಳಿದ ಆರನೆಯ ಒಡೆಯರು ಶ್ರೀ ತಿಮ್ಮರಾಜ ಒಡೆಯರು. ಇವರನ್ನು ಎರಡನೇ ತಿಮ್ಮರಾಜರೆಂದು ಕರೆಯುತ್ತಾರೆ. (ಏಕೆಂದರೆ, ಇವರ ಮುತ್ತಾತಂದಿರಾದ ಮೊದಲನೇ ತಿಮ್ಮರಾಜರು ಮೈಸೂರಿಗೆ ಮೂರನೆಯ ಒಡೆಯರಾಗಿದ್ದರು.)

ಇವರಾದರೂ ತಮ್ಮ ಪೂರ್ವಿಕರಂತೆಯೆ ಮಹಾಬಲಗಿರಿಯ ಶ್ರೀ ಚಾಮುಂಡೇಶ್ವರಿಗೂ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರನಿಗೂ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು.

ಒಮ್ಮೆ ಶ್ರೀಕಂಠೇಶ್ವರನ ರಥೋತ್ಸವದ ಕಾಲ ಬಂತು. ತೇರುಗಳೆಲ್ಲ ಸಿದ್ಧವಾದುವು. ನಂಜನಗೂಡಿನ ಸುತ್ತುಮುತ್ತಿನ ಪಾಳಯಗಾರರೂ ಅವರ ಪ್ರಜೆಗಳೂ ಬಂದು ಸೇರಿದರು. ಜಾತ್ರೆಯ ಕಾಲದಲ್ಲಿ ವ್ಯಾಪಾರ ಮಾಡಲು ಅನೇಕರು ಬಂದು ಅಲ್ಲಲ್ಲೇ ಅಂಗಡಿಗಳನ್ನು ಹಾಕಿಕೊಂಡರು. ಊರಿನ ತುಂಬ ಜನ ತುಂಬಿಹೋಗಿತ್ತು.

ಅವರಲ್ಲಿ ಒಬ್ಬ ಕಡಲೇ ವ್ಯಾಪಾರದವ. ಅವನು ಮೈಸೂರಿನವ. ಅವನ ಹೆಸರು ನಂಜಸೆಟ್ಟಿ. ಮೈಸೂರಿನ ಒಡೆಯರಲ್ಲಿ ಅವನಿಗೆ ಇದ್ದ ಭಕ್ತಿ ಅಸಾಮಾನ್ಯವಾದದ್ದು. ನಮ್ಮ ಒಡೆಯರ ಸಮ ವೀರರೂ ಧೀರರೂ ಆದವರು ಭೂಮಿಯಲ್ಲೇ ಇಲ್ಲ ಎಂದು ಅವನಿಗೆ ಅಪಾರವಾದ ವಿಶ್ವಾಸ.

ಜಾತ್ರೆಯ ದಿವಸ. ಮೈಸೂರಿನ ಒಡೆಯರು ಇನ್ನೂ ಬಂದಿರಲಿಲ್ಲ. ಆಗ ಸಿಂಧುವಳ್ಳಿಯ ಪಾಳೆಯಗಾರನ ಕಡೆಯವರು 'ಸ್ವಸ್ತಿ ಶ್ರೀಮನ್ ಮಹಾ ಪ್ರಚಂಡ ಯುದ್ಧೋದ್ದಾಮ ವಿಜಯಶ್ರೀ ವಿಲಾಸ! ಪರಾಕ್ರಮ ಪ್ರತಾಪ ಕಲಿಕುಮಾರ! ಅಪ್ರತಿಮ ಶೂರ!' ಇತ್ಯಾದಿಯಾಗಿ ತಮ್ಮ ಪ್ರಭುವಿನ ಬಿರುದುಗಳನ್ನು ಕೂಗುತ್ತಾ ಹೋದರು.

ಕಡಲೆಯ ನಂಜಸೆಟ್ಟಿ ಅದನ್ನು ಕೇಳಿದ. 'ಎಲಾ ಇವರ ಪೊಗರೆ! ನಮ್ಮ ಒಡೆಯರು ಇನ್ನೂ ಇಲ್ಲಿ ಬಂದಿಲ್ಲ ಎಂಬ ಧೈರ್ಯದಿಂದ ಈ ಪುಟಗೋಸಿ

ಪಾಳೆಯಗಾರ ತನಗೆ ಸಲ್ಲದ ಬಿರುದುಗಳನ್ನು ತನ್ನ ಸೇವಕರಿಂದ ಕೂಗಿಸಿಕೊಳ್ಳುತ್ತಾನೆಯಲ್ಲವೆ ! ಒಡೆಯರ ಪ್ರಜೆ ನಾನು ಇದ್ದೇನೆ ಎಂಬುದನ್ನು ಇವರು ತಿಳಿದ ಹಾಗಿಲ್ಲ' ಎಂದುಕೊಂಡು, ಅವರ ಬಿರುದಿನ ಕೂಗು ನಿಲ್ಲುವವರೆಗೂ ಸುಮ್ಮನಿದ್ದ.

ಅದು ನಿಂತಕೂಡಲೆ 'ಅಂತೆಂಬರ ಗಂಡ ಶ್ರೀಮನ್ ಮಹೀಶೂರ ಪುರವರಾಧೀಶ್ವರ ಶ್ರೀಮನ್ ಮಹಾರಾಜಾಧಿರಾಜ ಶ್ರೀಇಮ್ಮಡಿ ತಿಮ್ಮರಾಜ ಒಡೆಯ ಮಹಾಸ್ವಾಮಿ ಬಹುಪರಾಕ್ !' ಎಂದು ಕೂಗಿದ.

ಪಾಳೆಯಗಾರರೂ ಅವನ ಪರಿವಾರದವರೂ ನಂಜಸೆಟ್ಟಿಯ ಕೂಗನ್ನು ಕೇಳಿ ಸಿಡಿಲು ಹೊಡೆದಂತೆ ಸ್ತಬ್ಧರಾದರು. ಸ್ವಲ್ಪ ಹೊತ್ತಿನ ನಂತರ ಚೇತರಿಸಿಕೊಂಡು ನಂಜಸೆಟ್ಟಿಯ ಕಡೆಗೆ ನುಗ್ಗಿದರು. 'ಏನೆಂದೆ ? ಬೊಗಳು' ಎಂದು ಗದರಿಸಿದರು.

ಅವರ ಕತ್ತಿಗಳಿಗೂ ಗದರಿಕೆಗಳಿಗೂ ಸೆಟ್ಟಿ ಹೆದರಲಿಲ್ಲ. ತಾನೂ ತನ್ನ ಕತ್ತಿ ಕಠಾರಿಗಳನ್ನು ಹಿಡಿದು ಸಿದ್ಧನಾಗಿ— 'ಏನೆಂದೆನೆ ? ಅಂತು ಎಂಬರ ಗಂಡ, ಅಂತೆಂಬರ ಗಂಡ, ಎಂದೆ ! ಇತರ ಪ್ರಾಣಿಗಳ ಹೆಜ್ಜೆ ಆನೆಯ ಒಂದು ಹೆಜ್ಜೆಯಲ್ಲಿ ಅಡಕವಾಗುವಂತೆ, ನದಿಗಳೆಲ್ಲ ಒಂದೇ ಸಮುದ್ರದಲ್ಲಿ ಸೇರಿಹೋಗುವಂತೆ, ನೀವು ಹೇಳಿಕೊಳ್ಳುವ ಎಲ್ಲ ಬಿರುದುಗಳೂ ನಮ್ಮ ಒಡೆಯರ ಬಿರುದಿಗೆ ಅಧೀನವಾಗಿಹೋಗುತ್ತವೆ. ಅದರಿಂದಲೇ ನಮ್ಮ ಒಡೆಯರು '**ಬಿರುದು ಅಂತು ಎಂಬರ ಗಂಡ ! ಬಿರುದಂತೆಂಬರ ಗಂಡ!**' ತಿಳಿಯಿತೆ ? ಬಿರುದಂತೆಂಬರ ಗಂಡ ಶ್ರೀಮನ್ ಮಹೀಶೂರ ಸಿಂಹಾಸನಾಧೀಶ್ವರ ಶ್ರೀ ಇಮ್ಮಡಿ ತಿಮ್ಮರಾಜ ಒಡೆಯ ಮಹಾಸ್ವಾಮಿ ಬಹು ಪರಾಕ್!' ಎಂದು ಉಚ್ಚಕಂಠದಿಂದ ಉದ್ಘೋಷಿಸುತ್ತಾ ಕಡಲೆ ಅಳೆಯುವ ಕೊಳಗದ ಮೇಲೆ ತನ್ನ ಕಠಾರಿಯಿಂದ ತಾಳ ಕುಟ್ಟಿದ.

ನಂಜಸೆಟ್ಟಿಯ ಮಾತು ಕೇಳಿ, ಇನ್ನೂ ಒಬ್ಬಿಬ್ಬರು ಪಾಳೆಯಗಾರರಿಗೆ ತುಂಬ ಅವಮಾನವಾದ ಹಾಗಾಯಿತು. 'ಆ ತುಂಟ ಸೆಟ್ಟಿಯನ್ನು ಹಿಡಿದು ಬಂಧಿಸಿರಿ ! ಇವನ ಕಡಲೆಯ ರಾಸಿಯ ಮೇಲೆ 'ತಪ್ಪಾಯಿತು' ಎಂದು ಇವನ ಮೂಗಿನಿಂದ ಬರೆಸೋಣ ! ಇವನ ತಲೆ ಬೋಳಿಸಿ, ಅದರ ಮೇಲೆ ಸುಣ್ಣದ ಪಟ್ಟೆ ಬಳಿದು, ಕತ್ತೆಯ ಮೇಲೆ ಕೂರಿಸಿ, ಮೈಸೂರಿಗೆ ಮುಖ

ಮಾಡಿ ಆಟ್ಕೋಣ' ಎಂದು ತಲೆಗೊಂದು ಮಾತನಾಡುತ್ತಾ ಅವನನ್ನು ಹಿಡಿಯಲು ಬಂದರು.

ನಂಜಸೆಟ್ಟಿ ತನ್ನ ಕೊಳಗವನ್ನೂ ಕಠಾರಿಯನ್ನೂ ಬಿಸಾಟು, ಹತ್ತಿರ ಬಂದವನ ಎದೆಗೆ ಒದ್ದು ಅವನನ್ನು ಉರುಳಿಸಿದ. ಅವನ ಎರಡು ಬಾಯಿನ ಖಡ್ಗವನ್ನು ಎರಡೂ ಕೈಗಳಿಂದ ಎತ್ತಿ ಹಿಡಿದು ಪಟ್ಟಾವರಸೆ ತಿರುಗಿಸತೊಡಗಿದ. 'ಬನ್ನಿ ! ಮೃತ್ಯುವಿನ ಮನೆಗೆ ಯಾರು ಹೋಗಬಯಸುವಿರೋ ಬನ್ನಿ !' ಎಂದು ಅಬ್ಬರಿಸಿದ.

ಅವನ ಹತ್ತಿರ ಬರುವ ಧೈರ್ಯ ಯಾರಿಗೂ ಇರಲಿಲ್ಲ. ನಂಜಸೆಟ್ಟಿಯ ಕಡೆಯವರಿಗೂ ಪಾಳೆಗಾರರ ಕಡೆಯವರಿಗೂ ತುಮುಲಯುದ್ಧ ಆರಂಭವಾಯಿತು.

ಮುಂದೆ ಏನು ಪ್ರಮಾದವಾಗಬೇಕಾಗಿತ್ತೋ ! ಎಷ್ಟು ತಲೆ ಉರುಳಿ ಹೋಗಬೇಕಾಗಿತ್ತೋ ! ಅಷ್ಟು ಹೊತ್ತಿಗೆ ಶ್ರೀ ಚಾಮುಂಡೇಶ್ವರಿಯ ಕರುಣೆಯೋ ಬಂದ ಹಾಗೆ ಇಮ್ಮಡಿ ತಿಮ್ಮರಾಜ ಒಡೆಯರ ಸವಾರಿ ಬಂತು.

ಸವಾರಿಯ ಜೊತೆಗೆ ಬಂದ ಸೈನ್ಯವನ್ನು ಕಂಡು ಎರಡು ಪಕ್ಷದವರೂ ತಮ್ಮ ಜಗಳವನ್ನು ನಿಲ್ಲಿಸಿದರು. ದೂರ ದೂರ ನಿಂತರು. ತಾವು ಮಾಡಿದ ತಪ್ಪು ತಮಗೆ ತಿಳಿಯಿತು ಎಂಬ ಹಾಗೆ ಪಾಳೇಗಾರರು ತಲೆತಗ್ಗಿಸಿ ನಿಂತರು.

ಒಡೆಯರು ಅಲ್ಲಿ ನಡೆದದ್ದನ್ನು ಕೇಳಿ ತಿಳಿದರು. ಪಾಳೇಗಾರರ ಕಡೆ ತಿರುಗಿ ಹುಬ್ಬು ಗಂಟಿಕ್ಕಿದರು. ನಂಜಸೆಟ್ಟಿ ಮೈಸೂರಿನ ಮರ್ಯಾದೆಯನ್ನು ಹೇಗೆ ಎತ್ತಿಹಿಡಿದ ಎಂಬ ವಿವರವನ್ನು ಕೇಳಿ ಸಂತೋಷಪಟ್ಟರು. ರಾಜಭಕ್ತಿಯಿಂದ ನಂಜಸೆಟ್ಟಿ ಅಂದು ಕೊಟ್ಟ **'ಬಿರುದಂತೆಂಬರ ಗಂಡ'** ಎಂಬ ಬಿರುದನ್ನು ಪ್ರೀತಿಯಿಂದ ತಮ್ಮದನ್ನಾಗಿ ಮಾಡಿಕೊಂಡರು.

ಅಷ್ಟು ಹೊತ್ತಿಗೆ ಉಮ್ಮತ್ತೂರು ಪ್ರಭುಗಳ ರಾಣಿವಾಸದ ಸವಾರಿ ಅಲ್ಲಿಗೆ ಬಂತು. ಆಕೆಯ ಪರಿವಾರದವರು ತಮ್ಮ ಪ್ರಭುವಿನ ಬಿರುದುಗಳನ್ನು ಕೂಗುತ್ತ ಹೋದರು.

ಅವರ ಕೂಗು ಸರಿಯುತ್ತಿದ್ದ ಹಾಗೆಯೇ ನಮ್ಮ ನಂಜಸೆಟ್ಟಿ 'ಅಂತೆಂಬರ ಗಂಡ ಶ್ರೀಮನ್ಮಹೀಶೂರ ಪುರವರಾಧೀಶ್ವರ ಶ್ರೀಇಮ್ಮಡಿ ತಿಮ್ಮರಾಜ ಒಡೆಯ ಮಹಾಸ್ವಾಮಿಯವರಿಗೆ ಜಯವಾಗಲಿ !' ಎಂದು ಕೂಗಿದ.

ಅದನ್ನು ಕೇಳಿ ರಾಣಿಗೆ ಕೋಪ ಬಂತು. ಆಕೆಯ ಆಜ್ಞೆಯಂತೆ ನಂಜಸೆಟ್ಟಿಯನ್ನು ದಂಡಿಸಲು ಉಮ್ಮತ್ತೂರಿನ ಸೇನಾನಾಯಕ ಮುಂದುವರಿದಾಗ, ಅದೇ ಕಾರಣವಾಗಿ ಮತ್ತೊಂದು ಕಾಳಗ ಆರಂಭವಾಗುವುದರಲ್ಲಿತ್ತು. ಅದನ್ನು ತಡೆಯಬೇಕೆಂದು ಒಡೆಯರು ಒಳ್ಳೆಯ ಮಾತನಾಡಿದರು. ರಾಣಿ ಒಡೆಯರೊಡನೆ ದ್ವಂದ್ವಯುದ್ಧಕ್ಕೆ ಕತ್ತಿ ಹಿರಿದು ನಿಂತಳು. ಹೆಂಗಸೊಡನೆ ಹೋರಾಡಲು ಒಪ್ಪದೆ ಒಡೆಯರು ತಟಸ್ಥರಾದರು. ಒಡೆಯರ ತಲೆಯ ರುಮಾಲನ್ನು ರಾಣಿ ತನ್ನ ಕತ್ತಿಯಿಂದ ಹಾರಿಸಿ ಸುಮ್ಮನಾದಳು.

ಅಷ್ಟು ಹೊತ್ತಿಗೆ ಉಮ್ಮತ್ತೂರಿನ ಪಾಳೆಯಗಾರ ಅಲ್ಲಿಗೆ ಬಂದು, ನಡೆದ ವಿದ್ಯಮಾನಗಳನ್ನು ತಿಳಿದು, ಮುಂದೇನು ಮಾಡುವುದೆಂದು ತಿಳಿಯದೆ ನಿಂತ. 'ರಾಣಿ ನೆಲಕ್ಕೆ ಕೆಡವಿದ ರುಮಾಲನ್ನು ಪಾಳಯಗಾರನು ಎತ್ತಿ ತಮ್ಮ ತಲೆಗೆ ಧರಿಸಬೇಕು' ಎಂದ ಒಡೆಯರ ಮಾತಿಗೆ ಉಮ್ಮತ್ತೂರಿನವರು ಒಪ್ಪಲಿಲ್ಲ. ಅದರಿಂದ ಇಬ್ಬರಿಗೂ ಖಡ್ಗಯುದ್ಧ ನಡೆದು ಉಮ್ಮತ್ತೂರಿನವನು ಸೋತು, ಒಡೆಯರಿಗೆ ಕಪ್ಪಕಾಣಿಕೆ ಒಪ್ಪಿಸಿ, ತಾನು ಅವರಿಗೆ ಅಧೀನನಾದನು.

ವಿನಾಕಾರಣವಾಗಿ ನಂಜಸೆಟ್ಟಿ ಉಮ್ಮತ್ತೂರಿನ ರಾಣಿಯನ್ನು ಕೆಣಕಿದನೆಂದು ಒಡೆಯರಿಗೆ ಕೊಂಚ ಅಸಮಾಧಾನವಾಯಿತು. ಆದರೂ ಅವನ ರಾಜಭಕ್ತಿಯನ್ನು ಮೆಚ್ಚಿಕೊಂಡು, ಅವನು ಕೊಟ್ಟ '**ಬಿರುದಂತೆಂಬರ ಗಂಡ**' ಎಂಬ ಬಿರುದನ್ನು ಒಪ್ಪಿಸಿಕೊಂಡಂತೆಯೇ ನಂಜಸೆಟ್ಟಿಯ "**ಅಪ್ಪಣ್ಣ**" ಎಂಬ ಮನೆಯ ಮುದ್ದಿನ ಹೆಸರನ್ನೂ ತಾವು ಸ್ವೀಕರಿಸಿದರು. ಅಂದಿನಿಂದ ಅವರು '**ಅಪ್ಪಣ್ಣ ತಿಮ್ಮರಾಜ ಒಡೆಯ**'ರಾದರು.

[**ಆಧಾರ: ಸಂಸ.**]

೩. ಸುಗುಣಗಂಭೀರ

'ಬಿರುದಂತೆಂಬರ ಗಂಡ' ಎಂಬ ಅಪೂರ್ವವಾದ ಬಿರುದನ್ನು ಪಡೆದ 'ಅಪ್ಪಣ್ಣ' ತಿಮ್ಮರಾಜ ಒಡೆಯರ ಮಕ್ಕಳು ನಾಲ್ಕನೆಯ ಚಾಮರಾಜ ಒಡೆಯರು.

ಇವರು ಒಂದು ಸಲ ತಮ್ಮ ಮಂತ್ರಿಗಳೊಡನೆಯೂ ಪರಿವಾರದವರೊಡನೆಯೂ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿಯನ್ನು ದರ್ಶನಮಾಡಲು ಬೆಟ್ಟಕ್ಕೆ ಹತ್ತಿಹೋದರು.

'ಓಂ ಶ್ರೀಮಾತ್ರೇ ನಮಃ, ಓಂ ಶ್ರೀ ಮಹಾರಾಜ್ಞ್ಯೈ ನಮಃ, ಓಂ ಶ್ರೀಮತ್ ಸಿಂಹಾಸನೇಶ್ವರ್ಯೈ ನಮಃ, ಎಂದು ನಿಧಾನವಾಗಿ ಲಲಿತಾಸಹಸ್ರ ನಾಮವನ್ನು ಹೇಳಿಕೊಳ್ಳುತ್ತಾ ಒಂದೊಂದು ಹೆಸರಿಗೆ ಒಂದೊಂದು ಮೆಟ್ಟಿಲು ಏರುತ್ತಿದ್ದರು.

ಸುಮಾರು ನೂರು ಮೆಟ್ಟಿಲು ಹತ್ತಿರಬಹುದು. ಹಠಾತ್ತಾಗಿ ಸಿಡಿಲು ಬಡಿಯಿತು. ಸುತ್ತಲೂ ಕರಿಯ ಹೊಗೆ ವ್ಯಾಪಿಸಿತು. ಪರಿವಾರದವರು ವಿಕಾರವಾಗಿ ಕೂಗಿಕೊಳ್ಳುತ್ತ—'ಅಯ್ಯೋ! ಬುದ್ಧಿಯವರು! ಅಯ್ಯೋ! ಬುದ್ಧಿಯವರು!' ಎಂದು ಮೆಟ್ಟಿಲುಗಳಿಂದ ಕೆಳಗೆ ಉರುಳಿದರು.

ಮೈ ಮರೆತು ಮೂರ್ಛೆಬಿದ್ದವರಲ್ಲಿ ಮೊದಲು ಎಚ್ಚರಗೊಂಡವರು ಅರಮನೆಯ ವೃದ್ಧ ಮಂತ್ರಿ. ಏನಾಯಿತೆಂದು ಅವರಿಗೆ ಮೊದಲು ಅರ್ಥವಾಗಲಿಲ್ಲ. ಪರ್ವತ ಸಿಡಿಯಿತೊ? ಭೂಮಿ ಅದುರಿತೊ? ಬಿರುಗಾಳಿಗೆ ಉದುರುವ ತರಗೆಲೆಗಳಂತೆ ತಾವೆಲ್ಲ ತತ್ತರಿಸಿಬಿದ್ದದ್ದು ಏಕೆ?

ಕೊಂಚ ಹೊತ್ತಿನ ಮೇಲೆ ಅವರಿಗೆ ತಾವು ಬೆಟ್ಟ ಹತ್ತುತ್ತಿರುವಾಗ ಹಠಾತ್ತಾಗಿ ಸಿಡಿಲು ಎರಗಿತು ಎಂಬುದು ನೆನಪಾಯಿತು. ಕೂಡಲೆ ತಮಗೆ ಒಂದು ಹೆಜ್ಜೆ ಮುಂದೆ ನಡೆಯುತ್ತಿದ್ದ ಮಹಾರಾಜರ ನೆನಪಾಯಿತು.

ಪಕ್ಕದಲ್ಲಿ ಒಂದು ಕಡೆ ಮಹಾರಾಜರು ಮೈಯ ಮೇಲೆ ಪ್ರಜ್ಞೆಯಿಲ್ಲದೆ ನಿಶ್ಚೇಷ್ಟಿತರಾಗಿ ಮಲಗಿದ್ದರು. 'ಅತಿಸ್ನೇಹಃ ಪಾಪಶಂಕೀ!' ಮಹಾ

ರಾಜರು ಸಿಡಿಲಿಗೆ ತುತ್ತಾಗಿಹೋದರೆಂದು ಮಂತ್ರಿ ಗೋಳಾಡಿದರು.

'ಅಯ್ಯೋ! ಮೈಸೂರಿನ ಭಾಗ್ಯ ಹಾಳಾಗಿಹೋಯಿತು! ಶೌರ್ಯ ಔದಾರ್ಯ ಮೊದಲಾದ ಗುಣಗಳು ಲೋಕದಿಂದ ಮಾಯವಾದುವು. ಪುರುಷನ ಆಕಾರವನ್ನು ತಾಳಿ ಬಂದಿದ್ದ ದೈವಭಕ್ತಿ ಮುಕ್ತಿಯನ್ನು ಹೊಂದಿತು!' ಎಂದು ಮುಂದೇನು ಮಾಡಬೇಕೋ ತೋಚದೆ ಅವರು ಮಂಕಾಗಿ ಕುಳಿತರು.

ಅರಸರಿಗೆ ಆ ವರ್ಷ ಅಗ್ನಿಕಂಟಕ ಎಂದು ಜೋಯಿಸರು ಹೇಳಿದ್ದರು. ಆದಕ್ಕೆ ಮಾಡಿಸಬೇಕಾದ ಶಾಂತಿಕರ್ಮಗಳನ್ನು ಸಾಂಗವಾಗಿ ನಡಸಿಯಾಗಿತ್ತು. ಆದರೂ ಏಕೆ ಹೀಗಾಯಿತು?

ಅರಸರು, ತಮ್ಮ ಪೂರ್ವಿಕರು ಇದ್ದ ಹದಿನಾಡಿಂದ ಬಂದು ಈ ಹೊಸ ಪುರಗೆರೆಯನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡಿದ್ದರು. ಹೊಸ ರಾಜಧಾನಿಯನ್ನು ಪ್ರವೇಶಮಾಡಿದ ದಿವಸ ಅರಸರು ತಮ್ಮ ಪ್ರಜೆಗಳನ್ನು ಕುರಿತು, 'ಇನ್ನು ಮೇಲೆ ನೀವು ಅಮ್ಮನವರಿಗೆ ಕುರಿ ಕೋಳಿ ಕೋಣ ಮೊದಲಾದುವನ್ನು ಬಲಿಯಾಗಿ ಕೊಡಲಾಗದು. ಇದು ನಮ್ಮ ಕಟ್ಟಪ್ಪಣೆ. ಹೂವು ಹಣ್ಣು ಮೊದಲಾದ ಸಾತ್ತ್ವಿಕ ಸಾಮಗ್ರಿಗಳಿಂದ ಈ ದೇವಿ ಸಂತುಷ್ಟಳಾಗುತ್ತಾಳೆ, ಸುಪ್ರೀತಳಾಗುತ್ತಾಳೆ' ಎಂದಿದ್ದರು. ತನ್ನ ಎಂದಿನ ಜೀವಬಲಿ ತಪ್ಪಿಹೋಯಿತಲ್ಲಾ ಎಂದು ಕೋಪಗೊಂಡು, ಚಾಮುಂಡಿ ಅರಸರ ಪ್ರಾಣವನ್ನೇ ತಾನು ಆಹಾರವಾಗಿ ಕೊಂಡಳೋ? ಇನ್ನು ಮುಂದೆ ಮೈಸೂರಿನ ಪ್ರಜೆಗಳನ್ನು ಪಾಲಿಸುವವರು ಯಾರು?....

ಎಂದು ಅನೇಕವಾಗಿ ಚಿಂತಿಸುತ್ತ ವೃದ್ಧಮಂತ್ರಿ ಮೆಲ್ಲನೆ ಅರಸನ ಕಡೆ ತಿರುಗಿದರು. ಅವರ ಕಣ್ಣನ್ನು ಅವರೇ ನಂಬಲಾರದೆಹೋದರು! ಅರಸರ ಕೈಗಳಲ್ಲಿ ಏನೋ ಚಲನೆ ಗೋಚರವಾಯಿತು.

'ಸತ್ಯವಾಗಿಯೂ ಪರಮೇಶ್ವರನಿದ್ದಾನೆ. ಕುಲದೇವತೆಯಾದ ಚಾಮುಂಡಿಯ ಕರುಣೆ ಅಪಾರವಾದದ್ದು!' ಎಂದು ವೃದ್ಧಮಂತ್ರಿ ಸಂಭ್ರಮದಿಂದ ಎದ್ದರು. ಪಕ್ಕದಲ್ಲಿದ್ದ ದೊಣೆಯ ನೀರಿನಲ್ಲಿ ತಮ್ಮ ಉತ್ತರೀಯವನ್ನು ಅದ್ದಿ, ಅದರಿಂದ ಮಹಾರಾಜರ ಹಣೆಯನ್ನೂ ಕಣ್ಣುಗಳನ್ನೂ ಸವರಿದರು.

ಮಹಾರಾಜರಿಗೆ ತಲೆಯ ತುಂಬ ಕೂದಲಿತ್ತು. ಅದು ಈಗ ಸಿಡಿಲು ಹೊಡೆದದ್ದರಿಂದ ಸುಟ್ಟುಹೋಗಿ, ತಲೆ ಬೋಳಾಗಿತ್ತು. ಅಂತೆಯೇ ಹುಬ್ಬು

ಕೈ ಕಾಲುಗಳ ಕೂದಲೂ ಸುಟ್ಟುಹೋಗಿದ್ದುವು. ಇದು ಹೊರತು ಅರಸರಿಗೆ ಇನ್ನೇನೂ ಗಾಸಿ ಆಗಿರಲಿಲ್ಲ.

ಸಿಡಿಲು ಹೊಡೆದದ್ದು ಅರಸರಿಗೆ ಮಾತ್ರ ! ಅದರ ಸುಳುವಿನ ಸೋಂಕಿನಿಂದ ಉಳಿದವರೆಲ್ಲ ಮೂರ್ಛೆ ಬಿದ್ದಿದ್ದರು. ಅರಸರ ಮೈಯ ಕೂದಲು ಸಿಡಿಲಿನ ಅಗ್ನಿಗೆ ಆಹುತಿ ಆಯಿತೆ ಹೊರತು, ಅರಸರಿಗಾಗಲಿ ಅವರ ಪರಿವಾರದವರಿಗಾಗಲಿ ಅದರಿಂದ ಏನೂ ಪ್ರಾಣಾಪಾಯವಾಗಿರಲಿಲ್ಲ.

ಅರಸರು ಎದ್ದರು. ಮೈಯ ದೂಳನ್ನು ಒರಸಿಕೊಂಡರು. ಚಾಮುಂಡಿಯನ್ನು ಧ್ಯಾನಿಸಿದರು. ಕೈ ಮುಗಿದರು. ಲಲಿತಾಸಹಸ್ರನಾಮವನ್ನು ಮುಂದುವರಿಸುತ್ತ ಬೆಟ್ಟವನ್ನು ಹತ್ತಿ ಹೋದರು.

ಅಂದಿನಿಂದ ಈ ಅರಸರಿಗೆ **'ಬೋಳ ಚಾಮರಾಜ ಒಡೆಯರು'** ಎಂದು ಹೆಸರಾಯಿತು.

ಈ ಒಡೆಯರು ಮೈಸೂರನ್ನು ಆಳುತ್ತಿರುವಾಗ ರೇಮಟಿ ವೆಂಕಟಾದ್ರಿ ನಾಯಕ ಎಂಬಾತ ತೊರೆಮಾವಿನ ಹಳ್ಳಿಗೆ ಒಡೆಯನಾಗಿದ್ದ. ಆತ ವಿಜಯನಗರದ ಪ್ರತಿಸಿದ್ಧಿಯಾದ ರಾಮರಾಜಯ್ಯನ ದಳವಾಯಿ. ಒಳ್ಳೆಯ ವಂಶದಲ್ಲಿ ಹುಟ್ಟಿದವ, ವೀರ, ಧೀರ, ಉದಾರಿ. ಆತನ ಬಿರುದುಗಳಲ್ಲಿ **'ಸುಗುಣಗಂಭೀರ'** ಎಂಬುದು ಒಂದು.

ವೆಂಕಟಾದ್ರಿ ನಾಯಕನಿಗೆ ಇಬ್ಬರು ಗಂಡುಮಕ್ಕಳು, ಒಬ್ಬಳು ಹೆಣ್ಣುಮಗಳು. ಆಕೆಯ ಹೆಸರು ಅಂಬಿಕೆ. ದೇವಕನ್ಯೆಯಂತೆ ಚೆಲುವೆ, ತಂದೆಯಂತೆ ಗುಣಾಢ್ಯೆ. ಈ ಮಗಳನ್ನು ಮೈಸೂರಿನ ಒಡೆಯರ ಮಗನಿಗೆ ಕೊಡಬೇಕೆಂಬ ವೆಂಕಟಾದ್ರಿನಾಯಕನ ಆಸೆ.

ಬೋಳ ಚಾಮರಾಜ ಒಡೆಯರ ಹಿರಿಯ ಮಕ್ಕಳು ಬೆಟ್ಟದ ಚಾಮರಾಜ ಒಡೆಯರು. ಅವರು ರೂಪದಲ್ಲಿ ಶ್ರೀರಾಮನಂತೆ, ಬಲದಲ್ಲಿ ಬಲರಾಮನಂತೆ, ಸಾಹಸದಲ್ಲಿ ಪರಶುರಾಮನಂತೆ. ಅವರ ಅಚ್ಚುಮೆಚ್ಚಿನ ಆಯುಧ ಗಂಡುಗೊಡಲಿ.

ಅಂಬಿಕೆಯ ಗುಣ ಶೀಲ ಸೌಂದರ್ಯಗಳು ಮೈಸೂರು ಅರಮನೆಯವರಿಗೆ ತಿಳಿದಿತ್ತು. ಬೆಟ್ಟದ ಒಡೆಯರ ರೂಪ ಬಲ ಸಾಹಸಗಳು ತೊರೆಮಾವಿನ ಹಳ್ಳಿಯ ನಾಯಕರ ಮನೆಗೆ ತಿಳಿದಿತ್ತು. ವಧೂವರರಲ್ಲಿ ಪರಸ್ಪರವಾಗಿ ಅನು

ರಾಗ ಅಂಕುರಿಸಿತ್ತು. ಲಗ್ನಪತ್ರಿಕೆಯಿಟ್ಟು, ಮದುವೆಯಾಗುವುದೊಂದು ಉಳಿದಿತ್ತು.ಆದರೆ, ವಿಧಿ ಅವರ ಬೆನ್ನ ಹಿಂದೆ ವಿಕಟವಾಗಿ ನಗುತ್ತಿತ್ತು.

ಅಂಬಿಕೆಯ ಅಣ್ಣ ಭಾಮನಾಯಕ. ಅವನು ತೊರೆಮಾವಿನ ಹಳ್ಳಿಯ ತೇಜಸ್ವಿನಿಯೆಂಬವಳನ್ನು ಪ್ರೀತಿಸಿದ. ಆದರೆ ತೇಜಸ್ವಿನಿಗೆ ಮದುವೆಯಾಗಿತ್ತು. ಆಕೆ ತನ್ನ ಪತಿಗೆ ದ್ರೋಹಮಾಡಲು ಒಪ್ಪಲಿಲ್ಲ. ಭಾಮನಾಯಕ ತನ್ನ ಆಶೆ ಕೈಗೂಡಲಿಲ್ಲವೆಂದು ಕ್ರುದ್ಧನಾಗಿ ಒಂದು ರಾತ್ರಿ ತೇಜಸ್ವಿನಿಯ ಗಂಡನನ್ನೂ ಮುದಿ ಅತ್ತೆಯನ್ನೂ ಕೊಂದುಹಾಕಿದ. ಆದರೂ ತೇಜಸ್ವಿನಿ ಅವನಿಗೆ ವಶವಾಗಲಿಲ್ಲ. ಎಲ್ಲಿಯೋ ತಲೆತಪ್ಪಿಸಿಕೊಂಡು ಮರೆಯಾದಳು.

ಅಂಬಿಕೆಗೂ ಬೆಟ್ಟದ ಒಡೆಯರಿಗೂ ನಿಶ್ಚಿತಾರ್ಥ ನಡೆಯುವ ದಿವಸ, ತೇಜಸ್ವಿನಿ ಸನ್ಯಾಸಿಯ ವೇಷದಲ್ಲಿ ಬಂದು, ವೆಂಕಟಾದ್ರಿನಾಯಕನ ವಂಶವು ನರಹತ್ಯೆಯ ಪಾಪದಿಂದ ಕಳಂಕಿತವಾಗಿದೆಯೆಂದು ತಿಳಿಸಿ, ಮದುವೆಯನ್ನು ನಿಲ್ಲಿಸಿದಳು.

ಇದರಿಂದ ಮೈಸೂರಿನ ಒಡೆಯರಿಗೂ ತೊರೆಮಾವಿನ ಹಳ್ಳಿಯ ಒಡೆಯರಿಗೂ ವೈಮನಸ್ಯವುಂಟಾಯಿತು. ಮೈಸೂರಿನ ಒಡೆಯರು ತೊರೆಮಾವಿನ ಹಳ್ಳಿಯ ಮೇಲೆ ದಂಡೆತ್ತಿ ಹೋದರು.

ಘೋರವಾದ ಯುದ್ಧ ನಡೆಯಿತು. ಯುದ್ಧವನ್ನು ನಿಲ್ಲಿಸಬೇಕೆಂಬ ಪ್ರಯತ್ನದಲ್ಲಿ ಅಂಬಿಕೆ ರಣರಂಗದಲ್ಲಿ ಮಡಿದಳು. ತಂಗಿಯ ಮರಣದ ಸೇಡನ್ನು ತೀರಿಸುತ್ತೇನೆಂದು ಭಾಮನಾಯಕನು ಬೆಟ್ಟದ ಒಡೆಯರೊಡನೆ ಹೋರಾಡಿ ಪ್ರಾಣ ಬಿಟ್ಟ.

ಮಕ್ಕಳನ್ನು ಹೀಗೆ ಕಳೆದುಕೊಂಡ ಮುದಿ ವೆಂಕಟಾದ್ರಿನಾಯಕ 'ಇನ್ನು ಯಾರಿಗಾಗಿ ನಾನು ಯುದ್ಧಮಾಡಬೇಕು' ಎಂದು ವೈರಾಗ್ಯದಿಂದ ತನ್ನ ದುರ್ಗ ಪಲ್ಲಕ್ಕಿ ದಾಳ ದಮಾಣ ಬಿರುದು ಬಾವಲಿಗಳನ್ನು ಮೈಸೂರಿನ ಒಡೆಯರಿಗೆ ಒಪ್ಪಿಸಿ ತಾನು ಕಾಶಿಗೆ ಹೊರಟುಹೋದ.

ಹೀಗೆ ಮೈಸೂರಿನ ಒಡೆಯರಿಗೆ **'ಸುಗುಣಗಂಭೀರ'** ಎಂಬ ಬಿರುದು ಸಂಪಾದನೆಯಾಯಿತು.

[ಆಧಾರ : ಸಂಸ]

೪. ಬೆಟ್ಟದ ಒಡೆಯರು

'ಸುಗುಣ ಗಂಭೀರ' ಎಂದು ಹೆಸರಾದ ಬೋಳ ಚಾಮರಾಜ ಒಡೆಯರ ಮಕ್ಕಳಲ್ಲಿ ಬೆಟ್ಟದ ಚಾಮರಾಜ ಒಡೆಯರು ಹಿರಿಯರು. ಚರಿತ್ರೆಯಲ್ಲಿ ಇವರು 'ಬೆಟ್ಟದ ಒಡೆಯರು' ಎಂದು ಪ್ರಸಿದ್ಧರಾಗಿದ್ದಾರೆ.

ಇವರು ದೇಹಬಲಸಂಪನ್ನರೂ ಅಪ್ರತಿಮ ಧೀರರೂ ಆಗಿದ್ದರು. ಇವರ ಮೈ ಮನಸ್ಸು ಎಷ್ಟು ಗಟ್ಟಿಯೋ ಇವರ ಹೃದಯ ಅಷ್ಟೇ ಮೃದು. ಯಾರ ಕಷ್ಟಕ್ಕಾದರೂ ಬೇಗ ಕರಗಿಬಿಡುವರು. ಯಾವ ಕೆಲಸವಾದರೂ ಮುಂದಾಲೋಚನೆ ಇಲ್ಲದೆ ದುಡುಕಿಬಿಡುವರು.

ಎರಡು ವರ್ಷ ಇವರು ರಾಜ್ಯವಾಳುವ ವೇಳೆಗೆ ಬೊಕ್ಕಸದಲ್ಲಿದ್ದ ಹಣವೆಲ್ಲಾ ಖರ್ಚಾಗಿಹೋಯಿತು. ಶ್ರೀರಂಗಪಟ್ಟಣಕ್ಕೆ ಕೊಡಬೇಕಾಗಿದ್ದ ಪೊಗದಿ ಹಾಗೇ ನಿಂತುಹೋಯಿತು.

ಅರಮನೆಯ ಮಂತ್ರಿಗಳೂ ಹಿರಿಯರೂ ಏನು ಮಾಡುವುದೆಂದು ಯೋಚನೆ ಮಾಡಿದರು. 'ರಾಜ್ಯ ಇವರ ಕೈಯಲ್ಲೇ ಉಳಿದರೆ, ನಾವು ಸಾಲಗಾರರಾಗುತ್ತೇವೆ, ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೇವೆ. ಏನು ಮಾಡೋಣ !' ಎಂದು ಚಿಂತಿಸಿದರು.

'ಬೆಟ್ಟದ ಒಡೆಯರ ತಮ್ಮಂದಿರು ರಾಜ ಒಡೆಯರು. ಅವರು ಪರಾಕ್ರಮಿಗಳು, ಗುಣಾಢ್ಯರು. ಇವರಿಗಿಂತ ಅವರಿಗೆ ಮುಂದಾಲೋಚನೆ ಹೆಚ್ಚು, ತಾಳ್ಮೆ ಹೆಚ್ಚು. ಆದ್ದರಿಂದ ಬೆಟ್ಟದ ಒಡೆಯರು ರಾಜ ಒಡೆಯರಿಗೆ ಪಟ್ಟವನ್ನು ಬಿಟ್ಟುಕೊಡಲಿ. ಊರಿನ ವರ್ತಕರಿಂದ ಸಾಲವನ್ನೆತ್ತಿ ನಾವು ತೀರಿಸಬೇಕಾದ್ದನ್ನು ಮೊದಲು ತೀರಿಸೋಣ. ಅನಂತರ ನಿಧಾನವಾಗಿ ವರ್ತಕರ ಸಾಲವನ್ನು ತೀರಿಸಿದರಾಯಿತು' ಎಂದು ಅವರು ಮಾತಾಡಿಕೊಳ್ಳುತ್ತಿರುವಾಗ ಸ್ವಯಂ ಬೆಟ್ಟದ ಒಡೆಯರೇ ಅಲ್ಲಿಗೆ ಬಂದರು.

ಸಭೆಯ ಹಿರಿಯರು ತಮ್ಮ ತೀರ್ಮಾನವನ್ನು ಬೆಟ್ಟದ ಒಡೆಯರಿಗೆ ವಿನಯದಿಂದ ಅರಿಕೆ ಮಾಡಿಕೊಂಡರು. 'ಈ ಕಾರಣಕ್ಕೋಸ್ಕರವಾಗಿ ನಾವು

ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ. ಹೀಗೆ ಮಾಡದೆ ಹೋದರೆ ದೇಶದ ಸಾಲವನ್ನು ತೀರಿಸಲು ಬೇರೆ ಮಾರ್ಗವೇ ಇಲ್ಲ. ಇದರಿಂದ ತಮ್ಮ ಮನಸ್ಸಿಗೆ ಬೇಸರವಾಗಬಾರದು. ತಾವು ರಾಜ ಒಡೆಯರಿಗೆ ಆಡಳಿತವನ್ನು ವಹಿಸಿಕೊಟ್ಟು, ಮೈಸೂರಿನಲ್ಲಿ ಸ್ವತಂತ್ರವಾಗಿ ಇರಬಹುದು; ಅಥವಾ ಮೈಸೂರಿನ ರಾಜಪ್ರತಿನಿಧಿಯಾಗಿ ಶ್ರೀರಂಗಪಟ್ಟಣದ ಆಸ್ಥಾನದಲ್ಲಿ ಇರ ಬಹುದು' ಎಂದು ಸೂಚಿಸಿದರು.

ಬೆಟ್ಟದ ಒಡೆಯರಿಗೆ ಅವರ ಸೂಚನೆ ಹಿಡಿಸಲಿಲ್ಲ. 'ನಾವು ಮೈಸೂರಿ ನಲ್ಲೂ ನಿಲ್ಲುವುದಿಲ್ಲ, ಶ್ರೀರಂಗಪಟ್ಟಣಕ್ಕೂ ಹೋಗುವುದಿಲ್ಲ. ಯಾರಿಗೆ ಬೇಕೋ ಅವರಿಗೆ ಪಟ್ಟ ಕಟ್ಟಿಕೊಳ್ಳಿ' ಎಂದು ಕೋಪದಿಂದ ಅಲ್ಲಿ ನಿಲ್ಲದೆ ಹೊರಟುಹೋದರು.

ಬೆಟ್ಟದ ಒಡೆಯರ ಮನಸ್ಸು ರಾಜ್ಯದ ವಿಷಯದಲ್ಲಿ ಅನಾಸಕ್ತವಾ ಯಿತು ಎಂಬುದು ಕ್ರಮೇಣ ಎಲ್ಲರಿಗೂ ತಿಳಿಯಿತು. ನೆರೆಯವನಾದ ಕಾರು ಗಳ್ಳಿಯ ಪಾಳೆಯಗಾರ ಮೈಸೂರನ್ನು ಕಬಳಿಸಬೇಕೆಂದು ಬಹಳ ದಿನದಿಂದ ಕಾದಿದ್ದ. ಬೆಟ್ಟದ ಒಡೆಯರ ಭಯದಿಂದ ಸುಮ್ಮನಿದ್ದ. ಆದರೆ ಈಗ ಅವರು ದೂರವಾಗಿ, ಅನುಭವ ಸಾಲದ ರಾಜ ಒಡೆಯರನ್ನು ಸುಲಭವಾಗಿ ಸೋಲಿಸಿಬಿಡಬಹುದೆಂದು ಅವನು ಮೈಸೂರಿನ ಮೇಲೆ ದಂಡೆತ್ತಿ ಬಂದ.

ಹೀಗೆ ಅವನು ಮೈಸೂರಿಗೆ ಮುತ್ತಿಗೆ ಹಾಕಿದಾಗ ಬೆಟ್ಟದ ಒಡೆಯರು ಮೈಸೂರಿಗೂ ತಮಗೂ ಏನೂ ಸಂಬಂಧವಿಲ್ಲ ಎಂಬಂತೆ ಒಂದು ಕಡೆ ಶತಪಥ ತಿರುಗುತ್ತಿದ್ದರು. ಸುದ್ದಿ ಕಿವಿಗೆ ಬಿದ್ದರೂ ಕೇಳಿಸದಂತೆ ಸುಮ್ಮನಿದ್ದರು.

ಕೋಟೆಯ ಒಳಗಡೆ ಪ್ರಜೆಗಳ ಹಾಹಾಕಾರ, ಕೋಟೆಯ ಹೊರಗಡೆ ಶತ್ರು ಸೈನ್ಯದ ಅಬ್ಬರ. ಹೇಳುವವರಿಲ್ಲ. ಕೇಳುವವರಿಲ್ಲ.

ಆಗ ಯಾರೋ ಹೆಂಗಸು ಬೆಟ್ಟದ ಒಡೆಯರ ಹತ್ತಿರ ಬಂದು, 'ಬುದ್ಧಿ ಯವರು ಒಡೆಯರ ವಂಶದಲ್ಲಿ ಹುಟ್ಟಿದ್ದು ಸಾರ್ಥಕವಾಯಿತು ! ಶತ್ರುಗಳು ಊರನ್ನು ಸೂರೆಹೊಡೆಯುವುದಕ್ಕೆ ಬಂದಿರುವಾಗ ನೀವು ಹೀಗೆ ಶತಪಥ ತಿರುಗುತ್ತಿದ್ದೀರಲ್ಲ ! ಸಾರ್ಥಕವಾಯಿತು ! ನಾನಾದರೂ ಗಂಡುಸಾಗಿದ್ದಿದ್ದರೆ ಯುದ್ಧಕ್ಕೆ ಹೋಗಿ ಪ್ರಾಣ ಕೊಟ್ಟು ಬರುತ್ತಿದ್ದೆ' ಎಂದು ಹಂಗಿಸಿದಳು.

ಒಡೆಯರಿಗೆ ಚುಚ್ಚಿ ತಿವಿದಂತಾಯಿತು. ಹಳೆಯ ದಿನಗಳು ಜ್ಞಾಪಕ ಬಂತು. ತಮ್ಮನ್ನು ಪಟ್ಟದಿಂದ ತಳ್ಳಿದರಲ್ಲಾ ಎಂಬ ಅಸಮಾಧಾನ ಮರೆಯಾಯಿತು. ಕೂಡಲೆ ತಮಗೆ ಅತ್ಯಂತ ಪ್ರಿಯವಾದ ಗಂಡುಗೊಡಲಿಯನ್ನು ಹೆಗಲೇರಿಸಿಕೊಂಡು, ಶತ್ರುಗಳು ಮುತ್ತಿದ್ದ ಕಡೆಗೆ ನುಗ್ಗಿದರು.

ಕೊಡಲಿಯನ್ನು ಎತ್ತಿ ಬಂದ ಒಡೆಯರನ್ನು ಕಂಡ ಕೂಡಲೆ ಮೈಸೂರಿನ ಸೈನ್ಯಕ್ಕೆ ಹೊಸ ಜೀವ ಬಂದಹಾಗಾಯಿತು. ಆವೇಶ ಬಂದವರಂತೆ ಒಡೆಯರನ್ನು ಹಿಂಬಾಲಿಸಿದರು.

ಶತ್ರುಗಳು ಒಳಗೆ ಬಾರದಂತೆ ತಡೆಯುವುದಕ್ಕಾಗಿ ಕೋಟೆಯ ಹೆಬ್ಬಾಗಿಲನ್ನು ಮುಚ್ಚಿದ್ದರು. ಬೆಟ್ಟದ ಒಡೆಯರು ಒಂದು ಸಲ ಕೊಡಲಿಯನ್ನು ಬೀಸಿದರು ; ಹೆಬ್ಬಾಗಿಲು ಇಬ್ಭಾಗವಾಯಿತು. ಮೈಸೂರಿನ ಸೈನ್ಯ ಹೀಗೆ ನುಗ್ಗುವುದೆಂದು ಕಾರುಗಹಳ್ಳಿಯವರು ನಿರೀಕ್ಷಿಸಿರಲಿಲ್ಲ. ಬಾಳೆಯತೋಟಕ್ಕೆ ಕಾಡಾನೆ ನುಗ್ಗಿದ ಹಾಗೆ ನುಗ್ಗಿ ಬೆಟ್ಟದ ಒಡೆಯರು ಶತ್ರುಗಳನ್ನು ಸೋಲಿಸಿ ಓಡಿಸಿದರು. ಮೈಸೂರು ಉಳಿಯಿತು.

ಕಾರುಗಹಳ್ಳಿಯ ಈ ಪ್ರಕರಣವಾದ ಮೇಲೆ ಬೆಟ್ಟದ ಒಡೆಯರು ಇನ್ನೂ ಕೆಲವರು ಮದಿಸಿದ ಪಾಳಯಗಾರರನ್ನು ಅಡಗಿಸಿ ಅವರನ್ನು ರಾಜ ಒಡೆಯರಿಗೆ ಅಧೀನರನ್ನಾಗಿ ಮಾಡಿದರು.

ಹೀಗೆ ರಾಜ ಒಡೆಯರ ಪ್ರಾಬಲ್ಯ ಹೆಚ್ಚುತ್ತಿದ್ದುದನ್ನು ನೋಡಿ, ಶ್ರೀರಂಗಪಟ್ಟಣದ ಅಧಿಕಾರಿಗೆ ಅಸೂಯೆಯಾಯಿತು. ಮೈಸೂರಿನ ಬಳಿಯಿದ್ದ ಕೆಸರೆ ಎಂಬ ಕೋಟೆಯನ್ನು ಮುತ್ತಿ ಹಿಡಿಯುವಂತೆ ಒಂದು ಸೈನ್ಯವನ್ನು ಕಳಿಸಿದ. ಕಾಲು ಕೆರೆದುಕೊಂಡು ಬಂದ ಆ ಸೈನ್ಯವನ್ನು ಬೆಟ್ಟದ ಒಡೆಯರು ಎದುರಿಸಿದರು. ವೀರಾವೇಶದಿಂದ ಯುದ್ಧಮಾಡಿ ಸೋಲಿಸಿದರು. ಆ ಕಾಳಗದಲ್ಲಿ ತಮಗೆ ಕೈವಶವಾದ ಒಂದು ಆನೆಯನ್ನು ತಂಮ ರಾಜ ಒಡೆಯರಿಗೆ ಒಪ್ಪಿಸಿದರು.

ಯುದ್ಧದಿಂದ ಸಾಧಿಸಲಾಗದುದನ್ನು ತಂತ್ರದಿಂದ ಸಾಧಿಸಬೇಕೆಂದು ಶ್ರೀರಂಗಪಟ್ಟಣದವನು ಹೂಟ ಹೂಡಿದ. ಸ್ವಾರ್ಥಿಗಳಾದ ಕೆಲವರು ಅರಮನೆಯಲ್ಲಿ ಸೇರಿಕೊಂಡು, ಬೆಟ್ಟದ ಒಡೆಯರ ಹತ್ತಿರ ರಾಜಒಡೆಯ ಮೇಲೂ

ರಾಜ ಒಡೆಯರ ಹತ್ತಿರ ಬೆಟ್ಟದ ಒಡೆಯರ ಮೇಲೂ ಚಾಡಿಮಾತುಗಳನ್ನು ಆಡುತ್ತ ಅವರಿಬ್ಬರಿಗೂ ವೈಮನಸ್ಯವನ್ನು ಉಂಟುಮಾಡಿದರು.

ಕಡೆಗೆ, ಬೆಟ್ಟದ ಒಡೆಯರಿಗೆ ತುಂಬ ಬೇಜಾರಾಗಿ ಅವರು ಮೈಸೂರನ್ನು ಬಿಟ್ಟು ಶ್ರೀರಂಗಪಟ್ಟಣದಲ್ಲಿ ಆಶ್ರಯ ಪಡೆದರು. ಅವರು ಬಂದದ್ದರಿಂದ ಅಲ್ಲಿನ ರಾಯನಿಗೆ ಬಲ ಬಂತು. ಅವನ ಅಧಿಕಾರ ಭದ್ರವಾಯಿತು.

ಆಗಲೂ ಚಾಡಿಕೋರರು ಸುಮ್ಮನಿರಲಿಲ್ಲ. 'ಶ್ರೀರಂಗಪಟ್ಟಣದವರ ಸಹಾಯವನ್ನು ಪಡೆದು ಬೆಟ್ಟದ ಒಡೆಯರು ಮೈಸೂರನ್ನು ಮುತ್ತಬೇಕೆಂದಿದ್ದಾರೆ' ಎಂದು ರಾಜ ಒಡೆಯರ ಕಿವಿಯಲ್ಲಿ ಊದಿದರು.

ರಾಜ ಒಡೆಯರು ಅದನ್ನು ನಂಬಿದರು. ಬೆಟ್ಟದ ಒಡೆಯರು ಏಕಾಕಿಯಾಗಿ ತಿರುಗಾಡುತ್ತಿದ್ದ ಹೊತ್ತು ನೋಡಿ, ಹತ್ತಾರು ಜೆಟ್ಟಿಗಳ ಸಹಾಯದಿಂದ ಅವರನ್ನು ಹಿಡಿಸಿದರು. ಬೆಟ್ಟದ ಒಡೆಯರನ್ನು ಪುನಃ ತಮ್ಮ ಕಡೆಗೆ ಒಲಿಸಿಕೊಳ್ಳಬೇಕೆಂದು ರಾಜ ಒಡೆಯರು ಪ್ರಯತ್ನಿಸಿದರು. ಆದರೆ ಅಣ್ಣನ ಮನಸ್ಸು ತಮ್ಮನ ವಿಷಯವಲ್ಲಿ ಪ್ರಸನ್ನವಾಗಲಿಲ್ಲ.

ಈ ಮಧ್ಯೆ ರಾಜಒಡೆಯರ ನೆಂಟನೊಬ್ಬ 'ಬೆಟ್ಟದ ಒಡೆಯರ ಕಣ್ಣನ್ನು ಕೀಳಿಸಿದರೆ ರಾಜಒಡೆಯರಿಗೆ ಸಂತೋಷವಾಗುತ್ತದೆ' ಎಂದು ಭ್ರಮಿಸಿ, ಆ ಅಕಾರ್ಯವನ್ನು ಮಾಡಲು ಕಟುಕರನ್ನು ನೇಮಿಸಿದ. ಆದರೆ ರಾಜ ಒಡೆಯರಿಗೆ ಅದು ಗೊತ್ತಾಗಿ, ಕೂಡಲೆ ಆ ನಂಟನನ್ನು ಕರಸಿ ಅವನನ್ನು ದಂಡಿಸಿದರು.

ಅನಂತರ ಬೆಟ್ಟದ ಒಡೆಯರನ್ನು ಕುರಿತು, 'ಅಣ್ಣಾ, ನೀವು ಇಲ್ಲಿ ಇದ್ದರೆ, ನಿಮ್ಮ ಜೀವಕ್ಕೆ ಅಪಾಯವುಂಟು. ಆದ್ದರಿಂದ ಬೇರೆಲ್ಲಿಯಾದರೂ ಸುರಕ್ಷಿತವಾದ ಸ್ಥಳಕ್ಕೆ ಹೋಗುವುದು ವಾಸಿ' ಎಂದು ಪ್ರಯಾಣಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಿದರು.

ಆಗ ಬೆಟ್ಟದ ಒಡೆಯರು ಮೈಸೂರನ್ನು ಬಿಟ್ಟು ಹೋಗಿ, ರಂಗಸಮುದ್ರವೆಂಬ ಹಳ್ಳಿಯಲ್ಲಿ ತಮ್ಮ ಹೆಂಡಿರು ಮಕ್ಕಳೊಡನೆ ನೆಲಸಿದರು.

[ಆಧಾರ : ವಿಲ್ಕ್ಸ್.]

೫. ರಾಜ ಒಡೆಯರು

ಬೆಟ್ಟದ ಚಾಮರಾಜ ಒಡೆಯರಾದ ಮೇಲೆ ಅವರ ತಮ್ಮಂದಿರಾದ ರಾಜ ಒಡೆಯರು ಮೈಸೂರನ್ನು ಆಳಿದರು.

ಆ ಕಾಲದಲ್ಲಿ ಅವರ ಜ್ಞಾತಿಯಾದ ವೀರಾಜಯ್ಯ ಎಂಬವನು ಕಾರುಗಹಳ್ಳಿಗೆ ಪಾಳಯಗಾರನಾಗಿದ್ದನು. ಅವನಿಗೆ ಗುಣ ಕಡಮೆಯಾಗಿದ್ದರೂ ಗರ್ವ ಬಹಳ ಇತ್ತು.

ಒಂದು ಸಲ ಒಡೆಯರು ಶ್ರೀಕಂಠೇಶ್ವರಸ್ವಾಮಿಗೆ ರಥೋತ್ಸವ ನಿಮಿತ್ತ ಮೈಸೂರಿಂದ ನಂಜನಗೂಡಿಗೆ ಹೋಗುತ್ತಿದ್ದರು. ಆಗ ವೀರಾಜಯ್ಯನು ದುಷ್ಟರ ಬೋಧನೆಗೆ ಒಳಗಾಗಿ, 'ಇವರಿಗಿಂತ ನಾನು ಏನು ಕಡಮೆ?' ಎಂದುಕೊಂಡು, ಪಲ್ಲಕ್ಕಿಯಲ್ಲಿ ಕುಳಿತು ಮೆರೆಯುತ್ತ ಬಂದ. ಓಲಗ, ತಾಳಮೇಳ ಸಮೇತನಾಗಿ ತನಗೆ ಇಲ್ಲದ ಬಿರುದುಗಳನ್ನು ಹೊಗಳಿಸಿಕೊಳ್ಳುತ್ತ ಬಂದ.

ಒಡೆಯರ ಸೇನೆಯವರು ಅವನ ಅಟ್ಟಹಾಸವನ್ನು ನೋಡಿದರು. 'ನಮ್ಮ ಅರಸರ ಎದುರಿಗೆ ಪಲ್ಲಕ್ಕಿ ಏರಿ ಬರಲು ಇವನು ಎಷ್ಟರವನು!' ಎಂದು ಅವನ ಪಲ್ಲಕ್ಕಿಯನ್ನು ಕಿತ್ತುಕೊಂಡು, ಅವನ ಪರಿವಾರದವರನ್ನು ಹೊಡೆದು ಓಡಿಸಿದರು. ವೀರಾಜಯ್ಯ ಅವರೊಂದಿಗೆ ಯುದ್ಧಮಾಡಲಾರದೆ ಸೋತು ಓಡಿದ.

ತನಗೆ ಆದ ಅವಮಾನಕ್ಕೆ ಏನು ಪ್ರತೀಕಾರ ಮಾಡುವುದೆಂದು ವೀರಾಜಯ್ಯ ತನ್ನ ದುಷ್ಟಮಿತ್ರರೊಡನೆ ಆಲೋಚನೆ ಮಾಡಿದ.

ಅವರಲ್ಲಿ ಒಬ್ಬ ಹೇಳಿದ: 'ರಾಜ ಒಡೆಯರು ಪ್ರತಿನಿತ್ಯವೂ ಮೈಸೂರಲ್ಲಿ ಇರುವ ಲಕ್ಷ್ಮೀರಮಣ ಸ್ವಾಮಿಯ ದೇವಸ್ಥಾನಕ್ಕೆ ಹೋಗಿ ತೀರ್ಥಪ್ರಸಾದ ತೆಗೆದುಕೊಳ್ಳುತ್ತಾರೆ. ಆ ದೇವಸ್ಥಾನದ ಅರ್ಚಕನಾದ ಶ್ರೀನಿವಾಸಯ್ಯ ನನಗೆ ಗೊತ್ತು. ಹಣ ಕೊಟ್ಟರೆ, ಅವನು ಏನು ಬೇಕಾದರೂ ಮಾಡುತ್ತಾನೆ. ಅವನ ಮೂಲಕ ದೇವರ ತೀರ್ಥಕ್ಕೆ ವಿಷ ಸೇರಿಸಿ ರಾಜ ಒಡೆ

ಯರಿಗೆ ಕುಡಿಸಿಬಿಡೋಣ. ಅಲ್ಲಿಗೆ ಆ ಪೀಡೆ ಪರಿಹಾರವಾಗಿಹೋಗುತ್ತದೆ.'

ಅವನ ಉಪಾಯವನ್ನು ಎಲ್ಲರೂ ಒಪ್ಪಿದರು. ಶ್ರೀನಿವಾಸಯ್ಯನಿಗೆ ಹೇಳಿಕಳಿಸಿದರು. ಅವನು ಬಂದ. ವೀರರಾಜಯ್ಯನಿಗೆ ಅವನಿಂದ ಏನಾಗಬೇಕೆಂಬುದನ್ನು ತಿಳಿಸಿದ.

ಶ್ರೀನಿವಾಸಯ್ಯ ಹಣದ ಆಸೆಗಾಗಿ ಏನು ಮಾಡಲೂ ಹೇಸುತ್ತಿರಲಿಲ್ಲ ನಿಜ. ಆದರೆ ಅರಸರನ್ನು ಕೊಲ್ಲುವಂತಹ ಹೀನಕಾರ್ಯಕ್ಕೆ ಅವನ ಮನಸ್ಸು ಒಪ್ಪಲಿಲ್ಲ. ಅದರಿಂದ ತನ್ನ ಪ್ರಾಣಕ್ಕೆ ಏನು ಅಪಾಯ ಬರುತ್ತದೋ ಎಂದು ಹೆದರಿದ. ವೀರರಾಜಯ್ಯ ಎಷ್ಟು ಧೈರ್ಯ ಹೇಳಿದರೂ ಅವನು ಒಪ್ಪಲಿಲ್ಲ.

ಆಗ ವೀರರಾಜಯ್ಯ ತನ್ನ ಕತ್ತಿಯನ್ನು ಒರೆಯಿಂದ ಎಳೆದು, 'ಶ್ರೀನಿವಾಸಯ್ಯ! ನಾವು ಹೇಳಿದ ಹಾಗೆ ಮಾಡಿ, ಈ ಹಣದ ಚೀಲವನ್ನು ತೆಗೆದುಕೊಂಡು ಬದುಕಿಕೊಳ್ಳುವಿಯೋ? ಅಥವಾ ನಿನ್ನನ್ನು ಇಲ್ಲೇ ಈ ಕತ್ತಿಯಿಂದ ಮುಗಿಸಿಬಿಟ್ಟು, ಅನಂತರ ಆ ರಾಜಒಡೆಯನನ್ನು ನಾವೇ ಮುಗಿಸಿಬಿಡೋಣವೋ?' ಎಂದ.

ಶ್ರೀನಿವಾಸಯ್ಯ ಮರಣಭಯದಿಂದ ನಡುಗುತ್ತ ವೀರರಾಜಯ್ಯನ ಮಾತಿಗೆ ಒಪ್ಪಿದ. ಅವನು ಕೊಟ್ಟ ವಿಷವನ್ನೂ ಹಣದ ಚೀಲವನ್ನೂ ತೆಗೆದುಕೊಂಡು ಹೋದ.

ಮಾರನೆಯ ದಿನ ಲಕ್ಷ್ಮೀರಮಣ ಸ್ವಾಮಿಯ ಪೂಜೆಯ ವೇಳೆಗೆ ತೀರ್ಥದ ಬಟ್ಟಲಿಗೆ ವಿಷವನ್ನು ಬೆರಸಿಟ್ಟಾಯಿತು. ದೇವರ ದರ್ಶನಕ್ಕೆ ಒಡೆಯರ ಸವಾರಿ ಬಂತು. ಅರ್ಚಕ ಹೇಗೋ ಮಂತ್ರ ಹೇಳಿ ಪೂಜೆ ಮಾಡಿದ.

ತೀರ್ಥದ ಬಟ್ಟಲು ಉದ್ಧರಣೆಗಳ ಸಮೇತ ಶ್ರೀನಿವಾಸಯ್ಯ ಒಡೆಯರ ಎದುರಿಗೆ ಬಂದ. ಅವನಿಗೆ ಕೈಕಾಲೆಲ್ಲ ನಡುಕ. ಹಣೆಯ ತುಂಬ ಬೆವರಿನ ಹನಿ. ಮುಖ ಬಣ್ಣ ಕೆಟ್ಟಿದೆ. ತುಟಿ ಅದುರುತ್ತಿದೆ. ಕಣ್ಣುಗಳಲ್ಲಿ ಏನೋ ಬೆಪ್ಪುಕಳೆ. ಒಡೆಯರ ಮುಖವನ್ನು ನೋಡಲಾರದೆ ತಲೆ ತಗ್ಗಿಸಿದ್ದಾನೆ.

'ಅರ್ಚಕರು ಈ ದಿವಸ ಏಕೆ ಹೀಗೆ ವಿಚಿತ್ರವಾಗಿದ್ದಾರೆ?' ಎಂದು ಒಡೆಯರು ಅವನನ್ನು ಹಸನ್ಮುಖದಿಂದ ಮಾತಾಡಿಸಿ ಕೇಳಿದರು. 'ಸಂಕೋಚವಿಲ್ಲದೆ ಹೇಳಿ. ಹೆದರಬೇಡಿ. ಏನು ಸಮಾಚಾರ?' ಎಂದು ಧೈರ್ಯ ಹೇಳಿದರು.

ಹೀಗೆ ಪ್ರಭುಗಳಿಂದ ಅಭಯವನ್ನು ಪಡೆದ ಮೇಲೆ ಶ್ರೀನಿವಾಸಯ್ಯ ಇದ್ದುದನ್ನು ಇದ್ದಂತೆ ಹೇಳಿಬಿಟ್ಟ. 'ತಮ್ಮ ಜ್ಞಾತಿಯಾದ ಕಾರುಗಹಳ್ಳಿ ವೀರಾಜಯ್ಯ ನನ್ನನ್ನು ಕತ್ತಿಯಿಂದ ಹೆದರಿಸಿ, ತಮ್ಮನ್ನು ಕೊಲ್ಲುವಂತೆ ಪ್ರೇರಿಸಿದ. ಈ ತೀರ್ಥದಲ್ಲಿ ನಾನು ವಿಷ ಬೆರಸಿದ್ದೇನೆ. ಅವನ್ನು ಕೊಡಲಾರದೆ ನನ್ನ ಕೈಕಾಲು ನಡುಗುತ್ತಿದೆ' ಎಂದು ತೊದಲುತ್ತ ಹೇಳಿಕೊಂಡ.

ಅವನು ಹೇಳಿದ್ದನ್ನು ಕೇಳಿಯೂ ರಾಜಒಡೆಯರು ನಗುನಗುತ್ತ, 'ಅರ್ಚಕರೆ, ಈ ಬಟ್ಟಲಿನಲ್ಲಿ ಇರುವುದನ್ನು ನೀವು ವಿಷವೆಂದು ತಂದಿದ್ದೀರೋ? ದೇವರ ತೀರ್ಥವೆಂದು ತಂದಿದ್ದೀರೋ ?' ಎಂದರು.

'ದೇವರ ತೀರ್ಥವೆಂದು ತಂದಿದ್ದೇನೆ, ಮಹಾಸ್ವಾಮಿ' ಎಂದ, ಅರ್ಚಕ.

'ಹಾಗಾದರೆ ದೇವರ ತೀರ್ಥವನ್ನು ಇಲ್ಲಿ ಹಾಕಿ' ಎಂದು ಒಡೆಯರು ತಮ್ಮ ಬಲ ಅಂಗೈಯನ್ನು ಬಟ್ಟಲುಮಾಡಿ ಹಿಡಿದರು.

ಅರ್ಚಕ ಅರಸರ ಆಜ್ಞೆಯನ್ನು ಮೀರಲಾರದೆ ಉದ್ಧರಣೆಯಿಂದ ತೀರ್ಥವನ್ನು ಕೊಟ್ಟ. ಒಡೆಯರು ಲಕ್ಷ್ಮೀರಮಣ ದೇವರನ್ನು ಧ್ಯಾನಿಸುತ್ತ ತೀರ್ಥವನ್ನು ಕುಡಿದರು.

ಪರಿವಾರದವರು 'ಹಾ ! ಹಾ !' ಎಂದರು. ಅರ್ಚಕ 'ಸ್ವಾಮೀ !' ಎಂದ. ಒಡೆಯರು ತೀರ್ಥದಿಂದ ನೆನೆದ ಕೈಯನ್ನು ಕಣ್ಣಿಗೆ ಒತ್ತಿಕೊಂಡು, ತಲೆಗೆ ಒರಸಿಕೊಂಡರು.

ವಿಷಮಿಶ್ರವಾದ ತೀರ್ಥವನ್ನು ಕುಡಿದದ್ದರಿಂದ ಒಡೆಯರಿಗೆ ಏನೂ ಕೇಡಾಗಲಿಲ್ಲ. ದೇವರ ತೀರ್ಥ ಮಾತ್ರ ಅವರ ಹೊಟ್ಟೆಯನ್ನು ಸೇರಿತ್ತು. ವಿಷದ ಭಾಗ ಅಂಗೈಯಲ್ಲೇ ನಿಂತು, ಅಂಗೈ ಮಾತ್ರ ಕಪ್ಪಾಗಿತ್ತು.

ಮಾರನೆಯ ದಿನ ಒಡೆಯರು ವೀರಾಜಯ್ಯನನ್ನು ಹಿಡಿತರಿಸಿದರು. 'ಶತ್ರುಶೇಷವನ್ನು ಉಳಿಸಬಾರದೆಂಬುದು ರಾಜನೀತಿ. ಅದಕ್ಕೆ ಅನುಸಾರವಾಗಿ ನಿನಗೆ ಮರಣದಂಡನೆಯನ್ನು ನಾವು ನ್ಯಾಯವಾಗಿ ವಿಧಿಸಬೇಕು. ಆದರೂ ನಿನ್ನನ್ನು ಕೊಲ್ಲಲು ನಮಗೆ ಇಷ್ಟವಿಲ್ಲ' ಎಂದು ಹೇಳಿ, ಆಗಿನ ಕಾಲದ ಪದ್ಧತಿಯಂತೆ ಅವನ ಕಿವಿಮೂಗುಗಳನ್ನು ಕುಯ್ಯಿಸಿ, 'ಇನ್ನು ಈ ದೇಶದಲ್ಲಿ ನೀನು ಇರಬೇಡ. ಎಲ್ಲಿಯಾದರೂ ಹೋಗಿ ಭಿಕಾರಿಯಾಗಿ ಬದುಕಿಕೊ' ಎಂದು ಅವನನ್ನು ಅಟ್ಟಿಬಿಟ್ಟರು.

ಕಾರುಗಹಳ್ಳಿಯ ಬೊಕ್ಕಸ ಭಂಡಾರ ಆಭರಣ ಸಮಸ್ತವನ್ನೂ ತಮ್ಮ ಸ್ವಾಧೀನಪಡಿಸಿಕೊಂಡು ಚಾಮುಂಡೇಶ್ವರೀ ಅಮ್ಮನವರ ಸನ್ನಿಧಿಗೆ ಒಪ್ಪಿಸಿ ಕೊಟ್ಟರು.

ಕಾರುಗಹಳ್ಳಿಯ ನೆನಪು ಕೂಡ ಇರಬಾರದೆಂದು ಅಲ್ಲಿನ ಕೋಟೆಯನ್ನು ನೆಲಸಮ ಮಾಡಿಸಿ, ಅಲ್ಲಿ ಹರಳನ್ನು ಬಿತ್ತಿಸಿದರು.

ಅನಂತರ ಒಡೆಯರು ಅರ್ಚಕ ಶ್ರೀನಿವಾಸಯ್ಯನನ್ನು ಬರಮಾಡಿಕೊಂಡರು. 'ಅರ್ಚಕರೆ, ನಿಮಗೆ ನಾವು ಅಭಯ ಕೊಟ್ಟಿದ್ದೇವೆ. ಆದ್ದರಿಂದ ಹೆದರಬೇಡಿ. ಆದರೂ ದುರ್ಮಾರ್ಗಿಯಾದ ವೀರರಾಜಯ್ಯನು ಹೆದರಿಸಿದ್ದರಿಂದ ನೀವು ತೀರ್ಥದಲ್ಲಿ ವಿಷ ಬೆರಸಿದ್ದು ತಪ್ಪಲ್ಲವೆ? ವೀರರಾಜಯ್ಯನ ದ್ರೋಹಾಲೋಚನೆಯನ್ನು ನಮಗೆ ತಿಳಿಸಿದ್ದರೆ, ನಾವು ರಕ್ಷಿಸುತ್ತಿರಲಿಲ್ಲವೆ? ಅಥವಾ ಅವನು ಕೊಟ್ಟ ದ್ರವ್ಯದ ಲೋಭದಿಂದ ನೀವು ಆ ಕಾರ್ಯಕ್ಕೆ ಒಪ್ಪಿದ ಬದಲು ನಮಗೆ ತಿಳಿಸಿದ್ದರೆ ನಾವು ನಿಮಗೆ ಸಂತೋಷದಿಂದ ಪಾರಿತೋಷಕ ಕೊಡುತ್ತಿರಲಿಲ್ಲವೆ? ಒಟ್ಟಿನಲ್ಲಿ ನೀವು ನಮಗೆ ದ್ರೋಹ ಮಾಡಲು ಒಪ್ಪಿ, ನಿಮಗೆ ನೀವೇ ದ್ರೋಹ ಮಾಡಿಕೊಂಡಿರಿ. ನಮ್ಮ ಸಮ್ಮುಖದ ಸೇವೆಗೆ ನೀವು ತಕ್ಕವರಲ್ಲ ಎಂದು ತೋರಿಸಿಕೊಂಡಿರಿ. ಆದ್ದರಿಂದ ಇನ್ನು ಮುಂದೆ ನೀವು ಲಕ್ಷ್ಮೀರಮಣದೇವರ ಅರ್ಚಕರಾಗಿರುವುದು ಬೇಡ. ಮೈಸೂರಿನಿಂದ ನೀವು ದೂರವಾಗಿದ್ದರೆ, ಇಬ್ಬರಿಗೂ ಕ್ಷೇಮ. ನೀವು ಕನ್ನಂಬಾಡಿಗೆ ಹೋಗಿ. ಅಲ್ಲಿ ಗೋಪಾಲಕೃಷ್ಣಸ್ವಾಮಿ ದೇವಾಲಯದಲ್ಲಿ ಅರ್ಚಕತನ ಮಾಡಿಕೊಂಡಿರಿ' ಎಂದು ಅವನನ್ನು ಕಳಿಸಿಕೊಟ್ಟರು.

ಅಂದು ಚಾಮುಂಡೇಶ್ವರಿಯ ದರ್ಶನಕ್ಕೆ ಹೋಗುತ್ತಿರುವಾಗ ಇದ್ದಕ್ಕಿದ್ದಂತೆ ಸಿಡಿಲು ಎರಗಿ ಚಾಮರಾಜ ಒಡೆಯರ ತಲೆಕೂದಲು ಸುಟ್ಟರೂ ಅವರ ಜೀವಕ್ಕೆ ಏನೂ ಅಪಾಯವಾಗಲಿಲ್ಲ. ಅದರಂತೆಯೇ ಲಕ್ಷ್ಮೀರಮಣನ ದರ್ಶನಕ್ಕೆ ಬಂದಿರುವಾಗ ರಾಜ ಒಡೆಯರು ವಿಷಮಿಶ್ರವಾದ ತೀರ್ಥವನ್ನು ಕುಡಿದರೂ ಅವರ ಅಂಗೈ ವಿಷದಿಂದ ಕಪ್ಪಾಯಿತೆ ಹೊರತು ಅವರ ಜೀವಕ್ಕೆ ಏನೂ ಅಪಾಯವಾಗಲಿಲ್ಲ.

[ಆಧಾರ: ವಂಶಾವಳಿ]

೬. ಮುತ್ತಿನ ಮೂಗುತಿ

ಶ್ರೀ ರಾಜ ಒಡೆಯರು ತಾವು ಎಷ್ಟು ಪರಾಕ್ರಮಶಾಲಿಗಳಾಗಿ ಇದ್ದರೋ ಅಷ್ಟೇ ದೈವದಲ್ಲಿ ಭಕ್ತಿ ಉಳ್ಳವರೂ ಆಗಿದ್ದರು.

ಒಂದು ಸಲ ಮಧುರೆಯ ವೆಂಕಟಪತಿನಾಯಕ ಶ್ರೀರಂಗಪಟ್ಟಣವನ್ನು ಸ್ವಾಧೀನಮಾಡಿಕೊಳ್ಳಬೇಕೆಂದು ದಂಡೆತ್ತಿ ಹೊರಟ. ಆಗ ಅಲ್ಲಿದ್ದ ಶ್ರೀರಂಗ ರಾಯರು ತಮ್ಮ ಸಹಾಯಕ್ಕೆ ಬರಬೇಕೆಂದು ರಾಜ ಒಡೆಯರನ್ನು ಕೇಳಿ ಕೊಂಡರು. ರಾಜ ಒಡೆಯರು ಕಾರಣಾಂತರದಿಂದ ಅವರ ಸಹಾಯಕ್ಕೆ ಹೋಗಲಾಗಲಿಲ್ಲ. ಶ್ರೀರಂಗರಾಯರಿಗೆ ಕೋಪ ಬಂತು. ಮೈಸೂರನ್ನು ಮುತ್ತಬೇಕೆಂದು ತಮ್ಮ ಸೈನ್ಯವನ್ನು ಕಳಿಸಿದರು. ಮೈಸೂರಿನ ಹತ್ತಿರದ ಕೆಸರೆ ಎಂಬ ಗ್ರಾಮದ ಬಳಿ ಇಬ್ಬರಿಗೂ ಯುದ್ಧ ನಡೆಯಿತು. ರಾಜ ಒಡೆಯರು ಶ್ರೀರಂಗಪಟ್ಟಣದವರನ್ನು ಸೋಲಿಸಿ ಓಡಿಸಿಬಿಟ್ಟರು.

ಇದಾದ ಕೆಲವು ದಿವಸಗಳ ಮೇಲೆ, ಬೇಲೂರು, ಗ್ರಾಮ,ಮಾಗಡಿ, ಎಳಂದೂರು, ಉಮ್ಮತ್ತೂರು, ಕುಣಿಗಲ್ ಮೊದಲಾದ ಕಡೆಯ ಪಾಳೆಯ ಗಾರರೆಲ್ಲ ಒಂದಾಗಿ, ಶ್ರೀರಂಗಪಟ್ಟಣವನ್ನು ಗೆಲ್ಲಬೇಕೆಂದು ಹೊರಟರು. ಈ ಸುದ್ದಿ ರಾಜ ಒಡೆಯರಿಗೆ ತಿಳಿಯಿತು. 'ಇವರೆಲ್ಲ ಸೇರಿಕೊಂಡು ಶ್ರೀರಂಗ ಪಟ್ಟಣವನ್ನು ಸ್ವಾಧೀನಮಾಡಿಕೊಂಡರೆ, ಅದರಿಂದ ಮುಂದೆ ಮೈಸೂರಿಗೆ ತೊಂದರೆಯಾಗಬಹುದು' ಎಂದುಕೊಂಡು, ರಾಜ ಒಡೆಯರು ಸೇನಾಸಮೇತ ರಾಗಿ ಕುಣಿಗಲಿಗೆ ಹೋದರು. ಆ ಪಾಳಯಗಾರರನ್ನು ಯುದ್ಧದಲ್ಲಿ ಜಯಿ ಸಿದರು. ಅವರ ವಸ್ತ್ರ ಆಭರಣ ದ್ರವ್ಯ ಆನೆ ಕುದುರೆ ಮುಂತಾದುವನ್ನು ವಶಪಡಿಸಿಕೊಂಡು ಬಂದರು.

ಶ್ರೀರಂಗಪಟ್ಟಣಕ್ಕೆ ಬರಬಹುದಾಗಿದ್ದ ಆಪತ್ತು ರಾಜ ಒಡೆಯರಿಂದ ಪರಿಹಾರವಾಯಿತೆಂದು ಶ್ರೀರಂಗರಾಯರಿಗೆ ಸಂತೋಷವಾಯಿತು. ತಮ್ಮ ಸಂತೋಷದ ಗುರುತಾಗಿ ಅವರು ಒಡೆಯರಿಗೆ ಅನೇಕ ಮರ್ಯಾದೆಗಳನ್ನು ಕಳಿಸಿಕೊಟ್ಟರು.

ಕೆಲವು ಕಾಲ ಕಳೆದ ಮೇಲೆ ರಾಜ ಒಡೆಯರಿಂದ ಶ್ರೀರಂಗರಾಯರಿಗೆ

ಪುನಃ ಉಪಕಾರವಾಯಿತು. ಶ್ರೀರಂಗರಾಯರ ಸಂಬಂಧಿಯಾದ ವೆಂಕಟಪತಿರಾಯರ ದಳವಾಯಿ ತಿರುಮಲರಾಜಯ್ಯನೆಂಬವನು ನರಸೀಪುರದ ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದ. ಆಗ ನರಸೀಪುರದ ಪಾಳಯಗಾರನಾದ ಲಕ್ಷ್ಮಪ್ಪನಾಯಕ ತಿರುಮಲರಾಜಯ್ಯನನ್ನು ಸೆರೆ ಹಿಡಿದ. ಆ ವರ್ತಮಾನವನ್ನು ಕೇಳಿ ಶ್ರೀರಂಗರಾಯರು, ತಿರುಮಲರಾಜಯ್ಯನನ್ನು ಬಿಡಿಸಿ ಕೊಡಬೇಕೆಂದು ರಾಜ ಒಡೆಯರನ್ನು ಪ್ರಾರ್ಥಿಸಿದರು. ರಾಜ ಒಡೆಯರು ಕೂಡಲೆ ತಿರುಮಕೂಡಲಿಗೆ ಹೋಗಿ ಅಲ್ಲಿನ ಪಾಳಯಗಾರನನ್ನು ಸೋಲಿಸಿ, ತಿರುಮಲರಾಜಯ್ಯನನ್ನು ಬಿಡುಗಡೆಮಾಡಿ ಶ್ರೀರಂಗಪಟ್ಟಣಕ್ಕೆ ಕಳಿಸಿದರು. ಶ್ರೀರಂಗರಾಯರಿಗೆ ಇದರಿಂದ ಸಂತೋಷವಾಯಿತು. ತಮ್ಮ ದಳವಾಯಿಗೆ ರಾಜ ಒಡೆಯರು ಹೀಗೆ ಸಹಾಯ ಮಾಡಿದರು ಎಂಬುದು ಆನೆಗೊಂದಿಯ ವೆಂಕಟಪತಿರಾಯರಿಗೆ ತಿಳಿಯಿತು. 'ಇಂಥ ಒಡೆಯರ ಸಂಗಡ ನಾವು ಸ್ನೇಹ ಬೆಳಸಬೇಕು' ಎಂದು ಅವರು ತಮ್ಮ ಸ್ವಾಧೀನದಲ್ಲಿದ್ದ ಹಲವಾರು ಗ್ರಾಮಗಳ ಒಡೆತನವನ್ನು ರಾಜ ಒಡೆಯರಿಗೆ ವಹಿಸಿಕೊಟ್ಟರು.

ಹೀಗೆ ಪ್ರಬಲರಾಗುತ್ತಿದ್ದ ರಾಜ ಒಡೆಯರನ್ನು ಕಂಡು ಅಸೂಯೆಪಟ್ಟು ಅವರನ್ನು ಮೋಸದಿಂದ ಕೊಲ್ಲಬೇಕೆಂದು ಕೆಲವು ಪ್ರಯತ್ನಗಳಾದುವು. ದೇವರ ಕೃಪೆಯಿಂದ ಅವು ಯಾವುವೂ ಸಫಲವಾಗಲಿಲ್ಲ. ರಾಜ ಒಡೆಯರ ದೈವಭಕ್ತಿಯೇ ಅವರನ್ನು ಕಾಪಾಡಿತು.

ರಾಜ ಒಡೆಯರ ದೈವಭಕ್ತಿಯನ್ನು ಕುರಿತು ಒಂದು ಅದ್ಭುತ ಐತಿಹ್ಯ ಇದೆ. ಹುಟ್ಟುಕುರುಡನೊಬ್ಬನಿಗೆ ರಾಜ ಒಡೆಯರ ಮಹಿಮೆಯಿಂದ ಕಣ್ಣು ಬಂದಿತು.

ಒಬ್ಬಾನೊಬ್ಬ ಹುಟ್ಟುಕುರುಡನಾದ ಬ್ರಾಹ್ಮಣ ತನಗೆ ಕಣ್ಣು ಬರಬೇಕೆಂದು ತಿರುಪತಿಯ ದೇವಸ್ಥಾನದಲ್ಲಿ ಸೇವೆಮಾಡಿಕೊಂಡಿದ್ದ. ಎಷ್ಟು ಕಾಲವಾದರೂ ಅವನಿಗೆ ಕಣ್ಣು ಬರಲಿಲ್ಲ. ಆಗ ಅವನು ಒಂದು ದಿನ 'ನಾಳೆ ದೇವರ ರಥೋತ್ಸವ ಇದೆ. ಆ ಹೊತ್ತಿಗೆ ನನ್ನ ಕಣ್ಣು ಬರದೆಹೋದರೆ, ರಥದ ಚಕ್ರಕ್ಕೆ ನನ್ನ ಪ್ರಾಣ ಒಪ್ಪಿಸಿಬಿಡುತ್ತೇನೆ' ಎಂದುಕೊಂಡು ಮಲಗಿದ

ಮಾರನೆಯ ದಿವಸ ಎದ್ದಾಗ ಅವನಿಗೆ ಒಂದು ಕಣ್ಣು ಕಾಣಿಸಿತು. ಆ ಒಂದು ಕಣ್ಣಿನಿಂದಲೇ ಸ್ವಾಮಿಯನ್ನು ದರ್ಶನಮಾಡಿದ. ಆ ರಾತ್ರಿ ಮಲಗಿ

ಕೊಳ್ಳುವಾಗ 'ಸ್ವಾಮಿಯೇ, ಕೃಪೆ ಮಾಡಿ ನನಗೆ ಒಂದು ಕಣ್ಣು ಕೊಟ್ಟೆ. ಹೀಗೆಯೇ ದಯಮಾಡಿ ಇನ್ನೊಂದು ಕಣ್ಣೂ ಕಾಣುವಂತೆ ಮಾಡು' ಎಂದು ಬೇಡಿಕೊಂಡ.

ಆ ರಾತ್ರಿ ಶ್ರೀ ವೆಂಕಟೇಶ ದೇವರು ಅವನಿಗೆ ಕನಸಿನಲ್ಲಿ ಪ್ರತ್ಯಕ್ಷವಾಗಿ, 'ಅಯ್ಯಾ, ನಿನಗೆ ಇನ್ನೊಂದು ಕಣ್ಣು ಕಾಣಬೇಕಾದರೆ, ನೀನು ಮೈಸೂರಿಗೆ ಹೋಗು. ಅಲ್ಲಿ ರಾಜ ಒಡೆಯರಿದ್ದಾರೆ. ಅವರು ಈಶ್ವರಾಂಶದಿಂದ ಹುಟ್ಟಿದವರು. ನಿನಗೆ ಕಣ್ಣು ಬರಲಿ ಎಂದು ಅವರು ಹೇಳಿದರೆ ಕಣ್ಣು ಬರುತ್ತದೆ. ಹೋಗು. ಹಾಗೆಂದು ಅವರನ್ನು ಕೇಳಿಕೊ' ಎಂದು ಹೇಳಿದ ಹಾಗಾಯಿತು.

ದೇವರ ಆದೇಶದಂತೆ ಆ ಬ್ರಾಹ್ಮಣ ಮೈಸೂರಿಗೆ ಹೋದ. ರಾಜ ಒಡೆಯರನ್ನು ಕಂಡ. ತನ್ನ ಕನಸನ್ನು ಹೇಳಿಕೊಂಡ. ಅರಸರಿಗೆ ಆಶ್ಚರ್ಯವಾಯಿತು.

'ದೇವರ ಮಹಿಮೆ ಹೇಗಿರುವುದೋ ಹೇಳಬಲ್ಲವರು ಯಾರು ?' ಎಂದುಕೊಂಡು ರಾಜ ಒಡೆಯರು 'ನಾಳೆ ಲಕ್ಷ್ಮೀರಮಣಸ್ವಾಮಿಯ ದೇವಸ್ಥಾನಕ್ಕೆ ಬನ್ನಿ. ಎರಡು ಕಣ್ಣುಗಳಿಂದಲೂ ದೇವರನ್ನು ದರ್ಶನ ಮಾಡುವಿರಂತೆ' ಎಂದರು.

ಮಾರನೆಯ ದಿನ ಆ ಬ್ರಾಹ್ಮಣ ಲಕ್ಷ್ಮೀರಮಣ ದೇವರ ಸನ್ನಿಧಿಗೆ ಬಂದ. ಎರಡು ಕಣ್ಣುಗಳಿಂದಲೂ ಸ್ವಾಮಿಯನ್ನು ದರ್ಶನಮಾಡಿದ ! ಪುನಃ ತಿರುಪತಿಯಲ್ಲಿ ದೇವಸ್ಥಾನದ ಸೇವೆಗೆ ಹೋದ.

ಅಂದಿನಿಂದ ಮೈಸೂರು ಅರಸರಿಗೆ ಶ್ರೀ ಚಾಮುಂಡೇಶ್ವರಿಯೂ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಯೂ ಹೇಗೆ ಮನೆದೇವರಾಗಿದ್ದರೋ ಹಾಗೆಯೇ ತಿರುಪತಿಯ ಶ್ರೀ ವೆಂಕಟಾಚಲಪತಿಯೂ ಮನೆ ದೇವರಾದರು.

ಕೆಲವು ಕಾಲದ ಮೇಲೆ ಶ್ರೀರಂಗರಾಯರಿಗೆ ಬೆನ್ನುಫಣಿ ಎಂಬ ಕೆಟ್ಟ ಕಾಯಿಲೆ ಬಂತು. ಇನ್ನು ತಾವು ಬದುಕುವುದಿಲ್ಲ ಎನ್ನಿಸಿತು. ಮುಂದೆ ಶ್ರೀರಂಗಪಟ್ಟಣವನ್ನು ಯಾರಿಗೆ ಒಪ್ಪಿಸುವುದು ಎಂದು ತಮ್ಮ ಸಾಮಾಜಿಕರೊಡನೆ ಆಲೋಚನೆಮಾಡಿದರು.

'ರಾಜ ಒಡೆಯರು ನಮಗೆ ಮಿತ್ರರು, ಪರಾಕ್ರಮಶಾಲಿಗಳು. ಎಂದೆರಡು ಸಲ ನಮಗೆ ಪ್ರತಿಫಲಾಪೇಕ್ಷೆಯಿಲ್ಲದೆ ಉಪಕಾರ ಮಾಡಿದ್ದಾರೆ. ಯದುವಂಶಕ್ಕೆ ಸೇರಿದವರಾದ ಇವರೇ ಈ ಸಿಂಹಾಸನವನ್ನು ಏರಲು ಯೋಗ್ಯರು. ನಾವು ಬೇರೆ ಯಾರಿಗಾದರೂ ಇದನ್ನು ಕೊಟ್ಟರೂ ರಾಜ ಒಡೆಯರು ಅವರನ್ನು ತಮ್ಮ ಸಾಮರ್ಥ್ಯದಿಂದ ಜಯಿಸಿ ತೆಗೆದುಕೊಳ್ಳುತ್ತಾರೆ' ಎಂದು ರಾಜ ಒಡೆಯರನ್ನು ಕರೆಸಿಕೊಂಡರು. ಶ್ರೀರಂಗಪಟ್ಟಣವನ್ನೂ ಅಲ್ಲಿನ ರತ್ನಸಿಂಹಾಸನವನ್ನೂ ಅವರಿಗೆ ವಹಿಸಿಕೊಟ್ಟರು. ತಾವು ತಮ್ಮ ಪತ್ನಿಯೊಡನೆಯೂ ಪರಿವಾರದವರೊಡನೆಯೂ ತಲಕಾಡಿನ ಹತ್ತಿರದ ಮಾಲಂಗಿಗೆ ಹೋದರು. ಕೊಂಚಕಾಲದಲ್ಲಿಯೇ ಅಲ್ಲಿ ತೀರಿಕೊಂಡರು.

ಹೀಗೆ ಶ್ರೀರಂಗಪಟ್ಟಣದಲ್ಲಿ ರಾಜ ಒಡೆಯರು ಸಿಂಹಾಸನಾರೋಹಣ ಮಾಡಿದ ಮೇಲೆ ಒಂದು ಸಲ ಶ್ರೀರಂಗನಾಥನ ಉತ್ಸವ ಬಂತು. ಹಿಂದೆ ಇಂಥ ಉತ್ಸವ ಆದಾಗ ಶ್ರೀರಂಗರಾಯರ ಪತ್ನಿ ಅಲಮೇಲಮ್ಮನವರು ರಂಗನಾಯಕಿ ಅಮ್ಮನವರ ಅಲಂಕಾರಕ್ಕೆ ತಮ್ಮ ಆಭರಣಗಳನ್ನು ಕೊಡುತ್ತಿದ್ದರು. ಈ ಸಲ ಅವುಗಳಿಗಾಗಿ ಕಳಿಸಿದಾಗ ಆಕೆ ಕೊಡಲು ಒಪ್ಪಲಿಲ್ಲ. ಆಭರಣಗಳನ್ನು ಧರಿಸುವ ಸೌಭಾಗ್ಯವನ್ನು ಕಳೆಕೊಂಡ ಆಕೆಯಿಂದ ಆ ಆಭರಣಗಳನ್ನು ದೇವರಿಗಾಗಿ ತರಿಸಿಕೊಳ್ಳಬೇಕೆಂದು ರಾಜ ಒಡೆಯರು ಪ್ರಯತ್ನಪಟ್ಟರು.

ರಾಜ ಒಡೆಯರ ಉದ್ದೇಶವನ್ನು ಆಕೆ ಸರಿಯಾಗಿ ಅರ್ಥಮಾಡಿಕೊಳ್ಳಲಾರದೆ ಹೋದರು. ಮುತ್ತಿನ ಮೂಗುತಿಯೊಂದನ್ನು ಮಾತ್ರ ದೇವರಿಗೆ ಕಳಿಸಿಕೊಟ್ಟು, ಉಳಿದ ಆಭರಣಗಳನ್ನು ಸೆರಗಿನಲ್ಲಿ ಕಟ್ಟಿಕೊಂಡು ಮಾಲಂಗಿಯ ಮಡುವಿಗೆ ಬಿದ್ದು ಆಕೆ ಪ್ರಾಣಬಿಟ್ಟರು.

ಆಕೆಯ ದುಡುಕಿಗಾಗಿ ರಾಜ ಒಡೆಯರು ನೊಂದುಕೊಂಡರು. ಆ ರಾತ್ರಿ ಕನಸಿನಲ್ಲಿ ಅಲಮೇಲಮ್ಮ ಕಾಣಿಸಿಕೊಂಡ ಹಾಗಾಯಿತು. ಆ ಪ್ರತಿಬಂಧಕವನ್ನು ಪರಿಹಾರಮಾಡುವುದಕ್ಕಾಗಿ ಆಕೆಯ ಒಂದು ವಿಗ್ರಹವನ್ನು ಚಿನ್ನದಲ್ಲಿ ಮಾಡಿಸಿ, ಅದಕ್ಕೆ ಶಾಂತಿಪೂಜೆ ನಡಸಿದರು.

ಈಗಲೂ ಆ ವಿಗ್ರಹಕ್ಕೆ ಅರಮನೆಯಲ್ಲಿ ಪ್ರತಿನಿತ್ಯದ ಪೂಜೆಯುಂಟು ; ನವರಾತ್ರಿಯ ಮಹಾನವಮೀ ದಿವಸ ವಿಶೇಷವಾದ ಪೂಜೆಗಳುಂಟು.

(ಆಧಾರ : ವಂಶಾವಳಿ)

೭. ರತ್ನಸಿಂಹಾಸನ

ರಾಜ ಒಡೆಯರು ಮೈಸೂರನ್ನು ಆಳುತ್ತಿದ್ದ ಕಾಲದಲ್ಲಿ ವಿಜಯನಗರದ ಶ್ರೀರಂಗರಾಯರು ಶ್ರೀರಂಗಪಟ್ಟಣದಲ್ಲಿ ಅರಸರಾಗಿದ್ದರು.

ವಿಜಯನಗರದ ನರಪತಿ ಕೃಷ್ಣದೇವರಾಯರಿಗೆ ಗಂಡುಮಕ್ಕಳಿಲ್ಲದ್ದರಿಂದ ಅವರ ಅಳಿಯನಾದ ರಾಮರಾಯನಿಗೆ ಸಿಂಹಾಸನ ಬಂತು. ಪಟ್ಟಾಭಿಷೇಕವಾಯಿತು. ಅನಂತರ ಆ ಅರಸೊತ್ತಿಗೆ ಅವನ ತಮ್ಮನಾದ ತಿರುಮಲರಾಯನಿಗೆ ಬಂತು.

ತಿರುಮಲರಾಯನಿಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ಹಿರಿಯವರೇ ಶ್ರೀರಂಗರಾಯರು. ತಂದೆಯ ಆಸ್ತಿಯಲ್ಲಿ ಇವರಿಗೆ ಶ್ರೀರಂಗಪಟ್ಟಣದ ಸೀಮೆಯೂ ವಂಶಪಾರಂಪರ್ಯವಾಗಿ ಬಂದ ಸಿಂಹಾಸನವೂ ಲಭಿಸಿದುವು.

ಶ್ರೀರಂಗಪಟ್ಟಣದಲ್ಲಿ ಇದ್ದ ಇವರಿಗೂ ಮೈಸೂರಿನಲ್ಲಿ ಇದ್ದ ರಾಜ ಒಡೆಯರಿಗೂ ಒಂದೆರಡು ಸಲ ಮನಸ್ತಾಪವಾಗಿದ್ದರೂ ಇಬ್ಬರೂ ಸೌಹಾರ್ದ ಸ್ನೇಹ ಬೆಳಸಿಕೊಂಡಿದ್ದರು.

ಒಮ್ಮೆ ಶ್ರೀರಂಗರಾಯರಿಗೆ ಬೆನ್ನುಫಣಿ ಎಂಬ ಕೆಟ್ಟ ಕಾಯಿಲೆ ಬಂತು. ಇನ್ನು ತಾವು ಬದುಕುವುದಿಲ್ಲ ಎನ್ನಿಸಿತು. ತಮ್ಮ ರಾಜ್ಯಕ್ಕೆ ಯೋಗ್ಯನಾದ ಉತ್ತರಾಧಿಕಾರಿ ಯಾರು ಎಂದು ಚಿಂತಿಸಿ, ರಾಜಒಡೆಯರಿಗೆ ತಮ್ಮ ರಾಜ್ಯವನ್ನೂ ಸಿಂಹಾಸನವನ್ನೂ ಕೊಟ್ಟು ಹೋಗುವುದೆಂದು ನಿಶ್ಚಯಿಸಿದರು.

ಅದನ್ನು ರಾಜಒಡೆಯರಿಗೆ ತಿಳಿಸುವುದಕ್ಕಾಗಿ ಅವರನ್ನು ಬರಮಾಡಿಕೊಂಡರು. ಆ ಸಂದರ್ಭದಲ್ಲಿ ಅವರಿಗೆ ತಮ್ಮ ಬಳಿಯಿದ್ದ ರತ್ನಸಿಂಹಾಸನದ ಕತೆಯನ್ನು ಹೇಳಿದರು.

ಈ ಸಿಂಹಾಸನವನ್ನು ಮೂಲತಃ ಮೊತ್ತಮೊದಲು ಧರ್ಮರಾಯನ ಮೊಮ್ಮಗನಾದ ಪರೀಕ್ಷಿತರಾಜನು ಏರಿ ರಾಜ್ಯಭಾರ ಮಾಡಿದನಂತೆ. ಅನಂತರದ ಅನೇಕ ತಲೆಮಾರುಗಳ ಅರಸರು ಇದೇ ಸಿಂಹಾಸನವನ್ನು ಏರಿ, ಮುಂದೆ ಅದು ಈ ಕಲಿಗಾಲದಲ್ಲಿ ಪೆನುಗೊಂಡೆಯ ಕಂಪಿಲರಾಯನ ವಶಕ್ಕೆ ಬಂತು.

ಆಗ ಆತ ಒಮ್ಮೆ ರಾಜಕೀಯವಾದ ಯಾವುದೋ ಕಾರಣಗಳಿಂದ ಈ ಸಿಂಹಾಸನವನ್ನು ನೆಲಮಾಳಿಗೆಯಲ್ಲಿ ಇರಿಸಿ ಭದ್ರಪಡಿಸಿದ.

ಮುಂದೆ ವಿಜಯನಗರದ ಸ್ಥಾಪನೆಯ ಕಾಲ ಬಂತು.

ವಿಜಯನಗರವನ್ನು ಸ್ಥಾಪಿಸಿದ ವಿದ್ಯಾರಣ್ಯ ಸ್ವಾಮಿಗಳು ತಾವು ಸಂನ್ಯಾಸಿಗಳಾಗುವುದಕ್ಕೆ ಮೊದಲು ಶ್ರೀ ಲಕ್ಷ್ಮೀದೇವಿಯನ್ನು ಕುರಿತು ತಪಸ್ಸುಮಾಡಿದರು. ಆಗ ದೇವಿ ಅಶರೀರವಾಣಿಯಾಗಿ, 'ನಿನ್ನ ತಪಸ್ಸಿಗೆ ಮೆಚ್ಚಿದೆ. ಈ ಜನ್ಮದಲ್ಲಿ ನೀನು ಭೋಗಪಡುವುದನ್ನು ಕೇಳಿಕೊಂಡು ಬಂದಿಲ್ಲ. ನಿನಗೆ ಇನ್ನೊಂದು ಜನ್ಮದಲ್ಲಿ ನಾನು ಪ್ರಸನ್ನಳಾಗುತ್ತೇನೆ. ಈ ಜನ್ಮದಲ್ಲಿ ಮಾತ್ರ ಅಖಂಡಪೃಥ್ವೀಸಾಮ್ರಾಜ್ಯವನ್ನು ನೀನು ಯಾರಿಗೆ ಬೇಕಾದರೂ ಕೊಡಬಹುದು. ನೀನು ಬರೆದಿರುವ ಭಾಷ್ಯಾದಿಗ್ರಂಥಗಳು ಎಲ್ಲಿಯವರೆಗೆ ಇರುತ್ತವೆಯೋ ಅಲ್ಲಿಯವರೆಗೂ ನಿನ್ನ ಹೆಸರು ಅಚ್ಚಳಿಯದೆ ಇರುತ್ತದೆ' ಎಂದು ಹೇಳಿದಳು. ದೇವಿಯ ವಾಣಿಯನ್ನು ಕೇಳಿ ಅವರು ಸಂನ್ಯಾಸಿಗಳಾಗಿ ಊರು ಬಿಟ್ಟು ಹೊರಟರು. ಆ ಕಾಲಕ್ಕೆ ಲಕ್ಷ್ಮೀದೇವಿ ಪ್ರಸನ್ನಳಾಗಿ, ಒಂದು ಹರಿದಾರಿಯ ಉದ್ದಕ್ಕೂ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿಯ ಅಂಕಿತದ ಚಿನ್ನದ ವರಹಗಳನ್ನು ಮಳೆಗರೆಸಿದಳು.

ಆಗ ವಿದ್ಯಾರಣ್ಯ ಸ್ವಾಮಿಗಳು 'ಆಯಾ ಮನೆಗಳ ಮೇಲೆ ಬಿದ್ದದ್ದೆಲ್ಲ ಆಯಾ ಮನೆಯವರದು. ಬೀದಿಗಳಲ್ಲಿಯೂ, ಊರ ಹೊರಗೂ ಬಿದ್ದದ್ದು ಅರಮನೆಗೆ ಸೇರಬೇಕು' ಎಂದು ನಿರ್ಘೋಷಣೆ ಮಾಡಿದರು..

ಇದರಿಂದ ಊರಿನ ಜನ ಧನಿಕರಾದರು, ಭಂಡಾರ ಬೊಕ್ಕಸ ತುಂಬಿತು.

'ಈ ದ್ರವ್ಯವನ್ನು ಅನುಭೋಗಿಸಿ ರಾಜ್ಯಪಾಲನೆ ಮಾಡುವುದಕ್ಕೆ ಅರ್ಹರಾದವರು ಯಾರಿದ್ದಾರೆ?' ಎಂದು ವಿದ್ಯಾರಣ್ಯರು ಆಲೋಚನೆ ಮಾಡಿದರು.

ಆ ಕಾಲದಲ್ಲಿ ಓರಗಲ್ಲು ಪ್ರತಾಪರುದ್ರರಾಯನ ಭಂಡಾರವನ್ನು ನೋಡಿಕೊಳ್ಳುತ್ತಿದ್ದ ಹಕ್ಕ ಬುಕ್ಕ ಎಂಬವರು ಅಧಿಕಾರವಿಲ್ಲದೆ ಪರದಾಡುತ್ತಿದ್ದರು.

ಒಂದು ದಿನ ಹಕ್ಕ ಮಾರ್ಗಾಯಾಸದಿಂದ ಬಳಲಿ ಒಂದು ಮರದ ನೆರಳಿನಲ್ಲಿ ವಿಶ್ರಮಿಸಿಕೊಂಡಿದ್ದ. ಆಗ ಒಂದು ಸರ್ಪ ಅವನ ತಲೆಯ ದೆಸೆಯಲ್ಲಿ

ಹೆಡೆಬಿಚ್ಚಿ, ಬಿಸಿಲು ಅವನ ಮುಖದ ಮೇಲೆ ಬೀಳದಂತೆ ನೆರಳು ಕೊಟ್ಟು ಹೋಯಿತು.

ಈ ವರ್ತಮಾನ ಸ್ವಾಮಿಗಳಿಗೆ ತಿಳಿಯಿತು. ಅವರನ್ನು ಕರಸಿಕೊಂಡು ಅವರ ಪೂರ್ವೋತ್ತರಗಳನ್ನು ಕೇಳಿದರು.

'ನಾವು ಅಣ್ಣತಮ್ಮಂದಿರು. ನನ್ನ ಹೆಸರು ಹಕ್ಕ, ಇವನು ಬುಕ್ಕ.'

'ನೀವು ಯಾವ ವಂಶದವರು ?'

'ನಾವು ಚಂದ್ರವಂಶದವರು.'

ಆಗ ಸ್ವಾಮಿಗಳು ಅವರ ಪದ್ಧತಿಯನ್ನು ಕುರಿತು ವಿಚಾರಿಸಿ, 'ಲಕ್ಷ್ಮೀ ದೇವಿಯು ಕರುಣಿಸಿದ ದ್ರವ್ಯವನ್ನು ಇಟ್ಟುಕೊಂಡು ರಾಜ್ಯವಾಳಲು ಇವರು ಯೋಗ್ಯರು' ಎಂದು ನಿಶ್ಚಯಿಸಿದರು.

'ಕಂಪಿಲರಾಯನು ಪರೀಕ್ಷಿತನಿಂದ ಪಾರಂಪರ್ಯವಾಗಿ ಬಂದ ಸಿಂಹಾಸನವನ್ನು ಇಲ್ಲೇ ಎಲ್ಲೋ ನೆಲಮಾಳಿಗೆಯಲ್ಲಿಟ್ಟು ಪ್ರತಿಷ್ಠಿಸಿದ್ದನೆಂದು ಕೇಳಿದ್ದೆವು. ಈಗ ಹಾವು ಬಂದು, ಯಾವ ಮರದಡಿಯಲ್ಲಿ ಈ ಹಕ್ಕನಿಗೆ ಕೊಡೆಹಿಡಿಯಿತೋ ಅದೇ ಮರದಡಿಯಲ್ಲಿ ಸಿಂಹಾಸನವಿರುವ ನೆಲಮಾಳಿಗೆ ಇರಬಹುದು,' ಎಂದುಕೊಂಡು ಸ್ವಾಮಿಗಳು ಅಲ್ಲಿ ಅಗೆಸಿದರು.

ಸಿಂಹಾಸನ ಸಿಕ್ಕಿತು. ಅಭಿಜಿನ್ ಮುಹೂರ್ತದಲ್ಲಿ ಹಕ್ಕನಿಗೆ ರಾಜ್ಯಾಭಿಷೇಕವಾಯಿತು. ಅದೇ ಸಮಯದಲ್ಲಿ ಅವನಿಗೆ ಹರಿಹರರಾಯನೆಂದು ನಾಮಕರಣವಾಯಿತು. ಅದುವರೆಗೆ ಬರಿಯ ಬುಕ್ಕನಾಗಿದ್ದವನು ಈಗ ಬುಕ್ಕರಾಯನಾಗಿ ಯುವರಾಜನಾದ.

ಇಲ್ಲಿಂದ ಆರಂಭವಾಯಿತು ವಿಜಯನಗರ. ಇವರಿಂದ ಮುಂದೆ ಬಂದ ಅರಸರೆಲ್ಲ ಈ ರತ್ನಸಿಂಹಾಸನವನ್ನೇ ಏರಿ ರಾಜ್ಯಭಾರ ಮಾಡಿದರು.

ಈ ಪ್ರಕಾರವಾಗಿ ರತ್ನಸಿಂಹಾಸನದ ಕಥೆಯನ್ನು ಶ್ರೀರಂಗರಾಯನು ತನಗೆ ಆಪ್ತರಾದ ರಾಜಒಡೆಯರಿಗೆ ತಿಳಿಸಿದರು. ಶ್ರೀರಂಗಪಟ್ಟಣವನ್ನು ಅದರ ಜೊತೆಗೆ ಪರೀಕ್ಷಿತರಾಯನ ರತ್ನಸಿಂಹಾಸನವನ್ನು ಅವರಿಗೆ ಒಪ್ಪಿಸಿ ಕೊಟ್ಟು ನಿಶ್ಚಿಂತರಾದರು.

ಅನಂತರ ಶ್ರೀರಂಗರಾಯರು ತಮ್ಮ ಧರ್ಮಪತ್ನಿಯವರಾದ ಅಲಮೇಲಮ್ಮನವರೊಂದಿಗೆ ತಲಕಾಡಿನ ಬಳಿಯ ಮಾಲಂಗಿಗೆ ಪ್ರಯಾಣ ಮಾಡಿ

ದರು. ಅಲ್ಲಿ ಕೆಲವು ಕಾಲ ಇದ್ದು, ಕಾಯಿಲೆ ಗುಣವಾಗದೆ, ಕೀರ್ತಿನಾರಾಯಣಸ್ವಾಮಿಯವರ ಪಾದಾರವಿಂದಗಳಲ್ಲಿ ಐಕ್ಯವಾದರು.

ಶ್ರೀರಂಗರಾಯರ ಕಾಲಾನಂತರ [೧೬೧೦ರಲ್ಲಿ] ರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ಸಿಂಹಾಸನವನ್ನು ಆರೋಹಣಮಾಡಿದರು. ಅಲ್ಲಿ ಅವರಿಗೆ ಪಟ್ಟಾಭಿಷೇಕವಾಯಿತು.

ದುರ್ಗಾದೇವಿಗೆ ಮೀಸಲಾದ ನವರಾತ್ರಿಯ ಉತ್ಸವ ಪುರಾಣಪ್ರಸಿದ್ಧವಾದದ್ದು, ತುಂಬ ಹಿಂದಿನ ಕಾಲದಿಂದಲೂ ನಡೆದುಬಂದಿರುವುದು. ವಿಜಯನಗರದ ಅರಸರ ಕಾಲದಲ್ಲಿ ಇದಕ್ಕೊಂದು ವಿಶೇಷ ಸ್ಥಾನ ಬಂತು. ಮೈಸೂರಿನ ಅರಸರು ಚಾಮುಂಡೇಶ್ವರಿಯ ಭಕ್ತರಾದದ್ದರಿಂದ ಅವರೂ ಮೊದಲಿನಿಂದ ನವರಾತ್ರಿಯನ್ನು ನಡಸುತ್ತಿದ್ದರು.

ಈಗ ರತ್ನಸಿಂಹಾಸನ ಪ್ರಾಪ್ತವಾದ ಮೇಲೆ, ಅದುವರೆಗೆ ನಡೆಯುತ್ತಿದ್ದ ನವರಾತ್ರಿಯ ಉತ್ಸವಕ್ಕೆ ವಿಶೇಷವಾದ ಕಳೆ ಬಂತು. ಯಾವ ಯಾವ ದಿವಸ ಏನೇನು ದೇವತಾಕೈಂಕರ್ಯಗಳು ನಡೆಯಬೇಕು, ಯಾವ ಯಾವ ಲೌಕಿಕರಂಜನೆಗಳು ನಡೆಯಬೇಕು ಎಂಬುದನ್ನು ಒಡೆಯರು ತಾವೇ ಖುದ್ದು ವಿಚಾರಮಾಡಿ ನಿರ್ಣಯಿಸಿದರು. ಇದು ತಮ್ಮ ವಂಶಪಾರಂಪರ್ಯವಾಗಿ ನಡೆದುಕೊಂಡು ಬರಬೇಕೆಂದು ಅರಮನೆಯ ಆಯಕಟ್ಟಿನ ಕರಣಿಕನ ಕಡತದಲ್ಲಿ ವಿವರವಾಗಿ ಬರೆಯಿಸಿದರು.

ಆ ಕಾಲದಲ್ಲಿ ಆರಂಭವಾದ ನವರಾತ್ರಿಯ ಉತ್ಸವ ಅದೇ ಪ್ರಕಾರವಾಗಿ ಇಂದಿಗೂ ಶ್ರೀ ಚಾಮುಂಡೇಶ್ವರಿಯ ಅನುಗ್ರಹದಿಂದ ಮೈಸೂರಿನ ಅರಸರ ಮನೆಯಲ್ಲಿ ನಡೆದುಕೊಂಡು ಬರುತ್ತಿದೆ.

[ಆಧಾರ : ವಂಶಾವಳಿ]

೮. ಬೆಟ್ಟದ ಅರಸು

ರಾಜ ಒಡೆಯರ ಮಕ್ಕಳಲ್ಲಿ ಹಿರಿಯವರು ನರಸರಾಜ ಒಡೆಯರು. ಯುವರಾಜರಾದ ಇವರು ತಾವು ಪಟ್ಟಕ್ಕೆ ಬರುವ ಮೊದಲೇ, ತಾಯಿ ತಂದೆಯರನ್ನು ದುಃಖಕ್ಕೆ ಈಡುಮಾಡಿ ಸ್ವರ್ಗಸ್ಥರಾದರು.

ನರಸರಾಜ ಒಡೆಯರ ಮಕ್ಕಳು ಚಾಮರಾಜ ಒಡೆಯರು. ರಾಜ ಒಡೆಯರ ಅನಂತರ ಇವರು ಪಟ್ಟಕ್ಕೆ ಬಂದರು.

ರಾಜ ಒಡೆಯರು ಧರ್ಮದಿಂದ ರಾಜ್ಯ ಆಳಿದರು. ಹರಿಗೂ ಹರನಿಗೂ ಶಕ್ತಿಗೂ ಭೇದವಿಲ್ಲವೆಂದು ನಂಬಿ, ಎಲ್ಲ ದೇವರಿಗೂ ಏಕಪ್ರಕಾರವಾಗಿ ನಡೆದುಕೊಂಡರು. ಇವರು ಅವಸಾನ ಹೊಂದುವ ಕಾಲದಲ್ಲಿ ಒಂದು ಆಶ್ಚರ್ಯ ನಡೆಯಿತು. ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿಗೆ ಮಂಗಳಾರತಿಯಾಗುವ ಹೊತ್ತಿನಲ್ಲಿ, ರಾಜ ಒಡೆಯರು ಅಶ್ವಾರೂಢರಾಗಿ ಅಲ್ಲಿಗೆ ಬಂದು ಸ್ವಾಮಿಯಲ್ಲಿ ಐಕ್ಯವಾದಂತೆ ಜನ ಕಂಡರು!

'ಈಶ್ವರಾಂಶಸಂಭೂತರಾದ ರಾಜ ಒಡೆಯರು ನಾರಾಯಣನಿಗೂ ಪರಮೇಶ್ವರನಿಗೂ ಭೇದವಿಲ್ಲವೆಂದು ಕಣ್ಣೆದುರಿಗೆ ತೋರಿಸಿಕೊಟ್ಟರು' ಎಂದು ಅಲ್ಲಿ ನೆರೆದಿದ್ದ ಜನ ಹೇಳಿಕೊಂಡು ಹರ್ಷಪಟ್ಟರು.

ಹಿಂದೆ, ಯದುರಾಯರು ಮೈಸೂರಿಗೆ ಬರುವ ಮೊದಲು, ಮೈಸೂರಿನ ಅರಸರಾದ ಚಾಮರಾಜರು ಪುತ್ರಸಂತಾನವಿಲ್ಲದೆ ಪರಲೋಕಪ್ರಾಪ್ತರಾದಾಗ ಮಾರನಾಯಕನೆಂಬ ಅವರ ದಳವಾಯಿ ತಾನೇ ರಾಜ್ಯವನ್ನು ಆಕ್ರಮಿಸಬೇಕೆಂದು ಪ್ರಯತ್ನಿಸಿದ್ದ. ಯದುರಾಯರು ಅವನನ್ನು ಯುದ್ಧದಲ್ಲಿ ಕೊಂದು, ಗತಿಸಿದ ಚಾಮರಾಜರ ಕುಮಾರಿಯನ್ನು ಮದುವೆಯಾಗಿ ಮೈಸೂರಿಗೆ ಒಡೆಯರಾದರು. ಅಂದಿನಿಂದ ರಾಜ ಒಡೆಯರ ಕಾಲದವರೆಗೂ ಮತ್ತೆ ಯಾರೂ ದಳವಾಯಿಯಾಗಿ ನೇಮಕವಾಗಲಿಲ್ಲ. ಆಗಿನ ರಾಜ್ಯಕ್ಕೆ ಅಷ್ಟು ಸೈನ್ಯದ ಆವಶ್ಯಕತೆಯೂ ಇರಲಿಲ್ಲ.

ಒಮ್ಮೆ ರಾಜ ಒಡೆಯರು ತಮ್ಮ ಸಾಮಾಜಿಕರನ್ನು ಕುರಿತು ಹೀಗೆ ಹೇಳಿದರು : 'ನಾವು ನಮ್ಮ ಸೀಮೆಗಳನ್ನು ಇನ್ನೂ ವಿಸ್ತರಿಸಬೇಕಾದರೆ, ನಮ್ಮ ಸೇನೆಯನ್ನು ಹೆಚ್ಚಿಸಬೇಕು. ಅದನ್ನು ವಿಚಾರಿಸಿಕೊಳ್ಳುವುದಕ್ಕೆ ಪ್ರಾಮಾಣಿಕನಾದ ದಳವಾಯಿ ಇರಬೇಕು. ನಮ್ಮ ಸೋದರಳಿಯನಾದ ಕರಿಕಾಲ ಮಲ್ಲರಾಜಯ್ಯನನ್ನು ನೇಮಿಸಬೇಕೆಂದಿದ್ದೇವೆ.'

ಸಭಿಕರು ಒಪ್ಪಿದರು. ಒಡೆಯರು ಅವನಿಗೆ ದಳವಾಯಿತನದ ಉಂಗುರವನ್ನು ಕೊಟ್ಟು ನೇಮಕಮಾಡಿದರು. ಅವನು ಮೊದಲು ಒಪ್ಪಿಕೊಂಡ. ತನಗೆ ಬಿಟ್ಟ ಕಳಲೆಯೆಂಬ ಗ್ರಾಮಕ್ಕೆ ಹೋಗುತ್ತೇನೆ ಎಂದು ಹೊರಟ. ಅಲ್ಲಿಗೆ ಹೋಗದೆ ತನ್ನ ಮಾವನ ಮನೆಯಾದ ಯಳಂದೂರಿಗೆ ಹೋಗಿ, ತನ್ನ ಮೊಮ್ಮಗನಾದ ನಂದಿನಾಥಯ್ಯನೆಂಬ ಹುಡುಗನ ಕೈಯಲ್ಲಿ ದಳವಾಯಿತನದ ಉಂಗುರವನ್ನು ಹಿಂದಕ್ಕೆ ಕಳಿಸಿಬಿಟ್ಟ.

ರಾಜ ಒಡೆಯರಿಗೆ ಅಸಮಾಧಾನವಾಯಿತು. 'ಮಾಡಿಸಿಕೊಂಡ ಉಪಕಾರವನ್ನು ನೆನೆಯುವ ಕೃತಜ್ಞತೆ ಇಲ್ಲ. ಇವನ ಕುಲದ ಬುದ್ಧಿಯೇ ಹೀಗೆ' ಎಂದು ಹಿಂದಿನ ಕತೆಯನ್ನು ಹೇಳಿದರು :

'ಈ ಮಲ್ಲರಾಜಯ್ಯನ ತಂದೆ ತಿಮ್ಮರಾಜಯ್ಯ ನಮಗೆ ಭಾವ. ತಿಮ್ಮರಾಜಯ್ಯ ತೀರಿಕೊಂಡ ಮೇಲೆ ಅವನ ಹಿರಿಯ ಹೆಂಡತಿಯ ಮಗ ಲಕ್ಷ್ಮೀಕಾಂತಯ್ಯ ತನ್ನ ತಮ್ಮಂದಿರನ್ನು ಕಾಪಾಡಿಕೊಂಡಿದ್ದ. ಅವನ ಬಲತಾಯಿಯ ಮೂವರು ಮಕ್ಕಳು ತಂದೆಯ ಆಸ್ತಿಯನ್ನು ತಾವೇ ಹೊಡೆಯಬೇಕೆಂದು ಲಕ್ಷ್ಮೀಕಾಂತಯ್ಯನನ್ನು ಕೊಂದುಹಾಕಿದರು. ಆಗ ಈ ಮಲ್ಲರಾಜಯ್ಯನಿಗೆ ಐದು ವರ್ಷ. ಇವನನ್ನೂ ಕೊಂದುಹಾಕಬೇಕೆಂದು ಹುಡುಕಿದರು. ಹುಡುಗ ಹೆದರಿಕೊಂಡು ಕುಂಬಾರ ಕೇರಿಗೆ ಓಡಿದ. ಅಲ್ಲಿ ಹುಚ್ಚನ ಕರಿಯ ಎಂಬ ಕುಂಬಾರ ಇವನು ನಮ್ಮ ಸೋದರಳಿಯ ಎಂಬುದನ್ನು ತಿಳಿದು, ರಾತ್ರಿಯಲ್ಲಿ ಇಲ್ಲಿಗೆ ತಂದುಬಿಟ್ಟ. ಬಳಿಕ ನಾವು ಬಾಲ್ಯದಿಂದ ವಿದ್ಯಾಬುದ್ಧಿಗಳನ್ನು ಕಲಿಸಿ, ಉಪನಯನ ವಿವಾಹಗಳನ್ನು ಮಾಡಿ, ಕಳಲೆಯನ್ನು ಆಕ್ರಮಿಸಿಕೊಂಡಿದ್ದ ಅಣ್ಣಂದಿರನ್ನು ಓಡಿಸಿ, ಇವನಿಗೆ ಸ್ವಾಧೀನಮಾಡಿದೆವು. ದುಷ್ಟವಂಶದಲ್ಲಿ ಹುಟ್ಟಿದವನಿಗೆ ಈ ದುಷ್ಟಬುದ್ಧಿ ಸಹಜವಾದದ್ದೇ!' ಎಂದರು.

'ನನ್ನ ಅಣ್ಣಂದಿರಾದ ಬೆಟ್ಟದ ಚಾಮರಾಜ ಒಡೆಯರ ಮಕ್ಕಳು ಬೆಟ್ಟದ ಒಡೆಯರು. ಬಾಲ್ಯದಿಂದಲೂ ವಿದ್ಯಾಬುದ್ಧಿಗಳನ್ನು ಕಲಿತು ಶೂರರಾಗಿದ್ದಾರೆ. ಅವರನ್ನು ದಳವಾಯಿಯಾಗಿ ನೇಮಕ ಮಾಡಬಹುದು' ಎಂದುಕೊಂಡರು.

ಅದರಂತೆ ಬೆಟ್ಟದ ಒಡೆಯರು ದಳವಾಯಿ ಆದರು. ರಾಜ ಒಡೆಯರಿಗೆ ಬಲಗೈಯಾಗಿ ಇದ್ದು ಸೈನ್ಯದ ಏಳಿಗೆಗೆ ನೆರವಾದರು. ಉದ್ಧತರಾದ ಪಾಳಯಗಾರರ ಮೇಲೆ ದಂಡೆತ್ತಿ ಹೋಗಿ, ಅವರನ್ನು ಸೋಲಿಸಿ, ಕಪ್ಪ ಕಾಣಿಕೆಗಳನ್ನು ಸಂಪಾದಿಸಿ, ರಾಜ್ಯದ ಭಂಡಾರವನ್ನು ಬೆಳೆಸಿದರು.

ರಾಜ ಒಡೆಯರ ಅನಂತರ ಪಟ್ಟಕ್ಕೆ ಬಂದ ಚಾಮರಾಜ ಒಡೆಯರ ಕಾಲದಲ್ಲೂ ಬೆಟ್ಟದ ಒಡೆಯರು ದಳವಾಯಿ ಆಗಿದ್ದರು.

ಬೆಟ್ಟದ ಒಡೆಯರಿಗಿಂತ ದೊಡ್ಡವರೂ ಅರಮನೆಯಲ್ಲಿ ಆಗಾಗ್ಗೆ ಬಂದು ಸೇರಿಕೊಂಡಿದ್ದ ಕೆಲವರು ಹಳಬರು ದೊರೆಗಳ ಬುದ್ಧಿ ಬೆಳೆಯುವುದಕ್ಕೆ ಅವಕಾಶ ಕೊಡದೆ, ಅವರು ಸದಾ ಸಂಗಡಿಗರೊಡನೆ ಆಟವಾಡುತ್ತ ಇರುವಂತೆ ಮಾಡಿದರು.

ಇವರು ಯಾರೂ ದೊರೆಗಳ ಹತ್ತಿರ ಸುಳಿಯದಂತೆ ಬೆಟ್ಟದ ಅರಸು ಮಾಡಿದ ಕಟ್ಟುಪಾಡುಗಳಿಂದಲೂ ಪ್ರಯೋಜನವಾಗಲಿಲ್ಲ. 'ನಮ್ಮನ್ನು ಕಟ್ಟುಪಾಡು ಮಾಡುವುದಕ್ಕೆ ಇವರು ಯಾರು?' ಎಂದು ದೊರೆಗಳೇ ದಳವಾಯಿಯನ್ನು ತಿರಸ್ಕರಿಸಿದರು.

'ನಮ್ಮಂಥ ಹಿತೈಷಿಗಳ ಮಾತು ಪ್ರಭುಗಳಿಗೆ ಬೇಡವಾದ ಮೇಲೆ ನಾವು ಇಲ್ಲಿ ಇದ್ದು ಏನು ಪ್ರಯೋಜನ?' ಎಂದು ಬೆಟ್ಟದ ಅರಸು ನೊಂದುಕೊಂಡರು.

ಅವರ ತಮ್ಮ ದೊಡ್ಡ ಚಾಮಪ್ಪನೂ ಅವರ ಮಗ ಚಿಕ್ಕ ಚಾಮಪ್ಪನೂ ಬೆಟ್ಟದ ಅರಸು ನೊಂದುದನ್ನು ಕಂಡು, "ಮಾಟವಾದರೂ ಮಾಡಿಸಿ, ವಿಷವಾದರೂ ಕುಡಿಸಿ, ಈ ಚಾಮರಾಜನನ್ನು ಕೊಲ್ಲಿಸಿಬಿಟ್ಟರೆ, ಹಿಂದಿನ ಪ್ರಭುಗಳ ಹಿರಿಯ ಕುಮಾರ ಇಮ್ಮಡಿ ರಾಜ ಒಡೆಯರನ್ನು ಪಟ್ಟಕ್ಕೆ ತರಬಹುದು" ಎಂದು ಏಕಾಂತದಲ್ಲಿ ಮಾತಾಡಿಕೊಂಡರು.

ಅದನ್ನು ಅಲ್ಲಿ ಮರೆಯಲ್ಲಿದ್ದ ಒಬ್ಬ ದಾಸಿ ಕೇಳಿಸಿಕೊಂಡಳು. ಅದನ್ನು ಪ್ರಭುಗಳ ತಾಯಿಗೆ ತಿಳಿಸಿದಳು. ಅವರು ಅದನ್ನು ಪ್ರಭುಗಳಿಗೆ ತಿಳಿಸಿದರು. ಪ್ರಭುಗಳು ಅದು ನಿಜವೋ ಸುಳ್ಳೋ ಎಂದು ವಿಚಾರಿಸಿದರು.

ದೊಡ್ಡ ಚಾಮಪ್ಪನೂ ಚಿಕ್ಕ ಚಾಮಪ್ಪನೂ ತಾವು ಹಾಗೆ ಹೇಳಿದ್ದು ಹೌದೆಂದು ಒಪ್ಪಿಕೊಂಡರು. ಅವರಿಬ್ಬರಿಗೂ ಮರಣಾಂತ ಶಿಕ್ಷೆಯಾಯಿತು.

ಇನ್ನು ತನ್ನನ್ನು ಏನು ಮಾಡುವರೋ ಎಂದು ಬೆಟ್ಟದ ಅರಸರು ಮೈಸೂರನ್ನು ಬಿಟ್ಟು ಹೋಗುವವರಾಗಿದ್ದರು. "ಇವರು ಇಲ್ಲಿಂದ ಹೊರಟು ಹೋದರೆ, ಯಾರಾದರೂ ಪಾಳೆಯಗಾರರನ್ನು ಆಶ್ರಯಿಸಿ ನಮ್ಮ ಮೇಲೆ ಕಾರ್ಯಭಾರ ನಡಸಿಯಾರು" ಎಂದುಕೊಂಡು, ಚಾಮರಾಜ ಒಡೆಯರು ಬೆಟ್ಟದ ಒಡೆಯರನ್ನು ಹಿಡಿತರಿಸಿದರು. ಅವರ ಕಣ್ಣುಗಳಿಗೆ ಭಾಂಡ ಕರ್ಪೂರವನ್ನು ಕಟ್ಟಿಸಿ, ಕಣ್ಣನ್ನು ಕೀಳಿಸಿದರು. 'ರಾಜದ್ರೋಹಕ್ಕೆ ಇದು ಶಿಕ್ಷೆ. ಇನ್ನು ನೀವು ನಿಮ್ಮ ಮನೆಯಲ್ಲಿ ಸೆರೆಯಾಗಿರತಕ್ಕದ್ದು' ಎಂದು ಆಜ್ಞೆ ಮಾಡಿದರು.

ಮುಂದೆ ಬಸವ್ವರು ಲಿಂಗಣ್ಣನೆಂಬವ ದಳವಾಯಿಯಾದ. ಅನಂತರ ಬಸವಲಿಂಗಣ್ಣ ಎಂಬವ ದಳವಾಯಿಯಾದ. ಅವರಾದ ಮೇಲೆ ವಿಕ್ರಮ ರಾಜಯ್ಯನೆಂಬಾತ ದಳವಾಯಿಯಾದ. ವಿಕ್ರಮರಾಯ ಮಹಾರಾಜರನ್ನೂ ಮೀರಿಸಿದವನಾದ.

ಯೌವನ, ಧನಸಂಪತ್ತಿ, ಪ್ರಭುತ್ವ, ಅವಿವೇಕತೆ–ಇವು ಒಂದೊಂದೇ ಆದರೂ ಅನರ್ಥವನ್ನು ಉಂಟುಮಾಡುತ್ತವೆ ಎಂದ ಮೇಲೆ, ಇವು ನಾಲ್ಕೂ ಕೂಡಿದರೆ ಕೇಳಬೇಕೆ? ರಾಜಒಡೆಯರ ಮೊಮ್ಮಕ್ಕಳಾದ ಚಾಮರಾಜ ಒಡೆಯರು ಇದಕ್ಕೆ ಒಳ್ಳೆಯ ಉದಾಹರಣೆ.

(ಆಧಾರ : ವಂಶಾವಳಿ)

೯. ವಿಕ್ರಮರಾಯ

ರಾಜಒಡೆಯರ ಅನಂತರ ಅವರ ಮೊಮ್ಮಕ್ಕಳಾದ ಚಾಮರಾಜ ಒಡೆಯರು ಪಟ್ಟಕ್ಕೆ ಬಂದರು. ಅವರು ತಮಗೆ ನಿಷ್ಠೆಯಿಂದ ಸೇವೆ ಮಾಡುತ್ತಿದ್ದ ದಳವಾಯಿ ಬೆಟ್ಟದ ಅರಸರನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದೆ, ಅವರನ್ನು ಕ್ರೂರವಾಗಿ ಶಿಕ್ಷಿಸಿದರು. ಬೆಟ್ಟದ ಅರಸರ ಅನಂತರ ಅವರಷ್ಟು ಯೋಗ್ಯತೆಯಿಲ್ಲದಿದ್ದರೂ ಸಮರ್ಥರಾದ ಬನ್ನೂರು ಲಿಂಗಣ್ಣ ಮತ್ತು ಬಸವ ಲಿಂಗಣ್ಣ ಎಂಬವರು ದಳವಾಯಿಗಳಾದರು. ಇವರಾದ ಮೇಲೆ ವಿಕ್ರಮರಾಯನೆಂಬವನು ದಳವಾಯಿಯಾದ. ಈತ ರಾಜಒಡೆಯರ ಅಣ್ಣಂದಿರಾದ ಬೆಟ್ಟದ ಚಾಮರಾಜ ಒಡೆಯರ ಬಂಗಾರದಾಕೆಯ ಮಗ. ಅತ್ಯಂತ ಸಮರ್ಥ, ಬುದ್ಧಿವಂತ. ಆದರೆ ರಾಜದ್ರೋಹ ಮಾತ್ರ, ಅವನ ಉದ್ದಕ್ಕೂ ತುಂಬಿಕೊಂಡಿತ್ತು. ಅದರಿಂದಲೇ ಅವನು ಸಾಯಬಾರದ ರೀತಿಯಲ್ಲಿ ಕೊಲೆಯಾಗಿ ಸತ್ತ.

ರಾಜಒಡೆಯರು ಕಾಲವಾದಾಗ ಅವರ ಕಿರಿಯ ಕುಟುಂಬ ಎಡವನಹಳ್ಳಿ ತಿಮ್ಮಾಜಮ್ಮಣ್ಣಿಯವರು ಗರ್ಭಿಣಿಯಾಗಿದ್ದರು. 'ಇವರಿಗೆ ಒಬ್ಬ ಗಂಡು ಮಗ ಆಗುತ್ತಾನೆ. ಅವನಿಗೆ ಇಮ್ಮಡಿ ರಾಜಒಡೆಯನೆಂದು ನಾಮಕರಣ ಮಾಡಿ. ನಮ್ಮ ಮೊಮ್ಮಕ್ಕಳಾದ ಚಾಮರಾಜಒಡೆಯರ ಅನಂತರ ಇಮ್ಮಡಿ ರಾಜಒಡೆಯರು ಪಟ್ಟಕ್ಕೆ ಬರಲಿ' ಎಂದು ರಾಜಒಡೆಯರು ಹೇಳಿದ್ದರು. ಅದಕ್ಕೆ ಅನುಸಾರವಾಗಿ ಚಾಮರಾಜ ಒಡೆಯರು ತಾವು ಸ್ವರ್ಗಸ್ಥರಾಗುವ ಮೊದಲು ಇಮ್ಮಡಿ ರಾಜಒಡೆಯರಿಗೆ ಪಟ್ಟಾಭಿಷೇಕ ಮಾಡಿಸಿದರು. ವಿಕ್ರಮರಾಯನನ್ನು ದಳವಾಯಿಯಾಗಿ ನೇಮಕಮಾಡಿದರು.

ರಾಜಒಡೆಯರು ಇನ್ನೂ ಚಿಕ್ಕವಯಸ್ಸಿನವರಾದ್ದರಿಂದ ಅವರ ಅಧಿಕಾರವೆಲ್ಲ ದಳವಾಯಿ ವಿಕ್ರಮರಾಯನ ಕೈಯಲ್ಲಿತ್ತು. ಸೈನ್ಯ ಅವನು ಹೇಳಿದ ಹಾಗೆ ಕೇಳುತ್ತಿತ್ತು. ಅರಮನೆಯಲ್ಲಿ ಅವನ ಮಾತಿಗೆ ಎದುರಿರಲಿಲ್ಲ. ಅರಸ ಎಂಬ ಹೆಸರು ಇಲ್ಲದೆ ಅವನೇ ಅರಸನಾಗಿಬಿಟ್ಟಿದ್ದ.

ಬರುಬರುತ್ತ ವಿಕ್ರಮರಾಯನಿಗೆ ಅಧಿಕಾರದ ದುರಾಸೆ ಅಧಿಕವಾಯಿತು. ದೊರೆಯನ್ನು ತನ್ನ ಕೈಗೊಂಬೆ ಮಾಡಿಕೊಂಡು ತಾನೇ ಸರ್ವಾಧಿಕಾರಿಯಾಗ ತೊಡಗಿದ.

ಆದರೆ ಇಮ್ಮಡಿ ರಾಜಒಡೆಯರು ವಯಸ್ಸಿನಲ್ಲಿ ಚಿಕ್ಕವರಾದರೂ ಜಾಣರಾಗಿದ್ದರು, ಸಮರ್ಥರಾಗಿದ್ದರು. ಸಿಂಹದ ಮರಿ ಸಣ್ಣದಾದರೂ ಅದು ಸಿಂಹದ ಮರಿಯೇ! ವಿಕ್ರಮರಾಯನನ್ನು ಹದ್ದಿನಲ್ಲಿಟ್ಟು ತಮ್ಮ ರಾಜ್ಯಾಧಿಕಾರವನ್ನು ತಾವು ನಡಸಲು ಉದ್ಯುಕ್ತರಾದರು.

ಆಗ ವಿಕ್ರಮರಾಯನು ಗುಟ್ಟಾಗಿ ಅವರಿಗೆ ವಿಷಹಾಕಿಸಿ ಅವರನ್ನು ಕೊಲ್ಲಿಸಿಬಿಟ್ಟ. ತಾನು ಮೇಲೇರುವುದಕ್ಕೆ ಇದ್ದ ಅಡ್ಡಿಯನ್ನು ತೆಗೆದು ಹಾಕಿದೆನೆಂದುಕೊಂಡ.

ಇಮ್ಮಡಿ ರಾಜಒಡೆಯರಾದ ಮೇಲೆ ಪಟ್ಟಕ್ಕೆ ಉತ್ತರಾಧಿಕಾರಿಯಾದವರು ಬೆಟ್ಟದ ಚಾಮರಾಜ ಒಡೆಯರ ಮಕ್ಕಳಾದ ಕಂಠೀರವ ನರಸರಾಜ ಒಡೆಯರು. ಇಮ್ಮಡಿ ರಾಜಒಡೆಯರು ಕಾಲವಾದಾಗ ಇವರು ತಮ್ಮ ತಂದೆಯೊಂದಿಗೆ ತೆರಕಣಾಂಬಿಯಲ್ಲಿ ಇದ್ದರು. ರಾಜರ ಮರಣದ ವಾರ್ತೆ ತಿಳಿದು ಮೈಸೂರಿಗೆ ಬಂದರು.

ರಾಜ್ಯಕ್ಕೆ ಉತ್ತರಾಧಿಕಾರಿಯಾದವರು ಬಂದಾಗ ದಳವಾಯಿ ವಿಕ್ರಮರಾಯ ಅವರನ್ನು ರಾಜಮರ್ಯಾದೆಗಳಿಂದ ಎದುರುಗೊಳ್ಳಬೇಕಾಗಿತ್ತು. ರಾಜ್ಯ ಕೋಶಗಳನ್ನು ಅವರಿಗೆ ಒಪ್ಪಿಸಬೇಕಾಗಿತ್ತು. ಅವನು ಹಾಗೆ ಮಾಡಲಿಲ್ಲ. ಅವರನ್ನು ಅರಮನೆಯ ಹೊರಗಿನ ಮನೆಯೊಂದರಲ್ಲಿ ಇಳಿಸಿದ. ಮರ್ಯಾದೆಗೆ ಕೆಲವು ಸೇವಕರನ್ನು ನೇಮಿಸಿದ. ತಾನು ಬಂದು ಅವರನ್ನು ಕಾಣಲಿಲ್ಲ. ಅವರನ್ನು ತಾನು ಲಕ್ಷ್ಯ ಮಾಡುತ್ತಿಲ್ಲವೆಂಬುದು ಎಲ್ಲರಿಗೂ ತಿಳಿಯುವಂತೆ ನೆರೆಹೊರೆಯ ಪ್ರಾಂತಗಳಲ್ಲಿ ಸಂಚಾರಮಾಡುವ ನೆಪಹಾಕಿಕೊಂಡು ಊರಲ್ಲಿರದೆ ಹೋದ.

ಕಂಠೀರವ ನರಸರಾಜರಿಗೆ ಇದರಿಂದ ಅಸಮಾಧಾನವಾಯಿತು. ಅವರ ಅಸಮಾಧಾನವನ್ನು ಗೂಢಚಾರರು ಹೋಗಿ ವಿಕ್ರಮರಾಯನಿಗೆ ತಿಳಿಸಿದರು. ವಿಕ್ರಮರಾಯ ಅದನ್ನು ಕೇಳಿ, ತಿರಸ್ಕಾರದಿಂದ ನಕ್ಕು, 'ಅಸಮಾಧಾನವಾದರೆ ಆಗಲಿ. ನಾವು ಇನ್ನೂ ಅವರಿಗೆ ಪಟ್ಟಾಭಿಷೇಕ ಮಾಡಿಲ್ಲವೆಂಬುದು

ಅವನ ನೆನಪಿನಲ್ಲಿ ಇರಲಿ' ಎಂದ. ಸಂಚಾರವನ್ನು ಮುಂದುವರಿಸಿದ. ಬೇಗ ಮೈಸೂರಿಗೆ ಬರಲಿಲ್ಲ.

ವಿಕ್ರಮರಾಯನನ್ನು ಕಂಡರೆ ಅರಮನೆಯವರಿಗೆಲ್ಲ ಹೆದರಿಕೆ, ಊರಿನವರಿಗೆಲ್ಲ ಹೆದರಿಕೆ. ಅವನ ಅಕಾರ್ಯಗಳು ಎಲ್ಲರಿಗೂ ಗೊತ್ತಿದ್ದರೂ ಯಾರೂ ಬಾಯಿ ಬಿಡುತ್ತಿರಲಿಲ್ಲ. ಜೀವಭಯದಿಂದ ನಡುಗುತ್ತ ಒಳಗೊಳಗೇ ಅವನಿಗೆ ಶಾಪಹಾಕುತ್ತಿದ್ದರು.

ವಿಕ್ರಮರಾಯನ ರಾಜದ್ರೋಹದಿಂದ ರೋಸಿಹೋದವರಲ್ಲಿ ಇಬ್ಬರು ಅರಮನೆಯ ಸೇವಕರು, ರಾಜಮಾತೆಯ ಸಂಕಟವನ್ನು ನೋಡಿ ಸಂಕಟಪಟ್ಟಿದ್ದರು. ಕಂಠೀರವ ನರಸರಾಜರಿಗೆ ಆದ ಅವಮಾನವನ್ನು ಅವರಿಗೆ ಸಹಿಸಲಾಗಲಿಲ್ಲ. ಅವರು ಗುಟ್ಟಾಗಿ ನರಸರಾಜರ ಹತ್ತಿರ ಹೋದರು.

'ಬುದ್ಧೀ, ದಳವಾಯಿ ವಿಕ್ರಮರಾಯರು ಆಳಿದ ಮಹಾಸ್ವಾಮಿಯವರನ್ನು ವಿಷ ಹಾಕಿಸಿ ಕೊಲ್ಲಿಸಿದರು. ಅವರಿಗೆ ತಕ್ಕ ಶಿಕ್ಷೆಯಾಗಬೇಕು. ಮಹಾಸ್ವಾಮಿಯವರು ಅಪ್ಪಣೆ ಕೊಟ್ಟರೆ ನಾವೇ ಅವರಿಗೆ ತಕ್ಕದ್ದನ್ನು ಮಾಡುತ್ತೇವೆ' ಎಂದು ಬಿನ್ನವಿಸಿಕೊಂಡರು.

'ನಾವು ಹೇಳುವವರೆಗೂ ನೀವು ಯಾವುದಕ್ಕೂ ದುಡುಕದಿರಿ' ಎಂದು ನರಸರಾಜರು ಅವರನ್ನು ಸಮಾಧಾನಮಾಡಿದರು.

ವಿಕ್ರಮರಾಯ ಹಿಂದಿರುಗಿ ಬಂದು ಏನು ಮಾಡುವನೋ ನೋಡಬೇಕೆಂದು ಎಲ್ಲರೂ ಕಾತರರಾಗಿದ್ದರು.

ಕೆಲವು ದಿವಸದ ಮೇಲೆ ವಿಕ್ರಮರಾಯ ಮೈಸೂರಿಗೆ ಹಿಂದಿರುಗಿ ಬಂದ. ರಾಜ್ಯದ ಉತ್ತರಾಧಿಕಾರಿಯನ್ನು ಕಾಣದೆ ಎಷ್ಟು ದಿನ ಇರಲು ಸಾಧ್ಯ? ಇಷ್ಟು ದಿವಸ ಕಾಯಿಸಿದುದು ಸಾಕು ಎಂದುಕೊಂಡು ವಿಕ್ರಮರಾಯ ಅಂದು ಸಂಜೆ ನರಸರಾಜರ ಬಿಡಾರಕ್ಕೆ ಹೋಗಿ ಅವರನ್ನು ಕಂಡ. ತಾನು ಬಂಗಾರದಾಕೆಯ ಮಗನಾದರೂ ಅವರು ಧರ್ಮಪತ್ನಿಯ ಮಕ್ಕಳಾದರೂ ಇಬ್ಬರಿಗೂ ಒಬ್ಬರೇ ತಂದೆ ಎಂಬ ಸಲಿಗೆಯಿಂದ ಏಕವಚನದಲ್ಲಿ ಮಾತನಾಡಿಸಿದ. ಅದರಿಂದ ನರಸರಾಜರಿಗೆ ಆದ ಅಸಮಾಧಾನವನ್ನು ಕಂಡುಕೊಂಡ.

ಮುಂದೆ ಮಾಡಬೇಕಾದ ಕರ್ತವ್ಯವೇನು ಎಂದು ಯೋಚಿಸುತ್ತ ವಿಕ್ರಮರಾಯ ತನ್ನ ಮನೆಗೆ ಹೊರಟ. ರಾತ್ರಿಯ ವೇಳೆಯಾದ್ದರಿಂದ

ಅವನಿಗೆ ದಾರಿ ತೋರಿಸಲು ಒಬ್ಬ ಪಂಜಿನವನೂ ಜೊತೆಗೆ ಹೊರಟ.

ವಿಕ್ರಮರಾಯನಿಗೆ ತಕ್ಕ ಶಿಕ್ಷೆ ಮಾಡಬೇಕು ಎಂದು ನರಸರಾಜರ ಹತ್ತಿರ ವಿಜ್ಞಾಪನೆ ಮಾಡಿಕೊಂಡಿದ್ದ ಆ ಸೇವಕರಿಬ್ಬರೂ ಆ ದಾರಿಯಲ್ಲಿ ಹೊಂಚು ಕಾಯುತ್ತಿದ್ದರು. ವಿಕ್ರಮರಾಯನನ್ನು ಕಂಡು, ಅವನ ಮನೆಯ ಕೈಗೋಡೆಯನ್ನು ಹತ್ತಿ, ಅಂಗಳದಲ್ಲಿ ಅವಿತುಕೊಂಡಿದ್ದರು. ವಿಕ್ರಮರಾಯ ಅಂಗಳದೊಳಕ್ಕೆ ಬಂದಾಗ ಒಬ್ಬ ಪಂಜಿನವನ ಮೇಲೆ ಹಾರಿ ಅವನನ್ನು ಉರುಳಿಸಿದ. ಇನ್ನೊಬ್ಬ ವಿಕ್ರಮರಾಯನ ಮೇಲೆ ಹಾರಿದ. 'ಯಾರು ನೀನು ?' ಎಂದು ವಿಕ್ರಮ ಗರ್ಜಿಸಿದ. 'ನಿನ್ನ ಶತ್ರು !' ಎಂದು ಆ ಸೇವಕ ತಾನೂ ಗರ್ಜಿಸಿ ವಿಕ್ರಮರಾಯನಿಗೆ ಒಂದು ಒದೆ ಕೊಟ್ಟ.

ಆದರೆ ವಿಕ್ರಮರಾಯ ಬಲಶಾಲಿ. ತನ್ನ ಮೇಲೆ ಎರಗಿದವನನ್ನು ಹೊಡೆದು ಉರುಳಿಸಿ, ಅವನ ಎದೆಯ ಮೇಲೆ ಕುಳಿತು, ಅವನ ಕೊರಳು ಹಿಸುಕಿದ. ಅವನು ತನ್ನ ಸ್ನೇಹಿತನಿಗಾಗಿ ಕೂಗಿಕೊಂಡ. ಕತ್ತಲೆಯಲ್ಲಿ ಏನೂ ಕಾಣಿಸದೆ ಇದ್ದದ್ದರಿಂದ ಅವನು 'ನೀನ್ ಕೆಳಗೊ ? ಮೇಗೊ ?' ಎಂದು ಕೇಳಿದ. 'ಕೆಳಗೆ' ಎಂದು ಉತ್ತರ ಬಂತು. ಒಡನೆಯೆ ಅವನು ತನ್ನ ಕಠಾರಿಯನ್ನು ಹಿರಿದು, ಮೇಲಿದ್ದ ವಿಕ್ರಮರಾಯನನ್ನು ಚೆನ್ನಾಗಿ ತಿವಿದುಬಿಟ್ಟ.

ವಿಕ್ರಮರಾಯನ ಹಿಡಿತ ಸಡಿಲವಾಯಿತು. 'ಹಾ !' ಎಂದು ವಿಕಾರವಾಗಿ ಕೂಗುತ್ತ ಅವನು ಪ್ರಾಣಬಿಟ್ಟ.

ದುಷ್ಟನಾದ ದಳವಾಯಿಯ ಹಿಡಿತದಿಂದ ಮೈಸೂರು ಪಾರಾಯಿತು. ಕಂಠೀರವ ನರಸರಾಜ ಒಡೆಯರು ಮಾರನೇ ದಿನ ಮೈಸೂರನ್ನು ವಶಪಡಿಸಿ ಕೊಂಡರು. ಅನಂತರ ಶ್ರೀರಂಗಪಟ್ಟಣದಲ್ಲಿ ಅವರಿಗೆ ಪಟ್ಟಾಭಿಷೇಕವಾಯಿತು.

[ಆಧಾರ : ವಂಶಾವಳಿ, ವಿಲ್ಕ್ಸ್]

೧೦. ವಿಜಯ ನಾರಸಿಂಹ

ಇಮ್ಮಡಿ ರಾಜಒಡೆಯರ ಕಾಲಾನಂತರ ಕಂಠೀರವ ನರಸರಾಜ ಒಡೆಯರು ಪಟ್ಟಕ್ಕೆ ಬಂದರು. ಇವರು ರಾಜಒಡೆಯರ ಅಣ್ಣಂದಿರಾದ ಬೆಟ್ಟದ ಚಾಮರಾಜ ಒಡೆಯರ ಮಕ್ಕಳು.

ಇವರು ಧೀರರು, ಯಾವುದಕ್ಕೂ ಯಾರಿಗೂ ಹೆದರುತ್ತಿರಲಿಲ್ಲ. ಇವರು ವೀರರು, ಮಾಡಬೇಕಾದ್ದನ್ನು ಉತ್ಸಾಹದಿಂದ ಮಾಡುತ್ತಿದ್ದರು. ಇವರು ಶೂರರು, ಪರಾಕ್ರಮದಿಂದ ಮುಂದುವರಿದು ತಮ್ಮ ಗುರಿಯನ್ನು ಬಿಡದೆ ಸಾಧಿಸುತ್ತಿದ್ದರು. ತಾಯಿತಂದೆಯರಲ್ಲಿ ಭಕ್ತಿ, ಪ್ರಜೆಗಳಲ್ಲಿ ಅನುರಾಗ, ಪರಿವಾರದವರಲ್ಲಿ ಪ್ರೀತಿ, ದೇವರಲ್ಲಿಯೂ ಗುರುಹಿರಿಯರಲ್ಲಿಯೂ ವಿನಯ–ಇವೇ ಮೊದಲಾದ ಸದ್ಗುಣಗಳಿಂದ ಇವರು ಹೆಸರುವಾಸಿಯಾಗಿದ್ದರು.

ಮೈಸೂರಿನ ಸುತ್ತುಮುತ್ತಿನ ತುಂಟ ಪಾಳಯಗಾರರನ್ನು ಅಡಗಿಸಿ ಸ್ವಾಧೀನಪಡಿಸಿಕೊಂಡು, ರಣದುಲ್ಲಾಖಾನನೇ ಮೊದಲಾದ ತುರುಷ್ಕ ಸರದಾರರನ್ನು ಹೊಡೆದೋಡಿಸಿ, “**ರಣಧೀರ**” ಎಂಬ ಬಿರುದನ್ನು ಪಡೆದರು.

ಸಾಹಸವೆಂಬುದು ಇವರಿಗೆ ಹುಟ್ಟುಗುಣವಾಗಿತ್ತು.

ಇವರು ಪಟ್ಟಕ್ಕೆ ಬರುವ ಮೊದಲು ತಮ್ಮ ತಂದೆಯೊಡನೆ ತೆರಕಣಾಂಬಿಯಲ್ಲಿ ಇದ್ದರು. ತಂದೆಗೆ ಹೇಗೋ ಹಾಗೆಯೇ ಇವರಿಗೂ ಗರಡಿಯ ಮನೆಯೆಂದರೆ ತುಂಬ ಇಷ್ಟ. ಮಲ್ಲಶಾಲೆಯ ಶಿಕ್ಷಣಕ್ಕೆ ಮೈಯನ್ನು ಒಳಪಡಿಸಿ, ಇವರು ಚಿಕ್ಕಂದಿನಲ್ಲಿಯೇ ಒಳ್ಳೆಯ ಜಟ್ಟಿಯೆಂದು ಹೆಸರು ಗಳಿಸಿದ್ದರು.

ತೆರಕಣಾಂಬಿ ದಕ್ಷಿಣದೇಶಕ್ಕೆ ಹೋಗುವ ದಾರಿಯಲ್ಲಿನ ಒಂದು ಗ್ರಾಮ. ಆ ಮಾರ್ಗವಾಗಿ ಹೋಗಿಬರುವ ಯಾತ್ರಾರ್ಥಿಗಳು ಬೆಟ್ಟದ ಚಾಮರಾಜ ಒಡೆಯರ ಆತಿಥ್ಯದಲ್ಲಿ ತಂಗುವುದು ಪದ್ಧತಿ ಆಗಿತ್ತು.

ಒಮ್ಮೆ ಒಬ್ಬ ಬ್ರಾಹ್ಮಣ, ರಾಮೇಶ್ವರಕ್ಕೆ ಹೋಗಿ ತೀರ್ಥಯಾತ್ರೆ ಮಾಡಿಕೊಂಡು ಮೈಸೂರಿಗೆ ಹಿಂದಿರುಗಿ ಬರುವಾಗ, ತೆರಕಣಾಂಬಿಯಲ್ಲಿ

ತಂಗಿದ. ಫಲಮಂತ್ರಾಕ್ಷತೆ ಪ್ರಸಾದಗಳನ್ನು ಕೊಟ್ಟಾದ ಮೇಲೆ, ಭೋಜನ ವನ್ನು ಮುಗಿಸಿಕೊಂಡ ಬಳಿಕ ಅರಮನೆಯುವರೆಲ್ಲ ಆತನ ಸುತ್ತ ಕುಳಿತರು. ಆತ ತಾನು ನೋಡಿ ಬಂದ ದೇಶಗಳ ಸಂಗತಿಯುನ್ನು ಹೇಳಿದ.

ಆತ ಹೇಳಿದ ಸಂಗತಿಗಳಲ್ಲಿ ತಿರುಚನಾಪಳ್ಳಿಯ ಜಟ್ಟಿಯೊಬ್ಬನನ್ನು ಕುರಿತು ಹೇಳಿದ್ದು ಕಂಠೀರವ ನರಸರಾಜರ ಮನಸ್ಸನ್ನು ಮುಟ್ಟಿತು.

ತಿರುಚನಾಪಳ್ಳಿಯ ಅರಸನ ಹತ್ತಿರ ಒಬ್ಬ ಮಹಾ ಪರಾಕ್ರಮಶಾಲಿ ಯಾದ ಜಟ್ಟಿ ಇದ್ದ. ಅವನ ಹೆಸರು ಮಹಾಮಲ್ಲ. ಅವನು 'ನನಗೆ ಸಮ ನಾದ ಜಟ್ಟಿ ಜಗತ್ತಿನಲ್ಲಿಯೇ ಇಲ್ಲ' ಎಂದು ಮೆರೆಯುತ್ತಿದ್ದ.

ತಿರುಚನಾಪಳ್ಳಿಯ ಕೋಟೆಗೆ ನಾಲ್ಕು ದೊಡ್ಡ ಬಾಗಿಲು. ಅವುಗಳಲ್ಲಿ ಒಂದು ಬಾಗಿಲಿನ ಮೇಲೆ ತನ್ನ ದಟ್ಟಿ ಚಲ್ಲಣಗಳನ್ನು ಕಟ್ಟಿಸಿದ. 'ಬಲಶಾಲಿ ಗಳು ಎಂದು ಹೇಳಿಕೊಳ್ಳುವವರೆಲ್ಲ ಈ ಬಾಗಿಲಿನ ಮೂಲಕ ಓಡಾಡಬೇಕು. ಹಾಗೆ ಓಡಾಡಿದರೆ ಅವರು ನನ್ನ ಕಾಲ ಕೆಳಗೆ ನುಸಿದಂತಾಗುತ್ತದೆ. ಬ್ರಾಹ್ಮ ಣರೂ ಇತರರೂ ಬೇರೆ ಬಾಗಿಲಲ್ಲಿ ಬೇಕಾದರೆ ಹೋಗಿ ಬರಲಿ' ಎಂದು ಆ ಮಲ್ಲ ತನ್ನ ಅರಸನನ್ನು ಕೇಳಿದ. ಅರಸ ಒಪ್ಪಿದ. ಅದರಂತೆ ಮೈಸೂರಿನ ಕಡೆಯ ಮಹಾದ್ವಾರದ ಮೇಲೆ ತನ್ನ ದಟ್ಟಿ ಚಲ್ಲಣಗಳನ್ನು ಕಟ್ಟಿಸಿದ.

ಅಂದಿನಿಂದ ಆ ಬಾಗಿಲಿನ ಮೂಲಕ ಯಾರು ಸಂಚಾರ ಮಾಡುವುದೂ ನಿಂತುಹೋಯಿತು. ಎಲ್ಲರೂ ಮಿಕ್ಕ ಬಾಗಿಲುಗಳನ್ನೇ ಉಪಯೋಗಿಸುತ್ತಿ ದ್ದರು.

'ನನ್ನನ್ನು ಮೀರಿಸುವವರು ಹಾಗಿರಲಿ, ನನಗೆ ಸಮಾನರಾದವರು ಕೂಡ ಈ ಜಗತ್ತಿನಲ್ಲಿ ಯಾರೂ ಇಲ್ಲ' ಎಂದು ಮಹಾಮಲ್ಲ ಜಂಬ ಕೊಚ್ಚು ತ್ತಿದ್ದ.

ಈ ಸಂಗತಿಯನ್ನು ಯಾತ್ರಿಕ ಬ್ರಾಹ್ಮಣ ಹೇಳಿದ. ಕಂಠೀರವ ನರಸ ರಾಜರು ಕೇಳಿದರು. ಅವರ ರಕ್ತ ಬಿಸಿಯಾಯಿತು. ಮಲಗಿದ್ದ ಸಿಂಹ ವನ್ನು ಕೆಣಕಿದ ಹಾಗಾಯಿತು.

ಆಗ ಮಾತಾಡದೆ ಸುಮ್ಮನಿದ್ದರು. ಅನಂತರ ಏಕಾಂತದಲ್ಲಿ ಆ ಯಾತ್ರಿಕನನ್ನು ಬರಮಾಡಿಕೊಂಡು, 'ಸ್ವಾಮಿ, ನಮ್ಮ ಮೈಸೂರಿನ ಮರ್ಯಾದೆಯನ್ನು ನಾವು ಕಾಪಾಡಬೇಕು. ಅದಕ್ಕೋಸ್ಕರ, ತಮಗೆ

ಕ್ರಮವಾದರೂ ತಾವು ನನಗೆ ತಿರುಚನಾಪಳ್ಳಿಯ ದಾರಿಯನ್ನು ತೋರಿಸಬೇಕು. ಈ ಮಹಾಮಲ್ಲನ ಸೊಕ್ಕನ್ನು ಮುರಿಯುವ ಮಹಾಕಾರ್ಯದಲ್ಲಿ ತಾವು ಸಹಾಯಮಾಡಬೇಕು' ಎಂದು ಕೇಳಿಕೊಂಡರು.

ಯಾತ್ರಿಕ ಒಪ್ಪಿದ. ನರಸರಾಜರು ತಮ್ಮ ಮಿತ್ರರಾದ ಕೆಲವರು ಮಲ್ಲರನ್ನು ಕರೆದುಕೊಂಡು, ಮನೆಯಲ್ಲಿ ಯಾರಿಗೂ ತಿಳಿಸದೆ, ತಿರುಚನಾಪಳ್ಳಿಗೆ ಹೋದರು.

ಯಾತ್ರಿಕ ಹೇಳಿದಂತೆಯೇ ಮೈಸೂರಿನ ಕಡೆಯ ಮಹಾದ್ವಾರದ ಮೇಲೆ ಮಹಾಮಲ್ಲನ ದಟ್ಟಿ ಚೆಲ್ಲಣ ಹಾರಾಡುತ್ತಿತ್ತು. ಅದನ್ನು ನೋಡಿಕೊಳ್ಳುತ್ತಾ ಒಬ್ಬ ಕಾವಲುಗಾರ ಕುಳಿತಿದ್ದ.

ನರಸರಾಜರು ತಮ್ಮ ಸೇವಕನನ್ನು ಕರೆದರು. 'ಆ ದಟ್ಟಿ ಚೆಲ್ಲಣಗಳನ್ನು ಕಿತ್ತು ಎಸೆ' ಎಂದರು. ಅವನು ಕೈಯ ಕೋಲಿನಿಂದ ಅದನ್ನು ಎತ್ತಿ ಕಸವನ್ನು ದೂರಹಾಕುವಹಾಗೆ ಎಸೆದ. ನರಸರಾಜರೂ ಅವರ ಸಂಗಡಿಗರೂ ಆ ಬಾಗಿಲಿನಿಂದ ತಿರುಚನಾಪಳ್ಳಿಯನ್ನು ಪ್ರವೇಶಿಸಿದರು.

ಕಾವಲುಗಾರ ಓಡಿಹೋಗಿ ಮಹಾಮಲ್ಲನಿಗೆ ಸುದ್ದಿ ತಿಳಿಸಿದ. ಮಹಾಮಲ್ಲ ಅರಸನಿಗೆ ದೂರು ಕೊಟ್ಟ. ಅರಸ ಆಗಂತುಕರಿಗೆ ಹೇಳಿಕಳಿಸಿದ.

'ನೀವು ನಮ್ಮ ಕೋಟೆಯ ಬಾಗಿಲಿನ ಮೇಲೆ ಕಟ್ಟಿದ್ದ ದಟ್ಟಿಚೆಲ್ಲಣಗಳನ್ನು ಕಿತ್ತುಹಾಕಿ ನಮ್ಮ ಜಟ್ಟಿಗೆ ಅವಮಾನಮಾಡಿದ್ದೀರಿ. ಆದ್ದರಿಂದ ಸಾರ್ವಜನಿಕರ ಮುಂದೆ ನಿಮಗೂ ನಮ್ಮ ಜಟ್ಟಿಗೂ ಮಲ್ಲಯುದ್ಧ ನಡೆಯಬೇಕು. ಅದರಲ್ಲಿ ನೀವು ಸೋತರೆ ನಿಮಗೆ ತಕ್ಕ ಶಿಕ್ಷೆಯಾಗಬೇಕು' ಎಂದ, ತಿರುಚನಾಪಳ್ಳಿಯ ಅರಸು.

ನರಸರಾಜರು ಒಪ್ಪಿದರು. ಮಲ್ಲಯುದ್ಧ ಏರ್ಪಾಟಾಯಿತು. ಮೊದಲು ನಡೆದ ಬಾಹುಯುದ್ಧದಲ್ಲಿ ಮಹಾಮಲ್ಲ ಸೋತ. ಬಳಿಕ ನಡೆದ ಮುಷ್ಟಿಯುದ್ಧದಲ್ಲಿ ನರಸರಾಜರಿಗೆ ವಿಜಯವಾಯಿತು. ಮೂರನೆಯದಾಗಿ ಖಡ್ಗಯುದ್ಧಕ್ಕೆ ಇಬ್ಬರೂ ಕತ್ತಿಗಳನ್ನು ಹಿಡಿದು ನಿಂತರು.

ನರಸರಾಜರ ಕತ್ತಿಗೆ 'ವಿಜಯನಾರಸಿಂಹ' ಎಂದು ಹೆಸರು. ಅದು ಒಳ್ಳೆಯಂತೆ ಬಳಕುತ್ತಿತ್ತು. ಅದನ್ನು ಅವರು ನಡುಪಟ್ಟಿಯಂತೆ ಸೊಂಟದಲ್ಲಿ

ಸುತ್ತಿಕೊಳ್ಳುತ್ತಿದ್ದರು. ಆ ಕತ್ತಿ ಅವರ ಕೈಯಲ್ಲಿ ಮಿಂಚಿನಂತೆ ನಾಲಿಗೆ ಚಾಚುತ್ತಿತ್ತು.

ನರಸರಾಜರನ್ನು ಒಂದೇ ಏಟಿಗೆ ಕೊಂದುಬಿಡಬೇಕೆಂದು ಮಹಾಮಲ್ಲ ಅವರ ಕುತ್ತಿಗೆಗೆ ಕತ್ತಿಯನ್ನು ಬೀಸಿದ. ನರಸರಾಜರು ಲಾಘವದಿಂದ ಆ ಏಟನ್ನು ತಪ್ಪಿಸಿಕೊಂಡು ತಾವು ತಮ್ಮ ಸೆಳೆಕತ್ತಿಯನ್ನು ಅವನ ಕೊರಳೆಡೆಗೆ ಬೀಸಿದರು.

ಮಹಾಮಲ್ಲ ಶಿಲಾಪ್ರತಿಮೆ ನಿಂತ ಹಾಗೆ ನಿಂತ. ನರಸರಾಜರು ಅವನ ಎದುರಿಗೆ ನಿಂತು ಬೆವರೊರಸಿಕೊಂಡರು.

'ಕಾಳಗ ಮುಂದುವರಿಯಲಿ' ಎಂದ, ತಿರುಚನಾಪಳ್ಳಿಯ ಅರಸು.

'ಸತ್ತವರೊಡನೆ ನಾವು ಕಾಳಗ ಮಾಡುವುದಿಲ್ಲ' ಎಂದು ಹೇಳುತ್ತಾ ನರಸರಾಜರು ತಮ್ಮ ಎಡಗೈಲಿದ್ದ ಬೆತ್ತದಿಂದ ಮಹಾಮಲ್ಲನ ಮುಖವನ್ನು ತಿವಿದರು. ಅವನ ರುಂಡ ಮುಂಡದಿಂದ ಕಳಚಿಕೊಂಡು ಕೆಳಗೆ ಬಿತ್ತು. ರಕ್ತ ಛಿಲ್ಲೆಂದು ಚಿಮ್ಮಿತು.

ಮಹಾಮಲ್ಲನನ್ನು ಮೀರಿಸಿದ ಈ ಹೊಸಮಲ್ಲನನ್ನು ತನ್ನ ಆಶ್ರಯದಲ್ಲಿ ಇರಿಸಿಕೊಳ್ಳಬೇಕೆಂದು ತಿರುಚನಾಪಳ್ಳಿಯ ಅರಸು ಇಷ್ಟಪಟ್ಟನು.

ಅವನ ಇಂಗಿತ ನರಸರಾಜರಿಗೆ ತಿಳಿಯಿತು. 'ಈ ಪಾಳಯಗಾರನಿಂದ ನಾವು ಪಡೆಯಬೇಕಾದ್ದೇನು ? ಮೈಸೂರಿನವರು ಎಂಥವರು ಎಂಬುದನ್ನು ಇವನಿಗೆ ತೋರಿಸಿಯಾಯಿತಲ್ಲಾ !' ಎಂದು ಅವರು ಅದೇ ರಾತ್ರಿ ಯಾರಿಗೂ ಹೇಳದೆ ತಮ್ಮ ಪರಿವಾರದೊಂದಿಗೆ ತೆರಕಣಾಂಬಿಗಾಗಿ ಹೊರಟರು. ಹೊರಡುವ ಮುಂಚೆ ಮೈಸೂರಿನ ಕಡೆಯ ಮಹಾದ್ವಾರದ ಮೇಲೆ ಮಹಾಮಲ್ಲನ ದಟ್ಟ ಚೆಲ್ಲಣಗಳು ಹಾರಾಡುತ್ತಿದ್ದ ಸ್ಥಳದಲ್ಲಿ "ಮೈಸೂರು ಸಂಸ್ಥಾನದಿಂದ ಯಾರೋ ಬಂದು ಈ ಪರಾಕ್ರಮವನ್ನು ಮಾಡಿ ತೋರಿಸಿದರು" ಎಂದು ಬರೆಯಿಸಿ ತೆರಕಣಾಂಬಿಗೆ ತೆರಳಿದರು.

(ಆಧಾರ : ವಂಶಾವಳಿ)

೧೧. ಮಹಾಮಾತೃಶ್ರೀ

ಧರ್ಮಾತ್ಮರಾದ ರಾಜಒಡೆಯರು ಕಾಲವಾದಾಗ, ಅವರ ಅನಂತರ ಪಟ್ಟಕ್ಕೆ ಏರಲು ಗಂಡುಮಕ್ಕಳಿರಲಿಲ್ಲ. ಆದ್ದರಿಂದ ತಮ್ಮ ಕಾಲಾನಂತರ ತಮ್ಮ ಮೊಮ್ಮಕ್ಕಳಾದ ಚಾಮರಾಜ ಒಡೆಯರಿಗೆ ಪಟ್ಟಾಭಿಷೇಕವಾಗ ಬೇಕೆಂದೂ ಅವರ ಬಳಿಕ ತಮ್ಮ ಕಿರಿಯ ಕುಟುಂಬವಾದ ಯಡವನಹಳ್ಳಿ ಶಿವರ್‍ಾಜಮ್ಮಣ್ಣಿಯವರ ಗರ್ಭದಲ್ಲಿ ಬೆಳೆಯುತ್ತಿದ್ದ ಗಂಡುಮಗುವಿಗೆ ಪಟ್ಟ ಕಟ್ಟಬೇಕೆಂದೂ ತಾವೇ ಅಪ್ಪಣೆ ಮಾಡಿ ಸ್ವರ್ಗಸ್ಥರಾದರು.

ಚಾಮರಾಜ ಒಡೆಯರು ಪಟ್ಟಕ್ಕೆ ಬಂದಾಗ ಅವರಿಗೆ ಕೇವಲ ಹನ್ನೊಂದು ವರ್ಷ. ಬೆಟ್ಟದ ಅರಸಿನಂಥ ಸ್ವಾಮಿಭಕ್ತ ದಳವಾಯಿ ಇದ್ದದ್ದರಿಂದ ಅವರು ರಾಜ್ಯಭಾರವನ್ನು ನಡಸುವುದು ಸಾಧ್ಯವಾಯಿತು. ಆದರೆ ಅರಮನೆಯಲ್ಲಿ ಹಿಂದಿನಿಂದಲೂ ಬೆಳೆದುಬಂದಿದ್ದ ಪರಿವಾರದವರು ಕೆಲವರು ವಯಸ್ಸು ಸಾಲದ ಅರಸರನ್ನು ವಿಧವಿಧವಾದ ಭೋಗಗಳಿಂದ ಆಕರ್ಷಿಸಿ, ತಮ್ಮ ತಮ್ಮ ಸ್ವಾರ್ಥಗಳನ್ನು ತೀರಿಸಿಕೊಳ್ಳತೊಡಗಿದರು.

ಇಂತಹ ದುಷ್ಟತನಗಳು ಬಲಿಯದ ಹಾಗೆ ದೊರೆಗಳಿಗೆ ಬುದ್ಧಿ ಹೇಳಲು ಬಂದ ಬೆಟ್ಟದ ಅರಸಿನ ಮೇಲೆ ಪಿತೂರಿ ನಡಸಿದರು. ಸ್ವಂತ ಬುದ್ಧಿ ಸಾಲದ ಪ್ರಭುಗಳು ಯಾವ ದಳವಾಯಿಯಿಂದ ತಮ್ಮ ಹಿತಸಾಧನೆಯಾಗಬಹುದಾಗಿತ್ತೋ ಆ ದಳವಾಯಿಯನ್ನು ಉಗ್ರವಾಗಿ ಶಿಕ್ಷಿಸಿ, ಸೆರೆಯಲ್ಲಿಡಿಸಿದರು.

ಬೆಟ್ಟದ ಅರಸು ಆದ ಮೇಲೆ ಇಬ್ಬರು ದಳವಾಯಿಗಳು ಬಂದರು. ಅವರಾದರೂ ಹಳೆಯ ಪರಿವಾರದವರ ಕೈಗೊಂಬೆಗಳಾಗಿದ್ದರು. ಅವರಾದ ಮೇಲೆ ದಳವಾಯಿಯಾಗಿ ಬಂದವನು ವಿಕ್ರಮರಾಯ ; ಬೆಟ್ಟದ ಚಾಮರಾಜ ಒಡೆಯರ ಗಾಂಧರ್ವಪುತ್ರ. ಈತ ತನ್ನ ಹಿಂದಿನ ದಳವಾಯಿಗಳಂತೆ ಹಳೆಯ ಪರಿವಾರದವರ ಕೈಗೊಂಬೆಯಾಗದೆ, ಅವರನ್ನು ತನಗೆ ಅಧೀನರಾಗಿ ಮಾಡಿಕೊಂಡು, ಪ್ರಭುಗಳನ್ನು ರಾಜ್ಯಭಾರದಿಂದ ವಿಮುಖರನ್ನಾಗಿ ಮಾಡಿ, ಪ್ರಭುಗಳ ಹೆಸರಿನಲ್ಲಿ ತಾನೇ ಸರ್ವಾಧಿಕಾರಗಳನ್ನೂ ನಡಸತೊಡಗಿದ.

ಚಾಮರಾಜ ಒಡೆಯರು ರಾಜ್ಯವಾಳಿದ ಹತ್ತೊಂಬತ್ತು ವರ್ಷಗಳಲ್ಲಿ

ಏಳು ವರ್ಷಗಳ ಕಾಲ ವಿಕ್ರಮರಾಯ ತನಗೆ ಬೇಕಾದ ಹಾಗೆ ದಳವಾಯಿತನ ಮಾಡಿದ. ಊರಿನವರೂ ಅರಮನೆಯವರೂ ಅವನಿಗೆ ಅಂಜುತ್ತಿದ್ದರು.

ರಾಜಒಡೆಯರು ತಮ್ಮ ಮರಣಕಾಲದಲ್ಲಿ ಹೇಳಿದ್ದ ಹಾಗೆಯೇ ಅವರ ಕಿರಿಯ ಕುಟುಂಬದ ಬಸಿರಲ್ಲಿ ಗಂಡುಶಿಶುವೇ ಜನಿಸಿತು. ಆ ಮಗುವಿಗೆ ಇಮ್ಮಡಿ ರಾಜಒಡೆಯರೆಂದು ನಾಮಕರಣವಾಯಿತು.

ಮಗುವಿನ ಲಾಲನೆ, ಪಾಲನೆ, ವಿದ್ಯಾಭ್ಯಾಸಗಳನ್ನು ಹಳೆಯ ಪರಿವಾರದವರು ವಹಿಸಿಕೊಂಡರು. ಚಾಮರಾಜ ಒಡೆಯರಂತೆಯೇ ಈ ಮಗನೂ ಸದಾ ಸಂಗೀತ ನರ್ತನ ಸ್ತ್ರೀಸಂಗಗಳಲ್ಲಿ ಇರುತ್ತಿದ್ದುದನ್ನು ಕಂಡು, ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿಯವರಿಗೆ ತುಂಬ ವ್ಯಾಕುಲವಾಯಿತು. ಆದರೆ ಹೆಣ್ಣಾದ ಅವರು ಅದಕ್ಕೆ ಏನು ಪರಿಹಾರ ಮಾಡಲೂ ತೋಚದೆ, ಒಳಗೇ ಕೊರಗುತ್ತಿದ್ದರು.

ಚಾಮರಾಜ ಒಡೆಯರಿಗೆ ಸುಮಾರು ಮೂವತ್ತು ವರ್ಷ ಮುಗಿದು ಎಂಟು ತಿಂಗಳು ಆಗುವ ವೇಳೆಗೆ, ಅದುವರೆಗೆ ಅವರು ನಡಸಿದ ಅತಿಯಾದ ಭೋಗಜೀವನದ ಪರಿಣಾಮವಾಗಿ ಅವರ ಆರೋಗ್ಯ ಕೆಟ್ಟಿತು. ಅವರು ಮರಣಹೊಂದಿದ ಕಾಲಕ್ಕೆ ಇಮ್ಮಡಿ ರಾಜ ಒಡೆಯರು ಇನ್ನೂ ಇಪ್ಪತ್ತು ವರ್ಷದ ಹುಡುಗ.

ಬಾಲ್ಯದಿಂದಲೂ ಭೋಗದಲ್ಲಿಯೇ ಬೆಳೆದಿದ್ದ ಇವರನ್ನು ತನಗೆ ಬೇಕಾದಂತೆ ತನ್ನ ಕಿರುಬೆರಳಿನ ಸುತ್ತ ಆಡಿಸಬಹುದೆಂದು ವಿಕ್ರಮರಾಯನು ತಿಳಿದುಕೊಂಡಿದ್ದ. ಆದರೆ ಪಟ್ಟಾಭಿಷೇಕವಾದ ಕೂಡಲೆ, ಇಮ್ಮಡಿ ರಾಜಒಡೆಯರ ಧಮನಿಗಳಲ್ಲಿ ಹರಿಯುತ್ತಿದ್ದ ರಾಜಒಡೆಯರ ರಕ್ತ ತನ್ನ ಸಹಜಗುಣಗಳನ್ನು ಪ್ರಕಟಪಡಿಸಿತು. ಮುನ್ಸೂಚನೆ ಯಾವುದನ್ನೂ ಯಾರಿಗೂ ತಿಳಿಸದೆ ಅನಿರೀಕ್ಷಿತವಾಗಿ ಕರಣಿಕರ ಚಾವಡಿಗೆ ಹೋಗಿ, ಅಲ್ಲಿನ ಲೆಕ್ಕಪತ್ರಗಳನ್ನು ಸ್ವಯಂ ತಾವೇ ಪರಿಶೀಲಿಸಿ, ಹಲವಾರು ವರ್ಷಗಳಿಂದ ನಡೆಯುತ್ತಿದ್ದ ದುರ್ವ್ಯಾಪಾರಗಳನ್ನು ಕಂಡುಕೊಂಡರು. ತಮ್ಮ ಅಂತಃಪುರದಲ್ಲಿ ವಿಕ್ರಮರಾಯನು ತಂದು ತುಂಬಿದ್ದ ವಿಲಾಸದ ಹೆಣ್ಣುಗಳನ್ನೆಲ್ಲ ವಿಸರ್ಜನೆಮಾಡಿದರು. ಸರಿಯಾದ ಪ್ರಧಾನಮಂತ್ರಿಗಳನ್ನು ನೇಮಕಮಾಡಿಕೊಂಡು, ಸಂಗೀತ ವಾದ್ಯಗಳಿಗೆ ಬದಲಾಗಿ ಶಸ್ತ್ರಾಸ್ತ್ರಗಳನ್ನು ಅಧಿಕಪಡಿಸಿ, ತಮ್ಮ ಸ್ವಂತ ಸುಖ

ವನ್ನು ಸಾಧಿಸುವುದಕ್ಕಿಂತ ತಮ್ಮ ಪ್ರಜೆಗಳ ಕ್ಷೇಮಾಭ್ಯುದಯಗಳನ್ನು ಸಾಧಿಸಬೇಕೆಂದು ನಿಶ್ಚಯಿಸಿದರು.

'ದಾರಿ ತಪ್ಪಿಹೋಗುತ್ತಿದ್ದ ತಮ್ಮ ಮಕ್ಕಳು ಸರಿಯಾದ ದಾರಿಗೆ ಬಂದರು, ಹೆತ್ತ ತಾಯಿತಂದೆಗೆ ಹೆಸರು ತಂದರು, ಹುಟ್ಟಿದ ವಂಶಕ್ಕೆ ಕೀರ್ತಿ ತಂದರು, ದೇಶದ ಪ್ರಜೆಗಳನ್ನು ಇನ್ನು ಕಾಪಾಡುತ್ತಾರೆ'—ಎಂದು ರಾಜ ಮಾತೆಗೆ ಮಗನನ್ನು ಪುನಃ ಪಡೆದ ಹಾಗೆ ಸಂತೋಷವಾಯಿತು.

ಇಮ್ಮಡಿ ರಾಜಒಡೆಯರ ಗುಣಪರಿವರ್ತನೆಯಿಂದ ರಾಜಮಾತೆಗೆ ಎಷ್ಟು ಸಂತೋಷವಾಯಿತೋ ದಳವಾಯಿ ವಿಕ್ರಮರಾಯನಿಗೆ ಅಷ್ಟೇ ಸಂಕಟ ವಾಯಿತು. 'ಇನ್ನು ಮುಂದೆ ನನ್ನ ಆಟ ನಡೆಯುವುದಿಲ್ಲ. ನಾನು ಮಾಡಿದ ಮೋಸವೆಲ್ಲ ಬಯಲಾಗಿದೆ. ನಾಳೆ ಸಭೆಯಲ್ಲಿ ಇವರ ವಿಚಾರಣೆಯಾಗುತ್ತದೆ. ಈ ಅವಮಾನ ನನಗೆ ಆಗದಿರಬೇಕಾದರೆ ಇದನ್ನೆಲ್ಲ ವಿಚಾರಣೆಗೆ ಗುರಿಪಡಿಸುವ ಇಮ್ಮಡಿ ರಾಜ ಒಡೆಯರು ಇಲ್ಲದಂತಾಗಬೇಕು—' ಎಂದು ವಿಕ್ರಮರಾಯನ ಮನಸ್ಸು ಮಿಂಚಿನ ವೇಗದಲ್ಲಿ ಓಡಿತು. ದಳವಾಯಿ ರಾಜರನ್ನು ಕೊಲ್ಲಿಸಿ ಬಿಡಬೇಕೆಂದು ನಿಶ್ಚಯಿಸಿದ.

ಆದುವರೆಗೆ ತಮಗೆ ಅಭ್ಯಾಸವಾಗಿದ್ದ ಅತಿಭೋಗಗಳನ್ನು ತಟಕ್ಕನೆ ಬಿಟ್ಟುಬಿಟ್ಟದ್ದರಿಂದಲೂ ಅಭ್ಯಾಸವಿಲ್ಲದ ರಾಜಕಾರ್ಯಗಳನ್ನು ತಟಕ್ಕನೆ ವಹಿಸಿಕೊಂಡದ್ದರಿಂದಲೂ ಅರಸರಿಗೆ ಮೈಯಲ್ಲೂ ಮನಸ್ಸಿನಲ್ಲೂ ಆಲಸ್ಯ ವಾಗಿತ್ತು. ಆದರಿಂದ ಅವರಿಗೆ ಜ್ವರ ಬಂತು.

ಅರಸರಿಗೆ ಔಷಧವನ್ನು ಕೊಡಬೇಕೆಂದು ರಾಜಮಾತೆ ಪ್ರಮುಖದ ಪಂಡಿತನಾದ ಬೊಮ್ಮರಸ ಪಂಡಿತನಿಗೆ ಹೇಳಿಕಳಿಸಿದರು. ಬೊಮ್ಮರಸ ವಿಕ್ರಮರಾಯನ ದ್ರೋಹಗಳಲ್ಲಿ ಪಾಲುಗಾರನಾಗಿದ್ದವ. ಅವನನ್ನು ತನ್ನ ಕಾರ್ಯಕ್ಕೆ ಉಪಯೋಗಿಸಿಕೊಳ್ಳಬೇಕೆಂದು ವಿಕ್ರಮರಾಯ ನಿರ್ಧರಿಸಿದ. ಬೊಮ್ಮರಸನ ದ್ರೋಹಗಳೂ ಬಯಲಿಗೆ ಬರುತ್ತವೆ ಎಂದು ಹೆದರಿಸಿ, ಅರಸ ರನ್ನು ವಿಷಚೂರ್ಣದಿಂದ ತೀರಿಸಿಬಿಡುವಂತೆ ಪ್ರೇರಿಸಿದ. ಬೊಮ್ಮರಸ ಜೀವ ಭಯದಿಂದ ಹಾಗೇ ಮಾಡುವೆನೆಂದು ಒಪ್ಪಿ ಅರಮನೆಗೆ ಹೋದ.

ಅರಸರಿಗೆ ಹಾಲಿನಲ್ಲಿ ವಿಷವನ್ನು ಕರಗಿಸಿ ಔಷಧವೆಂದು ಕೊಡುವಾಗ ಬೊಮ್ಮರಸನ ಕೈ ಭಯದಿಂದ ನಡುಗುತ್ತಿತ್ತು. ಅವನ ಭಯಕ್ಕೆ ನಿಜವಾದ

ಕಾರಣವನ್ನು ಅರಿಯದೆ, ರಾಜಮಾತೆ ತಾವೇ ಆ ಪಾನಪಾತ್ರೆಯನ್ನು ಈಸಿ ಕೊಂಡು, ಮಗನಿಗೆ ತಮ್ಮ ಕೈಯಾರೆ ಕುಡಿಸಿದರು. ವಿಷದ ವೇಗ ಏರಿ, ಇಮ್ಮಡಿ ರಾಜಒಡೆಯರು ತೀರಿಕೊಂಡರು.

ಅರಸರು ಮರಣಹೊಂದಿದ ರೀತಿಯನ್ನು ನೋಡಿ ರಾಜಮಾತೆಗೆ ಸಂಶಯ ಬಂತು. ಬೊಮ್ಮರಸನನ್ನು ಗದರಿಸಿ ಬೆದರಿಸಿ ಕೇಳಿದರು. ಅವನು ತನ್ನ ತಪ್ಪನ್ನು ಒಪ್ಪಿಕೊಂಡು ವಿಕ್ರಮರಾಯನ ತಪ್ಪನ್ನೂ ಹೇಳಿಬಿಟ್ಟ.

ರಾಜಮಾತೆ ಅಳಲಿಲ್ಲ, ಕೂಗಾಡಲಿಲ್ಲ. ತಮ್ಮ ಕುಮಾರನ ಸಾವಿಗೆ ಕಾರಣನಾದ ವಿಕ್ರಮರಾಯನಿಗೆ ತಕ್ಕ ಶಿಕ್ಷೆ ಮಾಡಿಸಬೇಕೆಂಬ ಪ್ರತೀಕಾರ ಬುದ್ಧಿ ಅವರನ್ನು ಅಳುವುದಕ್ಕೆ ಬಿಡಲಿಲ್ಲ. ದ್ರೋಹಿ ವಿಕ್ರಮರಾಯನ ಪ್ರತಿ ಕೃತಿಯನ್ನು ಒಬ್ಬ ಚಿತ್ರಕಾರನಿಂದ ಬರೆಯಿಸಿ, ಅದನ್ನು ತಮ್ಮ ಮಂಚದ ಕಾಲಕಡೆ ತೂಗುಹಾಕಿದರು. ವಿಕ್ರಮರಾಯನ ದ್ರೋಹವನ್ನು ಮರೆಯಲು ಅವಕಾಶ ಕೊಡಲಿಲ್ಲ.

ಸ್ವಲ್ಪ ಕಾಲದಲ್ಲೇ ಕಂಠೀರವ ನರಸರಾಜ ಒಡೆಯರು ಮೈಸೂರಿಗೆ ಬಂದರು. ವಿಕ್ರಮರಾಯನ ದ್ರೋಹಗಳೆಲ್ಲವೂ ಅವರಿಗೆ ಗೊತ್ತಾಯಿತು. ಅವ ರಿಂದ ವಿಕ್ರಮರಾಯನಿಗೆ ತಕ್ಕ ಶಿಕ್ಷೆಯಾಗುವುದೆಂದು ರಾಜಮಾತೆ ನಂಬಿದರು.

ವಿಕ್ರಮರಾಯನ ಉದ್ಧಟತನಕ್ಕೆ ರಾಜದ್ರೋಹಕ್ಕೆ ಊರವರೂ ಅರ ಮನೆಯವರೂ ರೋಸಿಹೋಗಿದ್ದರು. ಅರಮನೆಯ ಜೀತದಾಳುಗಳಿಬ್ಬರು ಒಂದು ರಾತ್ರಿ ಕತ್ತಲೆಯಲ್ಲಿ ವಿಕ್ರಮರಾಯನನ್ನು ಕೊಲೆಮಾಡಿಬಿಟ್ಟರು.

ವಿಕ್ರಮರಾಯನ ಕೊಲೆಯಾದದ್ದು—ಅದು ವೀರನಿಗೆ ಉಚಿತವಾದ ಮರಣವಲ್ಲದೆ ಹೋದರೂ ಮಹಾಮಾತೃಶ್ರೀಯವರ ಪ್ರತೀಕಾರವನ್ನು ಪೂರೈ ಸಿತು. ಪುತ್ರನನ್ನು ಕಳಕೊಂಡ ತಮಗೆ ಇನ್ನು ಅಲ್ಲಿ ಏನು ಕೆಲಸ ಎಂದು ಕೊಂಡು ಅವರು ತಮ್ಮ ಜೊತೆಯ ಅವ್ವೆಯರೊಡನೆ ಮಾರನೆಯ ದಿವಸ ಕಾಶಿಗೆ ಹೊರಟುಹೋದರು.

ಹೋಗುವ ಮುನ್ನ ಅವರು ರಣಧೀರರನ್ನು ದತ್ತುಸ್ವೀಕಾರ ಮಾಡಿ ದರು. ಬಹುಧಾನ್ಯ ಸಂವತ್ಸರದ ಕಾರ್ತಿಕ ಶುದ್ಧ ದ್ವಿತೀಯೆ ಸೋಮವಾರ ದಂದು ಶ್ರೀರಂಗಪಟ್ಟಣದಲ್ಲಿ ಕಂಠೀರವ ನರಸರಾಜ ಒಡೆಯರಿಗೆ ಪಟ್ಟಾಭಿ ಷೇಕವಾಯಿತು.

(ಆಧಾರ : ವಂಶಾವಳಿ, ಸಂಸ)

೧೨. ನಾಗರಮುರಿ

ರಣಧೀರ ಕಂಠೀರವ ನರಸರಾಜ ಒಡೆಯರು ಪಟ್ಟಕ್ಕೆ ಬಂದಾಗ ಅವರಿಗೆ ಇಪ್ಪತ್ತಮೂರು ವರ್ಷ ವಯಸ್ಸು. ಆಗ ಮೈಸೂರುರಾಜ್ಯ ಒಳಗಿನ ಶತ್ರುಗಳಿಂದಲೂ ಹೊರಗಿನ ಶತ್ರುಗಳಿಂದಲೂ ಅಪಾಯದ ಸ್ಥಿತಿಯಲ್ಲಿತ್ತು. ಈ ಅಪಾಯಗಳಿಂದ ರಾಜ್ಯವನ್ನು ಪಾರಗಾಣಿಸುವ ಶಕ್ತಿ ಸಾಮರ್ಥ್ಯಗಳು ನರಸರಾಜರಿಗೆ ತಂದೆಯಿಂದ ಹುಟ್ಟುಗುಣವಾಗಿ ಬಂದಿದ್ದುವು. ಜೊತೆಗೆ ಅವರ ಇಷ್ಟದೇವತೆಯಾದ ನರಸಿಂಹನ ಕೃಪೆಯೂ ಕುಲದೇವತೆಯಾದ ಚಾಮುಂಡೇಶ್ವರೀ ಅಮ್ಮನವರ ಅನುಗ್ರಹವೂ ಅವರಿಗೆ ಯಥೇಚ್ಛವಾಗಿತ್ತು. ಅದರಿಂದ ಅವರು ಕೈಕೊಂಡ ಕಾರ್ಯಗಳಲ್ಲಿ ವಿಜಯಿಗಳಾದರು..

ಪಟ್ಟಕ್ಕೆ ಬಂದ ಮೇಲೆ ಶ್ರೀರಂಗಪಟ್ಟಣದ ಕೋಟೆಯನ್ನು ಬಲಪಡಿಸಿದರು. ಅಲ್ಲಿ ಆಯುಧಶಾಲೆಯನ್ನು ಕಟ್ಟಿಸಿದರು. ಶತ್ರುಗಳು ಮುತ್ತಿಗೆ ಹಾಕಿದ ಹೊತ್ತಿನಲ್ಲಿ ಪಟ್ಟಣದೊಳಗೆ ಆಹಾರಕ್ಕೆ ಅಭಾವವಿರಬಾರದೆಂದು ಉಗ್ರಾಣಗಳನ್ನು ಏರ್ಪಡಿಸಿದರು. ಆನೆ, ಕುದುರೆ, ಒಂಟೆ, ಎತ್ತು ಮುಂತಾದವುಗಳಿಗೆ ಬೇಕಾಗುವ ಹುಲ್ಲುಮೇವುಗಳನ್ನು ಹಾಕಿಸಿದರು.

ಅದರಂತೆಯೇ ಮೈಸೂರಿನ ಕೋಟೆಯನ್ನೂ ಅರಮನೆಯನ್ನೂ ಬಲಪಡಿಸಿದರು. ಕಾವಲುಕಟ್ಟಳೆಗೆ ಯೋಗ್ಯರಾದ ಜನರನ್ನು ನೇಮಿಸಿದರು. ಮೈಸೂರಿನ ಅಲಗಿನ ಚಾವಡಿಯಲ್ಲಿ ತಯಾರಿಸಿದ ಫಿರಂಗಿಗಳನ್ನು ಕೋಟೆಯ ಕೊತ್ತಳಗಳಲ್ಲಿಡಿಸಿದರು. ಹೀಗೆ ಏರ್ಪಟ್ಟ ಹತ್ತು ದೊಡ್ಡ ಫಿರಂಗಿಗಳಲ್ಲಿ ಒಂದರ ಹೆಸರು—'ನಾಗರಮುರಿ'. ಇದರ ನೀಳ ೭ ಮೊಳ, ಸುತ್ತು ಒಂದು ಮೊಳ, ಮತ್ತು ಗುಂಡು ೨ ಅಂಗುಲ.

ಉಳಿದ ಫಿರಂಗಿಗಳ ಹೆಸರಾದರೂ ಇದರಷ್ಟೇ ರಮ್ಯವಾಗಿದೆ. ಒಳಕೋಟೆಯ ಕೊತ್ತಲಗಳಲ್ಲಿದ್ದ ಒಂದಕ್ಕೆ ರಾಮಚಂದ್ರ ಎಂದು ಹೆಸರು; ಮತ್ತೊಂದು ಲಕ್ಷ್ಮೀರಮಣ. ಅದರಂತೆಯೇ ಹೊರಕೋಟೆಯ ಕೊತ್ತಳಗಳಲ್ಲಿ ಇದ್ದ ಆರು ಫಿರಂಗಿಗಳಲ್ಲಿ ನಾಗರಮುರಿಯ ಜೊತೆಗೆ ಇದ್ದ ಇತರ

ಐದರ ಹೆಸರು—ಚಾಮುಂಡೇಶ್ವರಿ, ರಂಗನಾಥ, ಭೈರವ, ರಾಮಬಾಣ ಮತ್ತು ಉಗ್ರನರಸಿಂಹ.

ಆಗಿನ ಕಾಲಕ್ಕೆ ಇಂಥ ರಕ್ಷಣೆ ಅತ್ಯಾವಶ್ಯಕವಾಗಿತ್ತು. ಅರಮನೆಯೊಳಗಿನ ದಳವಾಯಿಗಳ, ಹಳೆಯ ಪಯಿಕದವರ ದ್ರೋಹವನ್ನು ಅಡಗಿಸುವುದರ ಜೊತೆಗೆ ಸುತ್ತಮುತ್ತ ಇದ್ದ ಪಾಳೆಯಗಾರರ ಕಾಟವನ್ನು ಅಡಗಿಸಿ, ದೂರದ ಬಿಜಾಪುರದಿಂದ ಒದಗಿದ ದಂಡುದಾಳಿಯನ್ನೂ ಪರಿಹರಿಸಿಕೊಳ್ಳಬೇಕಾಗಿತ್ತು. ಇದನ್ನು ರಣಧೀರರು ಯಶಸ್ವಿಯಾಗಿ ಸಾಧಿಸಿದರು.

ಇವರು ಪಟ್ಟಕ್ಕೆ ಬಂದದ್ದು ೧೬೩೮ರಲ್ಲಿ. ೧೬೪೧ ರಿಂದ ೧೬೫೯ರವರೆಗೂ ಒಬ್ಬರಾದ ಮೇಲೆ ಒಬ್ಬರು ತುಂಟ ಪಾಳೆಯಗಾರರನ್ನು ಸೋಲಿಸಿ, ಅವರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ದೇಶವನ್ನು ಕಟ್ಟುವುದರಲ್ಲಿಯೇ ಆಯಿತು.

ಹೀಗೆ ಇವರು ಅಡಗಿಸಿದ ತುಂಟರಲ್ಲಿ ಒಬ್ಬ—ಪೆರಿಯಪಟ್ಟಣದ ನಂಜುಂಡ ಅರಸು. ಇವನು ಹಿಂದೆ ಚಾಮರಾಜ ಒಡೆಯರ ಕಾಲದಲ್ಲಿ ತಲೆ ಹರಟೆ ಮಾಡಿ, ವರ್ಷಕ್ಕೆ ಮೂರು ಸಾವಿರ ವರಹಗಳನ್ನು ಒಪ್ಪಿಸುವುದಾಗಿ ವಾಗ್ದಾನ ಮಾಡಿ, ತಲೆಯುಳಿಸಿಕೊಂಡಿದ್ದ. ಆದರೆ, ದಳವಾಯಿಗಳ ದ್ರೋಹದಿಂದ ದೊರೆಗಳು ದುರ್ಬಲರಾಗಿದ್ದುದನ್ನು ನೋಡಿ, ತನ್ನ ಮಾತಿನಂತೆ ಕೊಡಬೇಕಾಗಿದ್ದುದನ್ನೂ ಕೊಡದೆ, ಅದು ಹಲವು ವರ್ಷದಿಂದ ನಿಂತುಹೋಗಿತ್ತು.

'ಒಪ್ಪಂದದ ಮೇರೆಗೆ ಕೊಡಬೇಕಾಗಿದ್ದುದು ಹೀಗೆ ನಿಂತುಹೋಗಿದೆ. ಕೂಡಲೆ ಕಳಿಸಿಕೊಡಬೇಕು' ಎಂದು ನರಸರಾಜರು ನಿರೂಪ ಕಳುಹಿಸಿದರು.

'ಅನುಭವವಿಲ್ಲದ ಈ ಹುಡುಗ ಕೇಳಿದರೆ, ನಾವು ಯಾಕೆ ಕೊಡಬೇಕು ? ಕೊಡದೆಹೋದರೆ ಏನು ಮಾಡುತ್ತಾನೋ ನೋಡೋಣ' ಎಂದು ದುರ್ಮಂತ್ರಿಗಳು ನಂಜುಂಡ ಅರಸಿಗೆ ಚುಚ್ಚಿಕೊಟ್ಟರು.

ನಂಜುಂಡ ಅರಸು ಅವರ ತಾಳಕ್ಕೆ ತಕ್ಕಂತೆ ಕುಣಿದ.

ಅವನ ಉತ್ತರವನ್ನು ಕೇಳಿದೊಡನೆ—'ಇವನನ್ನು ಹೀಗೇ ಬಿಟ್ಟರೆ, ಇತರರೂ ಇವನನ್ನು ಅನುಸರಿಸಿಯಾರು. ಇವನ ನಿಮಿತ್ತದಿಂದ ಮಿಕ್ಕವರಿಗೆ ಬುದ್ಧಿ ಕಲಿಸಬೇಕು' ಎಂದುಕೊಂಡು ದೊರೆಗಳು ಸೇನಾಸಮೇತರಾಗಿ

ಪೆರಿಯಪಟ್ಟಣಕ್ಕೆ ಹೋದರು.

ವೀರರೂ ಧೀರರೂ ಆದ ಅವರೊಡನೆ ಹೋರಾಡಲಾರದೆ, ನಂಜುಂಡ ಅರಸು ಹಿಮ್ಮೆಟ್ಟಿ ಹಿಂದಿರುಗಿ ಯುದ್ಧಭೂಮಿಯನ್ನು ಬಿಟ್ಟು ಓಡಿಹೋದ.

ಅರಸರು ಪೆರಿಯಪಟ್ಟಣವನ್ನು ಸ್ವಾಧೀನ ಮಾಡಿಕೊಂಡರು. ಅರಮನೆಯಲ್ಲಿದ್ದ ವಸ್ತ್ರ ಆಭರಣ ದ್ರವ್ಯ ಮುಂತಾದ ಪದಾರ್ಥಗಳನ್ನೂ ಆನೆ, ಕುದುರೆ, ಆಯುಧ ಮೊದಲಾದುವನ್ನೂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಕಳಿಸಿದರು.

ತಾವು ಮಾತ್ರ ಪಟ್ಟಣಕ್ಕೆ ಹಿಂದಿರುಗಲಿಲ್ಲ. ನಂಜುಂಡ ಅರಸು ಎಲ್ಲಿಗೆ ಓಡಿಹೋದನೆಂದು ವಿಚಾರಿಸಿದರು. ತನ್ನ ಪಾಳೆಯಕ್ಕೆ ಗಡಿಯಾದ ಬೆಟ್ಟದಪುರಕ್ಕೆ ಅವನು ಹೋಗಿದ್ದನೆಂದು ವರ್ತಮಾನ ಬಂತು.

ಅರಸರು ಬೆಟ್ಟದಪುರಕ್ಕೆ ಸೈನ್ಯ ತೆಗೆದುಕೊಂಡು ಹೋದರು. ಬೆಟ್ಟದಪುರದಲ್ಲಿ ಅವನನ್ನು ಹುಡುಕಿ ಬಡಿದು, ಅಲ್ಲಿಂದ ಹೊಡೆದೋಡಿಸಿದರು. ಬೆಟ್ಟದಪುರ ಮೈಸೂರಿಗೆ ಸೇರಿತು

ನಂಜುಂಡ ಅರಸು ಬೆಟ್ಟದಪುರದಿಂದ ರುದ್ರಪಟ್ಟಣಕ್ಕೆ ಓಡಿಹೋದ. ಅರಸರು ಅಲ್ಲಿಗೂ ಅವನನ್ನು ಹಿಂಬಾಲಿಸಿಕೊಂಡು ಹೋದರು. ಅವನು ಅಲ್ಲಿಂದ ಕಣ್ಣಾಗಾಲಕ್ಕೆ ಓಡಿದ. ರುದ್ರಪಟ್ಟಣ ಅರಸರ ಕೈವಶವಾಯಿತು.

ಅರಸರು ಕಣ್ಣಾಗಾಲದ ಮೇಲೆ ದಂಡೆತ್ತಿ ಮುತ್ತಿದಾಗ, ಕಣ್ಣಾಗಾಲ ಅವರಿಗೆ ಶರಣಾಯಿತು. ನಂಜುಂಡ ಅರಸು ಅಲ್ಲಿಂದ ಕಿತ್ತೂರಿಗೆ ಓಡಿದ.

ಅರಸರು ಅಲ್ಲಿಗೂ ಬಿಡಲಿಲ್ಲ. ಕಿತ್ತೂರಿಗೆ ಹೋದರು. ಕಾಳಗ ಮಾಡಿದರು. ನಂಜುಂಡ ಅರಸನನ್ನು ಅಲ್ಲಿಂದಲೂ ಓಡಿಸಿದರು.

‘ನೀನು ಎಲ್ಲಿ ಹೋದರೂ ನಿನ್ನನ್ನು ಬಿಡುವುದಿಲ್ಲ’ ಎಂದು ನಾಗರ ಹಾವಿನ ಛಲದಿಂದ ಅವನನ್ನು ಸ್ಥಳದಿಂದ ಸ್ಥಳಕ್ಕೆ ಬೇಟೆಯಾಡಿದರು.

ಕಡೆಗೆ ಆ ನಂಜುಂಡ ಅರಸು ತಾನು ಹಿಂದೆ ಇದ್ದ ನಂಜರಾಜ ಪಟ್ಟಣಕ್ಕೆ ಓಡಿದ. ಅಲ್ಲಿ ಇದ್ದ ಶೂರರಾದ ಕೊಡಗರ ಸ್ನೇಹವನ್ನು ಸಂಪಾದಿಸಿ, ರಣಧೀರರನ್ನು ಎದುರಿಸಲು ಸಿದ್ಧನಾದ.

ಅವನ ಸಿದ್ಧತೆಗಳ ಸುದ್ದಿ ಬೆಂಕಿಗೆ ತುಪ್ಪದಂತಾಯಿತು. ಅರಸರು ಇನ್ನೂ ಹೆಚ್ಚಿನ ಸೇನೆಯನ್ನು ತೆಗೆದುಕೊಂಡು ತಾವೇ ಅಲ್ಲಿಗೆ ಹೋದರು.

ಏಳು ಹಗಲು ಏಳು ರಾತ್ರಿ ಎಡೆಬಿಡದೆ ಯುದ್ಧ ನಡೆಯಿತು. ಅರಸರು ಕೆಲವರನ್ನು ಕೊಂದರು, ಕೆಲವರನ್ನು ಗಾಯಗೊಳಿಸಿದರು. ಕೆಲವರು ಅವರೆದುರು ನಿಲ್ಲಲಾರದೆ ಓಡಿಹೋದರು, ನಂಜುಂಡ ಅರಸು ದೊರೆಗಳಿಗೆ ಎದುರಾಗಿ, ಯುದ್ಧದಲ್ಲಿ ಅವನ ಸಂಹಾರವಾಯಿತು. ನಂಜರಾಜ ಪಟ್ಟಣವು ಮೈಸೂರಿಗೆ ಸೇರಿತು, ಅಲ್ಲಿದ್ದ ಆಯುಧ ವಸ್ತ್ರಾಭರಣಗಳನ್ನೂ ಗಜಾಶ್ವ ಮುಂತಾದ ವಾಹನಗಳನ್ನೂ ತೆಗೆಸಿಕೊಂಡು ಪ್ರಭುಗಳು ವಿಜಯಿಯಾಗಿ ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದರು.

(ಕಂಠೀರವ ನರಸರಾಜ ಒಡೆಯರು ಹೀಗೆ ನಂಜುಂಡ ಅರಸುವನ್ನು—ನರಿಯನ್ನು ಬೇಟೆಯಾಡುವಂತೆ—ಅಟ್ಟಿಸಿಕೊಂಡು ಹೋಗಿ ಕೊಂದರು, ಎಂಬುದನ್ನು ಆಧರಿಸಿ ಸಂಸಕವಿ **'ನಂಜುಂಡ ನರಿ'** ಎಂಬ ಒಂದು ನಾಟಕವನ್ನು ರಚಿಸಿದ್ದಂತೆ ತಿಳಿದುಬಂದಿದೆ. ಆದರೆ ನಮ್ಮ ದುರದೃಷ್ಟದಿಂದ ಆ ನಾಟಕ ನಮಗೆ ಉಳಿದಿಲ್ಲ.)

ದುಷ್ಟ ಪಾಳಯಗಾರರನ್ನು ಈ ದೊರೆಗಳು ಯಾವ ಛಲದಿಂದ ಬಿಡದೆ ಶಿಕ್ಷಿಸುತ್ತಾರೆ ಎಂಬುದನ್ನು ಈ ಪ್ರಕರಣದಿಂದ ಕಂಡುಕೊಂಡ ಇತರ ಪಾಳೆಯಗಾರರು, ರಣಧೀರರ ನಾಯಕತ್ವವನ್ನು ತಾವು ಒಪ್ಪಿಕೊಂಡು, ಅವರಿಗೆ ವಿಧೇಯರಾಗಿ ನಡೆದು ಬದುಕಿಕೊಂಡರು.

[ಆಧಾರ :ವಂಶಾವಳಿ]

೧೩. ರಣಧೀರ

ಬಸವಾಪಟ್ಟಣದ ಹನುಮಪ್ಪ ನಾಯಕನಿಗೂ ಇಕ್ಕೇರಿ ವೀರಭದ್ರ ನಾಯಕನಿಗೂ ಬಹುಕಾಲದಿಂದ ದ್ವೇಷವಿತ್ತು. ವೀರಭದ್ರನಾಯಕನನ್ನು ಯುದ್ಧದಲ್ಲಿ ಸೋಲಿಸುವುದಕ್ಕೆ ಬೇಕಾದ ಸಹಾಯ ಸಂಪತ್ತು ಹನುಮಪ್ಪ ನಾಯಕನಿಗೆ ಇರಲಿಲ್ಲ. ಆದ್ದರಿಂದ ತನ್ನ ಮಂತ್ರಿಯನ್ನು ಕರೆದು, 'ನೀನು ಬಿಜಾಪುರದ ಪಾದಷಾಹರ ಹತ್ತಿರ ಹೋಗು. ಅವರಿಗೆ ಈ ಐವತ್ತು ಸಾವಿರ ವರಹಗಳನ್ನೂ ಈ ವಸ್ತ್ರ ಆಭರಣ ವಾಹನಗಳನ್ನೂ ಕೊಂಡು ಹೋಗಿ ಕೊಡು. ಅದರಿಂದ ನಮಗೆ ಬೇಕಾದ ಸೇನಾಸಹಾಯವನ್ನು ಪಡೆದು ಬಾ' ಎಂದು ಅವನನ್ನು ಕಳಿಸಿದ.

ಅವನು ತಂದು ಒಪ್ಪಿಸಿದುದನ್ನು ಪಾದಷಹರು ಸ್ವೀಕರಿಸಿ, 'ನಿಮಗೆ ಬೇಕಾದ ಸೇನಾಸಹಾಯವನ್ನು ಸಂತೋಷದಿಂದ ಕಳಿಸೋಣ' ಎಂದು ವಾಗ್ದಾನಮಾಡಿದರು.

ಆ ಕಾಲದಲ್ಲಿ ಗುಂಡಿಕಾರ ಚನ್ನಯ್ಯನೆಂಬುವನು ಪಾದಷಾಹರ ಆಶ್ರಯದಲ್ಲಿದ್ದ. ಅವನು 'ಈಗ ಶ್ರೀರಂಗಪಟ್ಟಣದಲ್ಲಿ ಹೊಸದಾಗಿ ಪಟ್ಟಕ್ಕೆ ಬಂದಿರುವವರು ಚಿಕ್ಕ ಹುಡುಗರು. ಅನುಭವ ಸಾಲದು. ತಮಗೆ ಬಂಧುವೂ ಆಪ್ತನೂ ಶೂರನೂ ಆಗಿದ್ದ ದಳವಾಯಿ ವಿಕ್ರಮರಾಯನನ್ನು ಚಾಡಿಮಾತು ಕೇಳಿ ಕೊಲ್ಲಿಸಿಬಿಟ್ಟರು. ಈಗ ಸೇನಾಧಿಪತಿಯಾಗಿರುವ ತಿಮ್ಮಪ್ಪ ನಾಯಕನಲ್ಲಿ ಯಾರಿಗೂ ನಂಬಿಕೆಯಿಲ್ಲ. ತಾವು ಹೇಗೂ ಆ ಕಡೆ ಸೈನ್ಯವನ್ನು ಕಳಿಸುತ್ತಿದ್ದೀರಿ. ಸರಿಯಾದ ಸೇನಾಪತಿಯ ಜೊತೆಯಲ್ಲಿ ಇನ್ನಷ್ಟು ಸೈನ್ಯ ಕಳಿಸಿದರೆ, ಶ್ರೀರಂಗಪಟ್ಟಣವನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದು' ಎಂದು ಸೂಚನೆ ಮಾಡಿದ.

ಪಾದಷಾಹರ ಬಾಯಲ್ಲಿ ನೀರೂರಿತು. ತಮ್ಮ ಸೇನಾಧಿಪತಿಯಾದ ರಣದುಲ್ಲಾಖಾನನನ್ನು ಕರೆದು—'ನಲವತ್ತು ಸಾವಿರ ಕುದುರೆಗಳನ್ನೂ

ಅವಕ್ಕೆ ತಕ್ಕಷ್ಟು ಕಾಲ್ಬಲವನ್ನೂ ಕೊಂಡುಹೋಗು. ಹನುಮಪ್ಪ ನಾಯಕನಿಗೆ ಸಹಾಯವಾಗಿ ವೀರಭದ್ರನಾಯಕನನ್ನು ಜಯಿಸಿದ ಮೇಲೆ ಈ ನಾಗಮಂಗಲದ ಚನ್ನಯ್ಯನೊಡನೆ ಹೋಗು. ಶ್ರೀರಂಗಪಟ್ಟಣವನ್ನು ಸಾಧಿಸಿಕೊಂಡು ವಿಜಯನಾಗಿ ಬಾ' ಎಂದು ಅವನಿಗೆ ರಣವೀಳ್ಯವನ್ನು ಕೊಟ್ಟು ಕಳಿಸಿದರು.

ರಣದುಲ್ಲಾಖಾನನು ವೀರಕಂಕಣವನ್ನು ಕಟ್ಟಿಕೊಂಡು ಹೊರಟು, ದಾರಿಯಲ್ಲಿ ವೀರಭದ್ರನಾಯಕನನ್ನು ಜಯಿಸಿ, ಮುಂದೆ ಏಕಕಾಲದಲ್ಲಿ ಶ್ರೀರಂಗಪಟ್ಟಣಕ್ಕೂ ಮೈಸೂರಿಗೂ ಮುತ್ತಿಗೆ ಹಾಕಿದ.

ಅವನ ಸೈನಿಕರು ಪಟ್ಟಣದ ಕೋಟೆಯ ಎರಡು ಮೂಲೆಗಳಲ್ಲಿ ಸುರಂಗವನ್ನು ತೋಡಿ, ಅದರಲ್ಲಿ ಮದ್ದು ಗುಂಡುಗಳನ್ನು ತುಂಬಿ, ಅವಕ್ಕೆ ಬೆಂಕಿಯಿಟ್ಟರು. ಎರಡು ಮೂಲೆಗಳಲ್ಲೂ ಕೋಟೆ ಬಿದ್ದುಹೋಯಿತು. ಕೋಟೆಯ ಮೇಲೆ ಕಾದಲಿದ್ದ ಜನರು ಹತರಾದರು. ಇದೇ ಸಮಯವೆಂದು ರಣದುಲ್ಲಾಖಾನನ ಸೈನಿಕರು ಕೋಟೆಗೆ ಲಗ್ಗೆ ಹತ್ತಲು ಬಂದರು.

ಆಗ ಶ್ರೀರಂಗಪಟ್ಟಣದ ಸಂರಕ್ಷಣೆಗೆ ಸಾಕ್ಷಾತ್ ಉಗ್ರನರಸಿಂಹ ದೇವರೇ ಪ್ರತ್ಯಕ್ಷನಾದ ಹಾಗೆ ರಣಧೀರ ಕಂಠೀರವ ನರಸಿಂಹರಾಜಒಡೆಯರು ತಮ್ಮ ವಿಜಯನಾರಸಿಂಹವನ್ನು ಪಟ್ಟು ತಿರುಗಿಸುತ್ತ ಶತ್ರುಗಳ ಎದುರು ಕಾಣಿಸಿಕೊಂಡರು. ಕೆಲವರ ಕಾಲುಗಳನ್ನು ಕತ್ತರಿಸಿದರು, ಕೆಲವರ ತಲೆಗಳನ್ನು ಒಡೆದರು. ಕೋಟೆಯ ಮೇಲಿನ ಕುದುರೆಗಳನ್ನು ತರಿದು ಹಾಕಿದರು, ಒಂಟೆಗಳನ್ನು ಓಡಿಸಿದರು. ಭಯಂಕರವಾಗಿ ಯುದ್ಧಮಾಡಿ, ಪ್ರತಿಪಕ್ಷದ ಶೂರರಿಗೆ ಪಲಾಯನಮಂತ್ರವನ್ನು ಉಪದೇಶಮಾಡಿದರು.

ತನ್ನ ಸೈನಿಕರಿಗೆ ಆದ ಗತಿಯನ್ನು ರಣದುಲ್ಲಾಖಾನ್ ನೋಡಿದ. 'ಈ ರಣಧೀರ ರಾಜರು ನಾವು ತಿಳಿದುಕೊಂಡಿದ್ದಂತೆ ಯುದ್ಧದಲ್ಲಿ ಅನುಭವವಿಲ್ಲದವರಲ್ಲ. ಇವರು ರಣಪಂಡಿತರು. ಇವರೊಡನೆ ಯುದ್ಧವನ್ನು ಮುಂದುವರಿಸುವುದರಿಂದ ಲಾಭವಿಲ್ಲ. ಸಂಧಿಯನ್ನಾದರೂ ಮಾಡಿಕೊಂಡು ಹಿಂದಿರುಗುವುದು ವಾಸಿ' ಎಂದು ಯೋಚಿಸಿದ.

ಆಗ ದುರ್ಮಂತ್ರಿಯಾದ ನಾಗಮಂಗಲದ ಚನ್ನಯ್ಯ—'ಈ ದಿನ ಸಂಧಿ ಮಾಡಿಕೊಳ್ಳುವುದು ಬೇಡ. ನಾನು ಬೇರೆ ದಾರಿಯಿಂದ ಪಟ್ಟಣ

ದೊಳಕ್ಕೆ ಹೋಗಿ ಅಲ್ಲಿಯ ಮರ್ಮವನ್ನು ಬಂದು ತಿಳಿಸುತ್ತೇನೆ. ನೀವು ಆ ದಾರಿಯಿಂದ ಬಂದು ಪಟ್ಟಣವನ್ನು ವಶಪಡಿಸಿಕೊಳ್ಳಬಹುದು' ಎಂದು ಹೇಳಿದ.

ಅನಂತರ ಚನ್ನಯ್ಯ ಕನ್ನಂಬಾಡಿಯ ಮೇಲೆ ಬಿಕ್ಕುಗೊಳದ ಮಾರ್ಗವಾಗಿ ಹೋಗಿ ಪಟ್ಟಣವನ್ನು ಪ್ರವೇಶಿಸಿದ. ರಣದುಲ್ಲಾಖಾನನ ಸೇನೆ ಹಿಮ್ಮೆಟ್ಟಿ ಹೋಯಿತೆಂದು ಪಟ್ಟಣದ ಸೈನಿಕರು ಅಲ್ಲಲ್ಲಿ ಉದಾಸೀನರಾಗಿ ಆಯಾಸ ಪರಿಹಾರ ಮಾಡಿಕೊಳ್ಳುತ್ತಿದ್ದುದನ್ನು ನೋಡಿದ.

'ಪಟ್ಟಣದ ಸೈನಿಕರು ಸದ್ಯಕ್ಕೆ ಯುದ್ಧಪ್ರಸಕ್ತಿ ಇಲ್ಲವೆಂಬಂತೆ ಮೈಮರೆತಿದ್ದಾರೆ. ಕೋಟೆ ಬಿದ್ದು ಹೋಗಿರುವ ಮಾರ್ಗದಿಂದ ನೀವು ನಾಳೆ ಸೇನಾಸಮೇತರಾಗಿ ಲಗ್ಗೆ ಬೀಳಬಹುದು' ಎಂದು ಚನ್ನಯ್ಯ ಹೇಳಿಕಳಿಸಿದ.

ಅನಂತರ ಮಾರನೆಯ ದಿನ ಲಗ್ಗೆ ಆಗುತ್ತದೆಂಬ ಸುಳಿವು ಕಂಡುಬಂದ ಕೂಡಲೆ ಪಟ್ಟಣದ ಸೈನಿಕರು ಎಚ್ಚೆತ್ತುಕೊಂಡು ಬಿಜಾಪುರದ ಸೈನಿಕರನ್ನು ಓಡಿಸಿದರು. ಅದೇ ಕಾಲದಲ್ಲಿ ಶ್ರೀರಂಗನಾಥಸ್ವಾಮಿಯ ಕಟಾಕ್ಷದಿಂದ ಪಟ್ಟಣದ ಕೋಟೆಯ ಮೇಲೆ ನೂರಾರು ಅತಿಭಯಂಕರರಾದ ರಾಕ್ಷಸರನ್ನು ಕಂಡ ಹಾಗಾಗಿ, ರಣದುಲ್ಲಾಖಾನನ ಸೈನಿಕರೆಲ್ಲ ಒಬ್ಬನೂ ಉಳಿಯದಂತೆ ಓಡಿಹೋದರು.

ಆ ಸುದ್ದಿಯನ್ನು ಕೇಳಿ ರಣಧೀರ ಕಂಠೀರವ ನರಸರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ಜಯಕಹಳೆಯನ್ನು ಊದಿಸಿದರು.

ರಣದುಲ್ಲಾಖಾನನಿಗೆ ಚನ್ನಯ್ಯನ ಮಾತಿನಲ್ಲಿ ನಂಬಿಕೆ ಹೋಯಿತು. 'ಯುದ್ಧ ಇನ್ನು ಸಾಕು. ಸಂಧಿ ಮಾಡಿಕೊಳ್ಳೋಣ' ಎಂದುಕೊಂಡು 'ಕಾವೇರಿಯ ದಕ್ಷಿಣಕ್ಕಿರುವ ಸೀಮೆಯೆಲ್ಲ ನಿಮ್ಮದೇ. ಆದರೆ ಉತ್ತರದ ಸೀಮೆಯಲ್ಲಿ ಏನು ಹುಟ್ಟುವಳಿಯಾಗುವುದೋ ಅದರಲ್ಲಿ ಖರ್ಚು ಕಳೆದು ಮಿಕ್ಕುದನ್ನು ನಮಗೆ ಒಪ್ಪಿಸಿಬಿಡಿ' ಎಂದು ದೊರೆಗಳಿಗೆ ಹೇಳಿಕಳಿಸಿದ.

ಅಷ್ಟರಲ್ಲಿ ಮೈಸೂರಿನ ಸ್ಥಿತಿ ಏನಾಗಿದೆಯೋ ನೋಡಬೇಕೆಂದು ಪ್ರಭುಗಳು ಕೆಲವು ಸೇನೆಯನ್ನು ತೆಗೆದುಕೊಂಡು ಮೈಸೂರಿಗೆ ಹೋದರು. ಅಲ್ಲಿನ ಗುರಿಕಾರ ವೀರತ್ರಯ್ಯ ಅವರಿಗೆ ಒಪ್ಪಿಸಿದ ವರದಿ ತುಂಬ ಆಶ್ಚರ್ಯಕರವಾಗಿತ್ತು.

ಮೈಸೂರಿನ ಕೋಟೆಯನ್ನು ಸ್ವಾಧೀನಮಾಡಿಕೊಳ್ಳಬೇಕೆಂದು ರಣದುಲ್ಲಾಖಾನನ ಸೇನೆ ಬಂದು ರಾತ್ರಿಯಾಗುವುದನ್ನು ಕಾದುಕೊಂಡಿತ್ತಂತೆ. ಹಾಗೆ ಅವರು ಲಗ್ಗೆ ಹತ್ತುವ ಮೊದಲೇ ಮೈಸೂರಿನವರು ತುಪಾಕಿಗಳನ್ನು ಹಾರಿಸಿದರಂತೆ. ರಣದುಲ್ಲಾಖಾನನ ಸೇನೆಯವರಿಗೆ ಕೋಟೆಯ ಮೇಲೆ ಬರೀ ಹೆಂಗಸರೇ ನಿಂತ ಹಾಗೆ ಕಂಡಿತಂತೆ. 'ಹೆಂಗಸರನ್ನು ಹೊಡೆಯಬಾರದು' ಎಂದು ಅವರು ತಟಸ್ಥರಾಗಿರುವಾಗ ಕೋಟೆಯ ತೆನೆಗಳ ಹತ್ತಿರ ಅತಿ ಭಯಂಕರವಾದ ಸ್ತ್ರೀಯರು ತಲೆಗಳನ್ನು ಕೆದರಿಕೊಂಡು ಆಯುಧಗಳನ್ನು ಝಳಪಿಸುತ್ತ ನಿಂತಂತೆ ಕಾಣಿಸಿತಂತೆ. ಆ ದೃಶ್ಯವನ್ನು ನೋಡಲಾರದೆ ಹೆದರಿಕೊಂಡು ಸೈನಿಕರೆಲ್ಲ ಪಲಾಯನ ಮಾಡಿದರಂತೆ.

ವೀರತ್ತಯ್ಯ ಹೇಳಿದ ವರದಿಯನ್ನು ಕೇಳಿ ಪ್ರಭುಗಳು 'ಅಲ್ಲಿ ಶ್ರೀರಂಗನಾಥನ ಅನುಗ್ರಹದಿಂದ ಪಟ್ಟಣ ಉಳಿಯಿತು. ಇಲ್ಲಿ ಈಗ ಶ್ರೀ ಚಾಮುಂಡೇಶ್ವರೀ ಅಮ್ಮನವರ ಕೃಪೆಯಿಂದ ಮೈಸೂರು ಉಳಿಯಿತು' ಎಂದು ತಮ್ಮನ್ನು ಕಾಪಾಡಿದ ದೇವತೆಗಳನ್ನು ಸ್ತೋತ್ರಮಾಡಿದರು.

'ಕೋಟೆಗಳನ್ನು ಭದ್ರಪಡಿಸುವವರೆಗೂ ಯುದ್ಧ ಬೇಡ' ಎಂದು ರಣಧೀರರು ರಣದುಲ್ಲಾಖಾನನು ಹೇಳಿಕಳಿಸಿದ್ದನ್ನು ಒಪ್ಪಿಕೊಂಡರು. ಹೀಗೆ ದೇವತಾನುಗ್ರಹದಿಂದಲೂ ಒಡೆಯರ ಬಾಹುಬಲದಿಂದಲೂ ಮೈಸೂರು ಶ್ರೀರಂಗಪಟ್ಟಣಗಳು ಉಳಿದುಕೊಂಡುವು.

[ಆಧಾರ :ವಂಶಾವಳಿ]

೧೪. ಕಲಿಯುಗ ಭೀಮ

ಮೈಸೂರನ್ನು ಆಳಿದ ಒಡೆಯರಲ್ಲೆಲ್ಲ ತಮ್ಮ ವೈಯಕ್ತಿಕವಾದ ಶಕ್ತಿ ಸಾಹಸ ಪರಾಕ್ರಮಗಳಿಂದ ಸುಪ್ರಸಿದ್ಧರಾದವರು ರಣಧೀರ ಕಂಠೀರವ ನರಸರಾಜ ಒಡೆಯರು. ಮಿಕ್ಕ ಒಡೆಯರಿಗೆ ಇದ್ದ ಹಾಗೆ ಮಂತ್ರಿಬಲ, ಸೇನಾಬಲ, ಕೋಶಬಲ, ಪ್ರಜಾಬಲಗಳು ಇವರಿಗೂ ಇತ್ತು. ಉಳಿದವರಂತೆಯೇ ಇವರು ದುಷ್ಟರನ್ನು ದಮನಮಾಡಿ, ತಮ್ಮ ರಾಜ್ಯವನ್ನು ವಿಸ್ತರಿಸಿದರು. ಆದರೆ ರಣಭೂಮಿಯಲ್ಲಿ ಮಾತ್ರವಲ್ಲದೆ ಇತರ ಕಡೆಯೂ ತಮ್ಮ ಸ್ವೀಯ ಮಲ್ಲತನವನ್ನು ತೋರ್ಪಡಿಸಬೇಕಾದ ಪ್ರಕರಣಗಳು ಇವರಿಗೆ ಒದಗಿದಂತೆ ಇತರರಿಗೆ ಒದಗಿದ್ದು ತಿಳಿದುಬಂದಿಲ್ಲ.

ಇವರ ವಿಷಯದಲ್ಲಿ ಒಂದು ಕತೆ ಪ್ರಚಾರದಲ್ಲುಂಟು. ಇವರು ತಮ್ಮ ಮಲ್ಲಸಾಧನೆಯ ಅಂಗವಾಗಿ, ಎಮ್ಮೆಯ ಬಲಿತ ಹೋರಿಕರುವೊಂದನ್ನು ಹೆಗಲ ಮೇಲೆ ಹೊತ್ತುಕೊಂಡು ಬೆಟ್ಟವನ್ನು ಹತ್ತುತ್ತಿದ್ದರಂತೆ. [ಇದೇನೂ ಅವಿಶ್ವಸನೀಯವಾಗಿ ಕಾಣುವುದಿಲ್ಲ. ಈಗಲೂ ಗರಡಿಯವರು ತಮ್ಮ ತೊಡೆಗಳನ್ನೂ ಎದೆಯನ್ನೂ ತೋಳುಗಳನ್ನೂ ಗಟ್ಟಿಮಾಡಿಕೊಳ್ಳುವುದಕ್ಕಾಗಿ ತಮ್ಮ ಹೆಗಲ ಮೇಲೆ ಮತ್ತೊಬ್ಬ ಮಲ್ಲನನ್ನು ಕೂರಿಸಿಕೊಂಡು 'ಉಠ್—ಬೈಸ್' ಮಾಡುತ್ತಾರೆ; ತಮ್ಮ ಬೆನ್ನ ಮೇಲೆ ಒಬ್ಬನನ್ನು ಏರಿಸಿಕೊಂಡು ದಂಡೆ ಒತ್ತುತ್ತಾರೆ.]

ಇನ್ನೂ ಸಣ್ಣವಯಸ್ಸಿನ ಯುವಕನಾಗಿರುವಾಗಲೇ ವೇಷ ಮರೆಸಿಕೊಂಡು ತಿರುಚನಾಪಳ್ಳಿಗೆ ಹೋಗಿ, ಅಲ್ಲಿನ ಆಸ್ಥಾನದ ಉದ್ಭಟಮಲ್ಲನನ್ನು ಧರ್ಮಯುದ್ಧದಲ್ಲಿ ಕೊಂದುಹಾಕಿ ಬಂದದ್ದೇ ಇವರ ಅತಿಮಾನುಷವಾದ ದೇಹಬಲಕ್ಕೆ ಸಾಕ್ಷಿ.

ಇವರ ಸಮಕಾಲದವರು ಇವರನ್ನು '**ಕಲಿಯುಗ ಭೀಮ**' ಎಂದು ಪರಿಗಣಿಸಿದ್ದರು. ಈ ಹೆಸರಿಗೆ ಸಮರ್ಥನೆಯಾಗುವಂತಹ ಇವರ ಏಕಾಂಗವೀರದ ಒಂದು ಪ್ರಕರಣವನ್ನು ಇಲ್ಲಿ ವಿವರಿಸಬಹುದು.

ರಣಧೀರರು ತಿರುಚನಾಪಳ್ಳಿಯ ಜಟ್ಟಿಯನ್ನು ಸೋಲಿಸಿ ಕೊಂದುದನ್ನು ನೋಡಿ ಅಲ್ಲಿನ ಅರಸು ಇವರನ್ನು ಗೌರವಿಸಬೇಕೆಂದು ಯೋಚಿಸಿದಾಗ, 'ಮೈಸೂರಿನವರು ಯಾರೋ ಬಂದು ಈ ಕಾರ್ಯವನ್ನು ಮಾಡಿಹೋದರು' ಎಂದು ಅವನ ಕಿವಿಗೆ ಬೀಳುವಂತೆ ಮಾಡಿ, ತಾವು ತಮ್ಮ ಜಯಶ್ರೀಯೊಡನೆ ಮೈಸೂರಿಗೆ ಬಂದರು.

ಅನಂತರ ತಿರುಚನಾಪಳ್ಳಿಯ ಅರಸು ಇವರಿಗಾಗಿ ಅಲ್ಲಿ ಇಲ್ಲಿ ಶೋಧನೆ ಮಾಡಿಸಿದ. ಕಡೆಗೆ ಇವರು 'ಮೈಸೂರಿನ ರಾಜಒಡೆಯರ ಅಣ್ಣಂದಿರ ಮಗ'ನೆಂಬುದು ತಿಳಿಯಿತು. ತನ್ನ ಮಲ್ಲನನ್ನು ಕೊಂದವನಿಗೆ ಹೇಗೆ ಶಿಕ್ಷಿಸಬೇಕೆಂಬುದು ತೋರದೆ, ಆ ಅರಸು ಒಳಗೊಳಗೇ ಕೊರಗುತ್ತಿದ್ದ.

ಕಾಲಕ್ರಮದಲ್ಲಿ ರಣಧೀರರು ಪಟ್ಟಕ್ಕೆ ಬಂದರು. ಸುತ್ತುಮುತ್ತಿನ ತುಂಟ ಪಾಳಯಗಾರರನ್ನು ಯುದ್ಧದಲ್ಲಿ ಸೋಲಿಸಿ ತಹಬಂದಿಗೆ ತಂದರು. ತಮ್ಮ ರಾಜ್ಯವನ್ನು ಬೆಳಸಿದರು.

'ಮೈಸೂರಿಗೆ ಹೊಸ ದೊರೆ ಬಂದಿದ್ದಾನೆ. ಇನ್ನೂ ಚಿಕ್ಕ ವಯಸ್ಸು, ಅನುಭವ ಸಾಲದು. ತಮ್ಮ ಸುಶಿಕ್ಷಿತ ಸೇನೆಯನ್ನು ತೆಗೆದುಕೊಂಡು ಹೋದರೆ, ಮೈಸೂರನ್ನು ಲೀಲಾಜಾಲವಾಗಿ ಗೆದ್ದುಕೊಳ್ಳಬಹುದು' ಎಂದು ಯಾರೋ ವಿವೇಕ ಸಾಲದವರು ಬಿಜಾಪುರದ ಸುಲ್ತಾನನಿಗೆ ಹೇಳಿದರು. ಸುಲ್ತಾನನು ಅದೂ ನಿಜ ಎಂದುಕೊಂಡು ರಣದುಲ್ಲಾಖಾನ್ ಎಂಬ ಸೇನಾಪತಿಯ ನೇತೃತ್ವದಲ್ಲಿ ೪೦ ಸಾವಿರ ಕುದುರೆಸೈನ್ಯವನ್ನು ಕಳಿಸಿದ. ಹೋದ ಸೇನೆ ಮೈಸೂರಿನವರ ಕೈಯಲ್ಲಿ ಧೂಳೀಪಟವಾಯಿತು. ಸೇನಾಪತಿ ಮಣ್ಣು ತಿಂದು ಹಿಂದಕ್ಕೆ ಹೋದ.

'ರಣಧೀರನ ರಾಜ್ಯದ ಮೇಲೆ ಬಿಜಾಪುರದ ಸೇನೆ ಬರುತ್ತಿದೆ. ನಾವು ಮಾಡಬೇಕಾದ್ದನ್ನು ಅವರೇ ಮಾಡುತ್ತಾರೆ' ಎಂದು ತಿರುಚನಾಪಳ್ಳಿಯ ಅರಸು ಹಿಗ್ಗುತ್ತಿದ್ದ. ಆದರೆ ಬಿಜಾಪುರದವರ ಸೋಲನ್ನು ಕೇಳಿದೊಡನೆ ಅವನಿಗೆ ಆತಂಕ ಹುಟ್ಟಿತು. 'ರಾಜನಾಗುವುದಕ್ಕೆ ಮೊದಲೇ ಇಲ್ಲಿಗೆ ಬಂದು, ನಮ್ಮ ಅಸಹಾಯ ಶೂರನಾದ ಮಲ್ಲನನ್ನು ಕೊಂದಿದ್ದಾನೆ. ಈಗ ವಿಜಯದ ಮೇಲೆ ವಿಜಯವನ್ನು ಪಡೆದ ಮದದಿಂದ ನಮ್ಮ ಮೇಲೆಯೂ ದಂಡೆತ್ತಿ ಬಂದರೆ ಏನು ಗತಿ ?' ಎಂದು ಅವನಿಗೆ ಅನ್ನ ಸೇರಲಿಲ್ಲ, ನಿದ್ರೆ ಹತ್ತಲಿಲ್ಲ.

‘ಎದುರಿಗೆ ನಿಂತು ಯುದ್ಧಮಾಡಿ ಅವನ ಸೇನೆಯನ್ನು ಸೋಲಿಸಲು ಆಗುತ್ತದೆಯೋ ಇಲ್ಲವೋ. ಮರೆಯಿಂದ ಮೋಸಮಾಡಿ ಅವನನ್ನೇ ಏಕೆ ಕೊಂದುಬಿಡಬಾರದು ?’ ಎಂದು ಯೋಚಿಸಿದ.

ಕೂಡಲೆ, ಯಾರನ್ನಾದರೂ ಕೊಲೆಮಾಡುವುದಕ್ಕೆ ಹೇಸದ ೨೫ ಕಳ್ಳರನ್ನು ಕರಸಿಕೊಂಡ. ಅವರು ಸಾಮಾನ್ಯ ಕಳ್ಳರಲ್ಲ; ಶೂರರು, ಯುದ್ಧದಲ್ಲಿ ಪ್ರವೀಣರು. ಅರಸು ಅವರಿಗೆಲ್ಲ ಕೈ ತುಂಬ ಹಣ ಕೊಟ್ಟು, ‘ಶ್ರೀರಂಗಪಟ್ಟಣಕ್ಕೆ ಹೋಗಿ, ಅಲ್ಲಿನ ರಾಜನಾದ ರಣಧೀರನನ್ನು ಸಂಹರಿಸಿ, ಅವನ ತಲೆಯನ್ನು ತೆಗೆದುಕೊಂಡು ಬನ್ನಿ. ಇನ್ನೂ ಹೆಚ್ಚಿನ ಹಣ ಕೊಡುತ್ತೇನೆ’ ಎಂದ.

‘ನಮ್ಮ ತಲೆ ಹೋದರೂ ಸರಿ, ಅವನ ತಲೆಯನ್ನು ತಂದೇ ತರುತ್ತೇವೆ’ ಎಂದು ಪ್ರತಿಯೊಬ್ಬನೂ ಶಪಥ ಮಾಡಿದ. ೨೫ ಕಳ್ಳರೂ ವೇಷ ಮರೆಸಿಕೊಂಡರು. ಒಬ್ಬೊಬ್ಬರು ಒಂದೊಂದು ಮಾರ್ಗವನ್ನು ಹಿಡಿದು ಮೈಸೂರಿಗೆ ಹೋಗಿ ಸೇರಿದರು.

ಅಲ್ಲಿ ಕೆಲವು ದಿವಸ ವಾಸಮಾಡಿ, ಅರಮನೆಯ ಆಳುಗಳಿಂದ ಅರಮನೆಯ ಮರ್ಮವನ್ನೆಲ್ಲ ತಿಳಿದುಕೊಂಡರು. ಕನ್ನ ಹಾಕಿ ಅರಮನೆಯೊಳಕ್ಕೆ ಹೋಗುವುದಕ್ಕೆ ಸಮಯ ಕಾಯುತ್ತಿದ್ದರು.

ಒಂದು ರಾತ್ರಿ ಅವರು ಜಲಮಾರ್ಗದ ಮೂಲಕವಾಗಿ ಅಂತಃಪುರಕ್ಕೆ ಕನ್ನ ಹಾಕಿ ಒಳಹೊಕ್ಕರು. ೨೫ ಜನರಲ್ಲಿ ಒಬ್ಬೊಬ್ಬನೂ ಒಂದೊಂದು ಸಾಣೆ ಹಿಡಿದ ಖಡ್ಗವನ್ನು ಹಿಡಿದಿದ್ದ.

ಒಳಗೆ ರಣಧೀರರು ಒಬ್ಬರೇ ಒಂದು ಕಲ್ಲುಮಂಚದ ಮೇಲೆ ಕುಳಿತು ಎಲೆಯಡಿಕೆ ಸೇವಿಸುತ್ತಿದ್ದರು. ಅವರ ಉಕ್ಕಿನಂತಹ ದೇಹಕ್ಕೆ ಕಲ್ಲುಮಂಚದ ಮೇಲೆ ಮಲಗುವುದೇ ರೂಢಿ.

‘ಇವನಿಗೆ ನಿದ್ರೆ ಬರಲಿ. ಆಗ ಇವನನ್ನು ಇಪ್ಪತ್ತೈದು ಹೋಳು ಮಾಡಿಬಿಡೋಣ’ ಎಂದು ಆ ಕಳ್ಳರೆಂದುಕೊಂಡರು. ನಿದ್ದೆ ಮಾಡುವ ಶಾಲೆಗೂ ಮುಂದಿನ ದೊಡ್ಡ ಹಜಾರದಲ್ಲಿ ಅನೇಕ ಕಂಬಗಳಿದ್ದುವು. ಪ್ರತಿಯೊಬ್ಬನೂ ಸದ್ದಿಲ್ಲದೆ ಒಂದೊಂದು ಕಂಬದ ಹಿಂದೆ ಅವಿತುಕೊಂಡು ನಿಂತ.

ಅವರು ಎಷ್ಟೇ ಸದ್ದು ಮಾಡದಿದ್ದರೂ ಅವರ ನೆರಳುಗಳ ಓಡಾಟ ಅರಸರ ಕಡೆಗಣ್ಣಿಗೆ ಗೋಚರವಾಯಿತು. 'ನನಗೆ ಅಪಾಯ ಮಾಡುವುದಕ್ಕಾಗಿ ಯಾರೋ ದ್ರೋಹಿಗಳು ಹೊಂಚುಹಾಕುತ್ತಿದ್ದಾರೆ' ಎಂದುಕೊಂಡು ರಣಧೀರರು ತಮ್ಮ ಬಳಿಯಲ್ಲಿದ್ದ 'ವಿಜಯನಾರಸಿಂಹ'ಕ್ಕೆ ಕೈಚಾಚಿದರು.

ಅದನ್ನು ನೋಡಿದ ಕೂಡಲೆ ಆ ಜನರೂ ತಮ್ಮ ಖಡ್ಗಗಳನ್ನು ಝಳಪಿಸುತ್ತ ರಣಧೀರರನ್ನು ಮುತ್ತಿಕೊಂಡರು. ರಣಧೀರರು ಏನೂ ಹೆದರದೆ, ಮಂಡಲಾಕಾರವಾಗಿ ತಿರುಗುತ್ತ, ತಮ್ಮ ಸೆಳೆಕತ್ತಿಯ ಚಟ್ಟಾವರಸೆಯಿಂದ ಕೆಲವರನ್ನು ಕತ್ತರಿಸಿಹಾಕಿದರು; ಸಮೀಪಕ್ಕೆ ಬಂದವರನ್ನು ಹಿಡಿದು ಕಂಕುಳಲ್ಲಿ ಇರುಕಿಕೊಂಡು ಅವರ ಕೊರಳು ಮುರಿದು ಎಸೆದರು. ಇನ್ನು ಕೆಲವರ ಮೇಲೆ ನೆಗೆದು, ಕಾಲುಗಳಿಂದ ಅವರ ಎದೆಗೆ ಒದೆದು ಅವರನ್ನು ಕೊಂದರು. ಒಂದು ಮೂವರು ಮಾತ್ರ ತಮ್ಮ ಖಡ್ಗಗಳನ್ನು ಕೆಳಗೆ ಹಾಕಿ ಅರಸರ ಪಾದಗಳಿಗೆ ಶರಣಾದರು.

'ನೀವು ಯಾರು ?' ಎಂದರು, ರಣಧೀರರು. ಕಳ್ಳರು ತಾವು ಯಾರೆಂಬುದನ್ನೂ ತಾವು ಏಕೆ ಬಂದಿದ್ದೇವೆಂಬುದನ್ನೂ ತಿಳಿಸಿದರು.

'ಬಂದು ಆಯಿತಲ್ಲ. ಇನ್ನು ಹೋಗಿ. ನಿಮ್ಮರಸನಿಗೆ ಆದದ್ದನ್ನು ತಿಳಿಸಿ' ಎಂದು ರಣಧೀರರು ಅವರನ್ನು ಕ್ಷಮಿಸಿ ಕಳುಹಿದರು.

ಅವರು ಹೋಗಿ, ತಮ್ಮ ಧಣಿಗೆ ವರದಿ ಮಾಡಿದರು. ತಿರುಚನಾಪಳ್ಳಿಯ ಅರಸು ನಿರಾಶೆಯು, ಭಯವು, ಅವಮಾನದ ಭಾರದಿಂದ ತಲೆಯೆತ್ತಲಾರದೆಹೋದ.

ಅಷ್ಟೇ ಅಲ್ಲ—

ಹಿಂದೆ, ವಿಶ್ವಾಮಿತ್ರರ ಯಜ್ಞರಕ್ಷಣೆಗಾಗಿ ರಾಮ ಬಿಟ್ಟ ಬಾಣದ ಏಟನ್ನು ತಿಂದ ಮಾರೀಚ, 'ರ'ಕಾರದಿಂದ ಆರಂಭವಾಗುವ ಯಾವ ಹೆಸರು ಕೇಳಿದರೂ ಥರಥರ ನಡುಗುತ್ತಿದ್ದನಂತೆ. ತಿರುಚನಾಪಳ್ಳಿಯ ಅರಸನ ಪಾಡಾದರೂ ಹೀಗೇ ಆಯಿತು. ರಣಧೀರ ಕಂಠೀರವ ನರಸರಾಜರು ಅವನ ಪಾಲಿಗೆ 'ಸಿಂಹಸ್ವಪ್ನ'ವಾದರು !

(ಆಧಾರ : ವಂಶಾವಳಿ)

೧೫. ಅಪ್ರತಿಮವೀರ

ಬಿಜಾಪುರದ ಸೇನಾಪತಿಯಾದ ರಣದುಲ್ಲಾಖಾನ್ ಮೈಸೂರಿನ ಸೇನೆಯನ್ನು ಗೆಲ್ಲಲಾರದೆ ರಣಧೀರನ ಹತ್ತಿರ ಸಂಧಿಮಾಡಿಕೊಂಡು ಹೋದ. ‘ಕಾವೇರಿಯ ದಕ್ಷಿಣಭಾಗದ ಸೀಮೆಯ ಪಟ್ಟೆವಳಿಯೆಲ್ಲ ನಿಮ್ಮದೇ. ಉತ್ತರಭಾಗದ ಸೀಮೆಯ ಪಟ್ಟೆವಳಿಯಲ್ಲಿ ನಿಮ್ಮ ಖರ್ಚು ಕಳೆದು ಉಳಿದದ್ದನ್ನು ನಮಗೆ ಕೊಡಿ. ನಾವು ಹೋಗುತ್ತೇವೆ’ ಎಂದು ಒಪ್ಪಂದ ಮಾಡಿಕೊಂಡ. ಇದಕ್ಕೆ ‘ಖಂಡಣೆ’ ಎಂದು ಹೆಸರು.

ಆಗ ಶ್ರೀರಂಗಪಟ್ಟಣದ ಕೋಟೆ ಶತ್ರುಗಳ ಮುತ್ತಿಗೆಯಿಂದ ಶಿಥಿಲವಾಗಿತ್ತು. ಕೋಟೆಯೊಳಗಿನ ಉಗ್ರಾಣ ಬರಿದಾಗಿತ್ತು. ಆದ್ದರಿಂದ ರಣಧೀರರು ಯುದ್ಧವನ್ನು ಮುಂದುವರಿಸದೆ ಖಂಡಣೆಗೆ ಒಪ್ಪಿಕೊಂಡರು. ರಣದುಲ್ಲಾಖಾನನು ಬಿಜಾಪುರಕ್ಕೆ ಹಿಂದಿರುಗಿದ.

ಇತ್ತ ರಣದುಲ್ಲಾಖಾನನೊಡನೆ ಹೋರಾಡಿ ಸೋತುಹೋದ ಇಕ್ಕೇರಿಯ ವೀರಭದ್ರನಾಯಕ ರಣದುಲ್ಲಾಖಾನನಿಗೆ ಅವಮಾನಮಾಡಲು ಒಂದು ತಂತ್ರ ಹೂಡಿದ. ತನ್ನ ಕಡೆಯ ಇಬ್ಬರು ನಿಯೋಗಿಗಳ ಕೈಲಿ ಬಿಜಾಪುರದ ಸುಲ್ತಾನರಿಗೆ ಅಮೂಲ್ಯವಾದ ವಸ್ತ್ರಾಭರಣಗಳನ್ನು ಕಾಣಿಕೆಯಾಗಿ ಕಳಿಸಿದ. ಅವರು ಸುಲ್ತಾನರನ್ನು ಏಕಾಂತದಲ್ಲಿ ಕಂಡು, ‘ಶ್ರೀರಂಗಪಟ್ಟಣವನ್ನು ಗೆಲ್ಲುವುದಕ್ಕೆ ರಣದುಲ್ಲಾಖಾನನ ಜೊತೆಯಲ್ಲಿ ೫೦ ಸಾವಿರ ಕುದುರೆಗಳನ್ನೂ ಬಸವಾಪಟ್ಟಣದ ಹನುಮಪ್ಪನಾಯಕನನ್ನೂ ನಾಗಮಂಗಲದ ಚನ್ನಯ್ಯನನ್ನೂ ಕಳುಹಿಸಿಕೊಟ್ಟಿರಿ. ಆದರೆ ರಣದುಲ್ಲಾಖಾನನು ಪಟ್ಟಣದ ಮರ್ಮವನ್ನು ಬಲ್ಲ ಚನ್ನಯ್ಯನ ಮಾತನ್ನು ಕೇಳದೆ, ಹನುಮಪ್ಪನಾಯಕನ ಮಾತಿನ ಮೇರೆಗೆ ಖಂಡಣೆಯ ಹಣಕ್ಕೆ ಒಪ್ಪಿಕೊಂಡು ಬಂದಿದ್ದಾನೆ. ಆದರ ವಸೂಲಿಯನ್ನು ಹನುಮಪ್ಪನಿಗೇ ಒಪ್ಪಿಸಿದ್ದಾನೆ. ಶ್ರೀರಂಗಪಟ್ಟಣದ ದೊರೆಗಳಾದರೋ ಮಹಾ ಛಲಗಾರರು. ಅವರು

ಯುದ್ಧ ಮಾಡುವವರೇ ಹೊರತು ಖಂಡಣೆಯ ಹಣವನ್ನು ಎಂದಿಗೂ ಕೊಡತಕ್ಕವರಲ್ಲ' ಎಂದರು.

ಅವರ ಮಾತನ್ನು ಪರೀಕ್ಷಿಸಬೇಕೆಂದು ಸುಲ್ತಾನರು ಸ್ವಲ್ಪ ಕಾಲಾನಂತರ, ಖಂಡಣೆಯ ಹಣವನ್ನು ತೆಗೆದುಕೊಂಡು ಬರಲು ತಮ್ಮ ಕಡೆಯ ನಾಲ್ವರು ಅಧಿಕಾರಿಗಳನ್ನು ಕಳುಹಿಸಿದರು. ದೊರೆಗಳು ತಾವು ಕೊಡುವುದಿಲ್ಲವೆಂದು ಅವರನ್ನು ಬರಿಗೈಯಲ್ಲಿ ಹಿಂದಕ್ಕೆ ಕಳುಹಿಸಿದರು.

ಸುಲ್ತಾನರಿಗೆ ಕೋಪ ಬಂತು. ರಣದುಲ್ಲಾ ಖಾನನಿಗೆ ಸೇನಾಪತಿತ್ವವನ್ನು ತಪ್ಪಿಸಿ, ಖಾನ್‌ಖಾನ್ ಎಂಬುವನಿಗೆ ಆ ಅಧಿಕಾರವನ್ನು ಕೊಟ್ಟರು. ನಾಗಮಂಗಲದ ಚನ್ನಯ್ಯನನ್ನೂ ಇಕ್ಕೇರಿ ವೀರಭದ್ರನಾಯಕನನ್ನೂ ಅವನ ಸಹಾಯಕ್ಕೆ ಕಳಿಸಿದರು. 'ಶ್ರೀರಂಗಪಟ್ಟಣವನ್ನು ಗೆದ್ದು ಬನ್ನಿ' ಎಂದು ಕಟ್ಟಪ್ಪಣೆ ಮಾಡಿದರು.

ಬರುವಾಗ ದಾರಿಯಲ್ಲಿ ಖಾನ್‌ಖಾನ್ ನಾಗಮಂಗಲದ ಚನ್ನಯ್ಯನ ಜೊತೆಗೆ ಸ್ವಲ್ಪ ಸೈನ್ಯವನ್ನು ಕೊಟ್ಟು, 'ಹನುಮಪ್ಪನಾಯಕನ ಬಳಿಗೆ ಹೋಗಿ, ಅವನಿಂದ ಖಂಡಣೆಯ ಹಣವನ್ನು ವಸೂಲು ಮಾಡಿಕೊಂಡು ಬಾ' ಎಂದು ಕಳಿಸಿದ. ಅದರಂತೆ ಅವನು ಹೋಗಿ ಕೇಳಿದಾಗ ಹನುಮಪ್ಪನಾಯಕ ಸೇನೆಯೊಡನೆ ಬಂದು ಯುದ್ಧ ಮಾಡಿದ. ಯುದ್ಧದಲ್ಲಿ ಚನ್ನಯ್ಯ ತೀರಿಕೊಂಡ.

ಚನ್ನಯ್ಯ ಮಡಿದ ಸುದ್ದಿಯನ್ನು ಕೇಳಿ, ಖಾನ್‌ಖಾನ್ 'ಶ್ರೀರಂಗಪಟ್ಟಣದ ಮಾರ್ಗವನ್ನು ತಿಳಿದಿದ್ದ ಚನ್ನಯ್ಯ ತೀರಿಕೊಂಡ. ಇಕ್ಕೇರಿ ವೀರಭದ್ರನಾಯಕನಿಗೆ ಏನೂ ತಿಳಿಯದು. ಶತ್ರುವಿನ ನೆಲೆಯನ್ನು ತಿಳಿಯದೆ ಹೋಗಿ, ಸೋತು ಅವಮಾನಪಡುವುದಕ್ಕಿಂತ ಇದ್ದ ಸುದ್ದಿಯನ್ನು ಸುಲ್ತಾನರಿಗೆ ತಿಳಿಸುವುದು ಮೇಲು' ಎಂದುಕೊಂಡು ಬಿಜಾಪುರಕ್ಕೆ ಹಿಂದಿರುಗಿದ. ದಾರಿಯಲ್ಲಿ ಕೆಲವು ಗ್ರಾಮಗಳಿಗೆ ಮುತ್ತಿಗೆಹಾಕಿ, ಅವುಗಳನ್ನು ವಶಪಡಿಸಿಕೊಂಡ.

ದಾರಿಯಲ್ಲಿ ಬಸವಾಪಟ್ಟಣದ ಹನುಮಪ್ಪನಾಯಕ ತುಂಟತನ ಮಾಡಿದ್ದರಿಂದ ಅವನೊಡನೆ ಯುದ್ಧವಾಯಿತು. ಯುದ್ಧದಲ್ಲಿ ಹನುಮಪ್ಪ ಸತ್ತ.

ದೈವದ ಅನುಗ್ರಹ ರಣಧೀರರಿಗೆ ರಕ್ಷೆಯಾಗಿ ಇದ್ದುದರಿಂದ ಶ್ರೀರಂಗಪಟ್ಟಣಕ್ಕೆ ದ್ರೋಹವನ್ನು ಬಗೆದವರು ಮಾತ್ರ ಈ ಪ್ರಕರಣದಲ್ಲಿ ತಮ್ಮ ಪ್ರಾಣಗಳನ್ನು ಕಳೆದುಕೊಂಡರು.

ಖಾನ್ ಖಾನನು ಮಾಡಿದ ಪರಿಯನ್ನು ಕೇಳಿ ಸುಲ್ತಾನರು ಬೆಂಕಿ ಬೆಂಕಿಯಾದರು. 'ಸೇನಾಧಿಪತಿಯಾಗಿರಲು ನೀನು ಶುದ್ಧ ನಾಲಾಯಕ್' ಎಂದು ಅವನನ್ನು ಬೈದು, ಅವನ ಅಧಿಕಾರವನ್ನು ಕಿತ್ತು ಮುಸ್ತಾಫ್ ಖಾನ್ ಎಂಬವನಿಗೆ ಕೊಟ್ಟು ಪುನಃ ಕಳಿಸಿದರು.

'ಸುಲ್ತಾನರು ಈ ಸಲ ಇನ್ನೊಬ್ಬನನ್ನು ಕಳುಹಿಸಿದ್ದಾರಂತೆ, ಅವನು ದಾರಿಯಲ್ಲಿ ಕೆಲವು ಪಾಳೆಯಪಟ್ಟುಗಳನ್ನು ಸ್ವಾಧೀನಪಡಿಸಿಕೊಂಡು ಶ್ರೀರಂಗಪಟ್ಟಣಕ್ಕೆ ಮುತ್ತಿಗೆಹಾಕಲು ಬರುತ್ತಿದ್ದಾನಂತೆ' ಎಂದು ದೊರೆಗಳಿಗೆ ವರ್ತಮಾನ ಬಂತು. ದೊರೆಗಳು ದಳವಾಯಿ ತಿಮ್ಮಪ್ಪನಾಯಕನನ್ನು ಕರೆದು, 'ಸೈನ್ಯದೊಡನೆ ಹೋಗು. ಅವನು ಇಲ್ಲಿಗೆ ಬಾರದಂತೆ ಅಲ್ಲಿಯೇ ಹೊಡೆದೋಡಿಸಿಬಿಡು. ಹೋಗು' ಎಂದು ಆಜ್ಞೆ ಮಾಡಿದರು.

ದಳವಾಯಿಯ ಸೇನೆಯೂ ಖಾನನ ಸೈನ್ಯವೂ ಸಂಧಿಸಿದಾಗ ಖಾನನು 'ವೃಥಾ ಯುದ್ಧವೇಕೆ? ಒಪ್ಪಿಕೊಂಡಿರುವ ಖಂಡಣಿಯನ್ನು ಈಗಲೂ ಕೊಟ್ಟುಬಿಡಲಿ. ನಮ್ಮಷ್ಟಕ್ಕೆ ನಾವು ಹೊರಟುಹೋಗುತ್ತೇವೆ. ಇಲ್ಲದಿದ್ದರೆ ಯುದ್ಧಮಾಡಿ ನಿಮ್ಮ ಶ್ರೀರಂಗಪಟ್ಟಣವನ್ನು ತೆಗೆದುಕೊಳ್ಳುತ್ತೇವೆ' ಎಂದ. ಹೋದ ದಳವಾಯಿ ದೂತನಾಗಿ ಹಿಂದಿರುಗಿ ಬಂದ.

ಈ ಮಾತು ದೊರೆಗಳ ಕಿವಿಗೆ ಬಿತ್ತು. 'ನಮ್ಮ ಆಜ್ಞೆಯಂತೆ ಯುದ್ಧಮಾಡಿ ಅವನನ್ನು ಓಡಿಸದೆ, ಹೀಗೆ ದೂತನಾಗಿ ಕೆಲಸಮಾಡಿದ್ದರಿಂದ ನೀನು ದಳವಾಯಿಯಾಗಿರಲು ಯೋಗ್ಯನಲ್ಲ' ಎಂದು ಅವನನ್ನು ಕೆಲಸದಿಂದ ತೆಗೆದು ಹಾಕಿದರು. ಇನ್ನೊಬ್ಬ ದಳವಾಯಿಯನ್ನು ನೇಮಕಮಾಡಿಕೊಂಡು ತಾವೇ ಯುದ್ಧಕ್ಕೆ ಹೊರಟರು.

ದೊರೆಗಳೇ ಬರುವರೆಂದು ಮುಸ್ತಾಫ್ ಖಾನ್ ನಿರೀಕ್ಷಿಸಿರಲಿಲ್ಲ. ಘೋರವಾದ ಕಾಳಗ ನಡೆಯಿತು. ದೊರೆಗಳು ವೀರಾವೇಶದಿಂದ ಹೋರಾಡಿದರು. ಆನೆಗಳನ್ನು ಹೊಡೆದೋಡಿಸಿದರು. ಕುದುರೆಗಳ ಕತ್ತು ಕತ್ತರಿಸಿದರು. ಒಂಟೆಗಳ ಕಾಲು ಮುರಿದರು. ಬಂಡಿಗಳನ್ನು ಪುಡಿಗುಟ್ಟಿದರು. ಕತ್ತಿ ಹಿಡಿ

ದವರ ಕೈ ಕತ್ತರಿಸಿದರು. ಖಾನನ ಸೇನೆ ಕಾಡುಪಾಲಾಯಿತು. ಖಾನನು ಪ್ರಾಣ ಉಳಿದರೆ ಸಾಕೆಂದು ಪಲಾಯನ ಮಾಡಿದ. ದೊರೆಗಳು ಯುದ್ಧದಲ್ಲಿ ದೊರಕಿದ ವಸ್ತ್ರಾಭರಣಗಳನ್ನೂ ಆಯುಧಗಳನ್ನೂ ತೆಗೆದುಕೊಂಡು ಜಯಭೇರಿ ಹೊಯಿಸುತ್ತ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿದರು.

ಹೀಗೆ ಮೂರನೆಯ ಬಾರಿಯೂ ತಮಗೆ ಸೋಲಾಯಿತಲ್ಲಾ ಎಂದು ಸುಲ್ತಾನರೂ ಅವರ ವಜೀರರೂ ತಲೆಯ ಮೇಲೆ ಕೈ ಇಟ್ಟುಕೊಂಡರು. ಆಗ ಅಲ್ಲಿದ್ದ ವೇಮಾಜಿಪಂತನೆಂಬ ಅಧಿಕಾರಿ 'ನನ್ನ ಜೊತೆಗೆ ಈ ಅಬ್ಬುಲ್ಲಾ ಖಾನನೆಂಬ ಸರದಾರನನ್ನೂ ಸ್ವಲ್ಪ ಸೈನ್ಯವನ್ನೂ ಕಳಿಸಿಕೊಡಿ. ನಾನು ತೀರ್ಥಯಾತ್ರೆಯ ನೆಪದಲ್ಲಿ ಹೋಗಿ ಶ್ರೀರಂಗಪಟ್ಟಣದ ಮರ್ಮವನ್ನು ತಿಳಿದು ಬರುತ್ತೇನೆ. ಬರುವಾಗ ದಾರಿಯಲ್ಲಿ ಇಷ್ಟು ಲೂಟಿ ಮಾಡಿಕೊಂಡು ಬರುತ್ತೇನೆ' ಎಂದ. ಸುಲ್ತಾನರು ಅದಕ್ಕೆ ಒಪ್ಪಿದರು.

ವೇಮಾಜಿಪಂತನು ತಿರುಮಕೂಡಲು, ನಂಜನಗೂಡು, ಶ್ರೀರಂಗಪಟ್ಟಣಗಳನ್ನು ನೋಡಿಕೊಂಡು, ಹೊರಡುವಾಗ ದಾರಿಯಲ್ಲಿ ಮೊದಲೇ ಎಂದುಕೊಂಡಿದ್ದಂತೆ ಲೂಟಿ ಮಾಡುತ್ತ ಹೋದ.

ಅವರ ಹಾವಳಿಯ ಸುದ್ದಿ ದೊರೆಗಳಿಗೆ ತಿಳಿಯಿತು. ತಮ್ಮ ದಳವಾಯಿಯನ್ನು ಸೇನಾಸಮೇತನಾಗಿ ಕಳಿಸಿದರು. ಆತ ಹೋಗಿ ವೇಮಾಜಿಪಂತನನ್ನೂ ಅಬ್ಬುಲ್ಲಾಖಾನನನ್ನೂ ಅವನ ಸೇನೆಯನ್ನೂ ಹೊಡೆದೋಡಿಸಿದ.

ಓಡಿಹೋಗುವಾಗ ಖಾನನ ಸೇನೆ ತುರುವೇಕೆರೆಯ ಪಾಳೆಯಗಾರನನ್ನು ಕೊಂದಿತು. ಖಾನನು ತುರುವೇಕೆರೆಯನ್ನು ಸ್ವಾಧೀನ ಮಾಡಿಕೊಂಡು ಅಲ್ಲಿಯೇ ನಿಂತ.

ವೇಮಾಜಿಪಂತ ತಾನೊಬ್ಬನೇ ಬಿಜಾಪುರಕ್ಕೆ ಹೋಗಿ, 'ಕಂಠೀರವ ನರಸರಾಜ ಒಡೆಯರು ಪರಾಕ್ರಮಶಾಲಿಗಳೂ ದೇವತಾ ಕಟಾಕ್ಷಕ್ಕೆ ಪಾತ್ರರೂ ಆಗಿರುವುದರಿಂದ ಅವರನ್ನು ಜಯಿಸಿ ಶ್ರೀರಂಗಪಟ್ಟಣವನ್ನು ಸ್ವಾಧೀನಮಾಡಿಕೊಳ್ಳುವುದಕ್ಕೆ ತಮ್ಮಿಂದ ಆಗಲಾರದು. ಅದನ್ನು ಮರೆತುಬಿಡಿ. ಅವರು ಅಪ್ರತಿಮ ವೀರರು' ಎಂದ.

ಸುಲ್ತಾನರು ಶ್ರೀರಂಗಪಟ್ಟಣವನ್ನು ಮರೆತರು.

ಇತ್ತ ತುರುವೇಕೆರೆಯ ಪಾಳೆಯಗಾರನನ್ನು ಕೊಂದು ಅಬ್ದುಲ್ಲಾ ಖಾನನು ಅಲ್ಲೇ ಠಾಣ್ಯ ಹೂಡಿರುವನೆಂದು ದೊರೆಗಳು ಕೇಳಿ, 'ಶತ್ರುಶೇಷವಿಲ್ಲದಂತೆ ಮಾಡಿ ಬಾ' ಎಂದು ದಳವಾಯಿಗೆ ಆಜ್ಞೆ ಮಾಡಿದರು. ಆತ ಸೇನಾಸಮೇತನಾಗಿ ಹೋಗಿ, ಅಬ್ದುಲ್ಲಾ ಖಾನನನ್ನು ಯುದ್ಧದಲ್ಲಿ ಹೊಡೆದೋಡಿಸಿದ. ಆ ಯುದ್ಧದಲ್ಲಿ ನಲವತ್ತು ಕುದುರೆ, ಜೊಕ್ಕಳಿಕನೆಂಬ ಒಂದು ಗಂಡಾನೆ, ಅನೇಕ ವಸ್ತ್ರಾಭರಣ ದ್ರವ್ಯಾಯುಧಗಳು ದೊರೆತುವು. ತುರುವೇಕೆರೆ ಮತ್ತೆ ಮೈಸೂರಿನ ಸ್ವಾಧೀನಕ್ಕೆ ಬಂತು.

ಮೈಸೂರಿಗೆ ಬಂದೊದಗಿದ್ದ ಬಿಜಾಪುರದ ಬಾಧೆ ರಣಧೀರರ ಅಪ್ರತಿಮವೀರದಿಂದಲೂ ಅವರ ಕುಲದೈವ ಇಷ್ಟದೈವಗಳ ರಕ್ಷಣೆಯಿಂದಲೂ ಸೂರ್ಯನ ಎದುರಿನ ಮಂಜಿನಂತೆ ಪರಿಹಾರವಾಗಿಹೋಯಿತು.

(ಆಧಾರ : ವಂಶಾವಳಿ)

೧೬. ಬೆಟ್ಟದ ಬಸವ

ರಣಧೀರ ಕಂಠೀರವ ನರಸರಾಜ ಒಡೆಯರು ಆದಮೇಲೆ ಪಟ್ಟಕ್ಕೆ ಬಂದವರು ದೊಡ್ಡ ದೇವರಾಜ ಒಡೆಯರು.

ಒಂದು ರಾಜ್ಯವನ್ನು ಸಮರ್ಥವಾಗಿ ಆಳುವುದಕ್ಕೆ ಏನೇನು ಶಕ್ತಿ ಸಾಮರ್ಥ್ಯ ಸದ್ಗುಣಗಳು ಇರಬೇಕೋ ಅವೆಲ್ಲವನ್ನೂ ದೇವರು ಕಂಠೀರವ ನರಸರಾಜರಿಗೆ ದಯಪಾಲಿಸಿದ್ದ. ಆದರೆ ಪೂರ್ಣಾಯುಸ್ಸನ್ನು ಕೊಡಲಿಲ್ಲ, ಪಟ್ಟಕ್ಕೆ ಅಧಿಕಾರಿಯಾಗುವಂತಹ ಸಂತಾನವನ್ನು ಕರುಣಿಸಲಿಲ್ಲ.

ಅವರು ಬದುಕಿದ್ದು ಸುಮಾರು ನಲವತ್ತನಾಲ್ಕು ವರ್ಷ. ರಾಜ್ಯಭಾರ ಮಾಡಿದ್ದು ಸುಮಾರು ಇಪ್ಪತ್ತೊಂದು ವರ್ಷ. ಅವಧಿ ಇಷ್ಟು ಸಣ್ಣದಾದರೂ ಅದರಲ್ಲಿ ಅವರ ಸಾಧನೆ ಮಹತ್ತಾದ ಗುಣವುಳ್ಳದ್ದು.

ರಾಜ್ಯದ ಒಳಗಡೆ ನಡೆಯುತ್ತಿದ್ದ ದಳವಾಯಿಗಳ ದ್ರೋಹವನ್ನು ಅಡಗಿಸಿದರು. ಚಿಲ್ಲರೆಚಿಲ್ಲರೆಯಾಗಿದ್ದ ಪಾಳೆಯಗಾರರನ್ನೆಲ್ಲ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ರಾಜ್ಯದಲ್ಲಿ ಐಕ್ಯತೆಯನ್ನು ಸಾಧಿಸಿದರು. ತಮ್ಮ ಉತ್ಕರ್ಷವನ್ನು ನೋಡಿ ಕರುಬಿ ಮೇಲೆ ಬೀಳಲು ಹವಣಿಸಿದ ನೆರೆಹೊರೆಯವರನ್ನು ಯುದ್ಧದಲ್ಲಿ ಬಗ್ಗಿಸಿದರು. ಬಿಜಾಪುರದ ಸೈನ್ಯಗಳನ್ನು ಮೇಲಿಂದ ಮೇಲೆ ಸೋಲಿಸಿದರು. ಶ್ರೀರಂಗಪಟ್ಟಣವನ್ನು ಶತ್ರುಗಳ ಮುತ್ತಿಗೆಗೆ ಈಡಾಗದಂತೆ ಭದ್ರಪಡಿಸಿದರು. ಪ್ರಜೆಗಳನ್ನು ಕಾಪಾಡಿದರು.

ಹಿಂದೆ ಪಾಳೆಯಗಾರರು ಆಳುತ್ತಿದ್ದ ಒಂದೊಂದು ಕಡೆ ಒಂದೊಂದು ತೆರನಾದ ನಾಣ್ಯ ಚಲಾವಣೆಯಲ್ಲಿತ್ತು. ರಣಧೀರರು ರಾಜ್ಯವನ್ನು ವಿಸ್ತಾರಪಡಿಸಿದ ಮೇಲೆ ದೇಶದಲ್ಲೆಲ್ಲ ಒಂದೇ ನಾಣ್ಯವನ್ನು ಪ್ರಚಾರಕ್ಕೆ ತಂದರು. ಅದು ಚಿನ್ನದ ನಾಣ್ಯ. ಅದಕ್ಕೆ ಕಂಠೀರಾಯ [ಕಂಠೀರವರಾಯ.] ಹಣವೆಂದು ಹೆಸರು. [ಈ ಶತಮಾನದ ಆರಂಭದಲ್ಲಿ ಕೂಡ ಈ ಹಣ ಪ್ರಚಾರದಲ್ಲಿತ್ತು. ಮದುವೆ ಮುಂಜಿ ಮುಂತಾದ ಶುಭಕಾರ್ಯಗಳಲ್ಲಿ ಇದನ್ನು ದಕ್ಷಿಣೆಗಾಗಿ ಬಳಸುತ್ತಿದ್ದರು.]

ಮೈಸೂರಿನ ಒಡೆಯರಿಗೆ ಮೊದಲಿನಿಂದಲೂ ಕುಲದೇವರು ಶ್ರೀ ಚಾಮುಂಡೇಶ್ವರೀ ಅಮ್ಮನವರು, ಉತ್ತನಹಳ್ಳಿಯ ಜ್ವಾಲಾಮುಖಿ ಅಮ್ಮನವರು ಮತ್ತು ನಂಜನಗೂಡಿನ ಶ್ರೀ ನಂಜುಂಡೇಶ್ವರ ಸ್ವಾಮಿ. ಆದರೂ ರಾಜಒಡೆಯರ ಕಾಲಕ್ಕೆ ಈ ದೇವರುಗಳ ಜೊತೆಗೆ ಮೈಸೂರಿನ ಲಕ್ಷ್ಮೀರಮಣಸ್ವಾಮಿ, ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿ, ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿ ಮುಂತಾದ ದೇವರುಗಳನ್ನೂ ಭಕ್ತಿಯಿಂದ ಅರ್ಚಿಸುವ ಉದಾರವಾದ ವರ್ತನೆ ಬೆಳೆಯಿತು.

ಅದೇ ಉದಾರವಾದ ನಡತೆಯನ್ನು ರಣಧೀರರೂ ಮುಂದುವರಿಸಿದರು. ಅವರು ನರಸಿಂಹ ಜಯಂತಿಯ ದಿವಸ ಹುಟ್ಟಿದವರಾದ್ದರಿಂದ ಅವರಿಗೆ ನೃಸಿಂಹನೇ ಇಷ್ಟದೇವತೆಯಾದರೂ ಹರಿಹರರಲ್ಲಿ ಭೇದವಾದದಂತೆ ನಡೆದುಕೊಳ್ಳುತ್ತಿದ್ದರು. ತಾವು ಸ್ವತಃ ವೈಷ್ಣವದೀಕ್ಷೆಯನ್ನು ಅಂಗೀಕರಿಸಿದ್ದರೂ ಶಿವದೇವಸ್ಥಾನಗಳಲ್ಲಿಯೂ ಭಕ್ತಿಯಿಂದ ನಡೆದುಕೊಳ್ಳುತ್ತ—ಶಿವರಾತ್ರಿ, ಗೌರಿ, ಗಣೇಶ ಮುಂತಾದ ಅನೇಕ ಶೈವವ್ರತಗಳನ್ನೂ ನಡಸುತ್ತಿದ್ದರು.

ಅವರು ಮಾಡಿದ ಅನೇಕ ಧರ್ಮಕಾರ್ಯಗಳು ಇವೊತ್ತಿಗೂ ನಡೆಯುತ್ತಿದ್ದರೂ ಜನ ಅದು ಅವರ ಏರ್ಪಾಟೆಂಬುದನ್ನು ಮರೆತಿದ್ದಾರೆ.

ನರಸರಾಜರಿಗೆ ದೊಡ್ಡಜಮ್ಮಯ್ಯ ಎಂಬ ಗಾಂಧರ್ವಪತ್ನಿ ಇದ್ದರು. ಒಮ್ಮೆ ಅವರು 'ಕಾವೇರಿಯಲ್ಲಿ ಪ್ರವಾಹ ಬಂದ ಕಾಲದಲ್ಲಿ ಕಾಶೀ ರಾಮೇಶ್ವರ ಮೊದಲಾದ ಸ್ಥಳಗಳಿಗೆ ಹೋಗಿಬರಲು ತೊಂದರೆಯಾಗುತ್ತದೆ. ಪ್ರಜೆಗಳಿಗೆ ಬೇಕಾದ ಪದಾರ್ಥಗಳ ಸರಬರಾಜಿಗೂ ತೊಂದರೆ ಆಗುತ್ತದೆ. ಅಲ್ಲದೆ ಪಟ್ಟಣದ ಜನರಿಗೆ ನದಿಯ ನೀರು ಈಗ ತುಂಬ ದೂರ. ಆದ್ದರಿಂದ ಎರಡು ಕಡೆಗಳಲ್ಲಿಯೂ ಸೇತುವೆ ಕಟ್ಟಿಸಿದರೆ ಅನುಕೂಲವಾಗುತ್ತದೆ' ಎಂದು ದೊರೆಗಳಿಗೆ ಬಿನ್ನವಿಸಿಕೊಂಡರು.

ಒಡೆಯರಿಗೆ ಆ ಮಾತು ಹಿತವೆನಿಸಿತು. ಕೋಟೆಯ ನೈಋತ್ಯ ವಾಯವ್ಯ ಪಾರ್ಶ್ವಗಳಲ್ಲಿ ಎರಡು ಸೇತುವೆ ಕಟ್ಟಿಸಿದರು. ಗೌತಮ ಕ್ಷೇತ್ರಕ್ಕೆ ದಕ್ಷಿಣದಿಕ್ಕಿನ ಚಂದ್ರವನದ ಸಮೀಪದಲ್ಲಿ ಕವಲೊಡೆದ ಕಾವೇರಿಗೆ ಕಟ್ಟೆ ಕಟ್ಟಿಸಿದರು. ಕೋಟೆಗೆ ನೈಋತ್ಯಪಾರ್ಶ್ವದಲ್ಲಿ ಕಟ್ಟಿಸಿದ ಸೇತುವೆಯ ಮೇಲೆ ಹೊಸದಾಗಿ ಕಾಲುವೆಯನ್ನು ಮಾಡಿಸಿದರು. ದೇವಲ್ಲಿ ಅದುವರೆಗೆ

ಎಲ್ಲಿಯೂ ಇಲ್ಲದೆ, ನೀರಿನ ಮೇಲೆ ನೀರು ಬರುವ ಆಶ್ಚರ್ಯವನ್ನು ನೋಡಿ ಎಲ್ಲರೂ ಬೆರಗಾದರು. ಕೋಟೆಯೊಳಕ್ಕೇ ಬಂದ ಕಾರಂಜಿಯ ನೀರನ್ನು ಕಂಡು ಪ್ರಜೆಗಳಿಗೆ ಸಂತೋಷವಾಯಿತು.

ಪ್ರಭುಗಳು ಆ ಕಾಲುವೆಗೆ '**ಬಂಗಾರ ದೊಡ್ಡಿ ಕಾಲುವೆ**' ಎಂದು ತಮ್ಮ ಪ್ರೇಮಪಾತ್ರರಾದ ಗಾಂಧರ್ವಪತ್ನಿಯವರ ಹೆಸರನ್ನಿಟ್ಟರು. 'ಇದರ ಕೆಳಗೆ ಬೆಳೆಯುವ ಬತ್ತ ಕಬ್ಬು ಮುಂತಾದವುಗಳನ್ನು ರಂಗನಾಥಸ್ವಾಮಿಯ ದೇವಾಲಯಕ್ಕೆ ಕೊಡತಕ್ಕದ್ದು' ಎಂದು ಕಟ್ಟಳೆಯನ್ನು ಮಾಡಿದರು.

[ಈಗಲೂ ಶ್ರೀರಂಗಪಟ್ಟಣಕ್ಕೆ ಹೋದವರು ಆ ನಾಲೆಯನ್ನು ನೋಡಬಹುದು, ಆ ಹೆಸರನ್ನು ಕೇಳಬಹುದು.]

ಹೀಗೆ ಧರ್ಮದಿಂದ ರಾಜ್ಯಪರಿಪಾಲನೆಮಾಡುತ್ತಿದ್ದಾಗ, ಒಮ್ಮೆ ಅವರಿಗೆ ದೇಹಾಯಾಸವಾಯಿತು. ತಾವು ಇನ್ನು ಉಳಿಯುವುದಿಲ್ಲ ಎನ್ನಿಸಿತು. ಆಗ ದಳವಾಯಿಯೇ ಮೊದಲಾದವರನ್ನು ಕರೆದು, 'ನಾವು ಪಡೆದ ಒಬ್ಬರೇ ಒಬ್ಬರು ಕುಮಾರರು ೫ ವರ್ಷಗಳಿದ್ದು ದೈವಾಧೀನರಾದರು. ಆದ್ದರಿಂದ ನನ್ನ ಚಿಕ್ಕಪ್ಪಾಜಿಯವರಾದ ಮುಪ್ಪಿನ ದೇವರಾಜರ ಮಕ್ಕಳು ದೇವರಾಜ ಒಡೆಯರನ್ನು ದತ್ತುಸ್ವೀಕಾರ ಮಾಡಿದ್ದೇನೆ. ನೀವು ಅವರಿಗೆ ಪಟ್ಟ ಕಟ್ಟಿ, ಅವರ ಆಜ್ಞಾನುಸಾರವಾಗಿ ನಡೆದುಕೊಳ್ಳಿರಿ' ಎಂದು ವಿಧಿಸಿ, ಕಣ್ಣು ಮುಚ್ಚಿದರು.

ಹೀಗೆ ಪಟ್ಟಕ್ಕೆ ಬಂದ ದೊಡ್ಡ ದೇವರಾಜ ಒಡೆಯರು ಮಾಡಿದ ಮೊದಲನೇ ಕೆಲಸವೆಂದರೆ—ಹಿಂದಿನಿಂದಲೂ ದಳವಾಯಿತನ ಮಾಡುತ್ತಿದ್ದವರ ತುಂಟಾಟ ಪುಂಡಾಟಗಳನ್ನು ವಿಚಾರಿಸಿಕೊಂಡದ್ದು; ನಂಬಿಕೆಗೆ ಅರ್ಹರಲ್ಲದವರನ್ನು ಶಿಕ್ಷಿಸಿ, ನಂಬಿಗಸ್ತರನ್ನು ನೇಮಿಸಿ, ತಮ್ಮ ದಕ್ಷತೆಯನ್ನು ತೋರಿಸಿಕೊಂಡದ್ದು.

ರಾಜಒಡೆಯರ ಕಾಲದಲ್ಲಿ ಅವರು ನರಸಿಂಹಪುರದ ಪಾಳಯಗಾರನನ್ನು ದಮನ ಮಾಡಿ, ನರಸಿಂಹಪುರವನ್ನು ವಶಪಡಿಸಿಕೊಂಡರು. ಆ ಪಾಳೇಗಾರನ ಮೊಮ್ಮಗ—'ಹೊಸ ದೊರೆಗಳು ಬಂದಿದ್ದಾರೆ. ಅವರಿಗೆ ಅನುಭವ ಸಾಲದು. ಶ್ರೀರಂಗಪಟ್ಟಣದ ಮರ್ಮವೆಲ್ಲ ನನಗೆ ಗೊತ್ತು. ನನ್ನ ಜೊತೆಗೆ ನೀವು ಬಂದರೆ ಅವರನ್ನು ಜಯಿಸಬಹುದು' ಎಂದು ಕೆಳದಿಯ ಶಿವಪ್ಪ

ನಾಯಕನನ್ನೂ ಇತರ ತುಂಟ ಪಾಳಯಗಾರರನ್ನೂ ಕಟ್ಟಿಕೊಂಡು ದಂಡೆತ್ತಿ ಬಂದ.

ಅವರು ಬರುವ ಸುದ್ದಿಯನ್ನು ಕೇಳಿ ದೊರೆಗಳು ತಡಮಾಡಲಿಲ್ಲ. ಸೇನಾಸಮೇತರಾಗಿ ತಾವೇ ಹೋಗಿ ಅರ್ಧದಾರಿಯಲ್ಲಿ ಅವರನ್ನು ಎದುರಿಸಿದರು. ಘೋರವಾದ ಕಾಳಗವಾಯಿತು. ಶತ್ರುಗಳು ಸೋತು ಓಡಿದರು. ಮೈಸೂರಿನ ಸೇನೆ ಅವರನ್ನು ಬೆನ್ನಟ್ಟಿ ಹೋಗಿ, ಅವರ ಆನೆ ಕುದುರೆ ಅಂದಣ ವಸ್ತ್ರ ಆಭರಣ ದ್ರವ್ಯಗಳನ್ನು ಸೂರೆಮಾಡಿಕೊಂಡು ಬಂದಿತು.

ಶಿವಪ್ಪ ನಾಯಕನಿಗೆ ಸೇರಿದ್ದ ಸಕ್ಕರೆಪಟ್ಟಣ, ವಸ್ತಾರೆ, ಹೊನ್ನಹಳ್ಳಿಗಳನ್ನು ವಶಮಾಡಿಕೊಂಡರು. ನಾಯಕನ ಕಡೆಯವರು ಬೇಡಿಕೊಂಡುದರ ಮೇಲೆ ಅವನ್ನು ಅವನಿಗೇ ಬಿಟ್ಟು 'ಹುಟ್ಟುವಳಿಯಲ್ಲಿ ಇಷ್ಟು ಭಾಗ ಕೊಡಬೇಕು' ಎಂದು ಕರಾರು ಮಾಡಿಕೊಂಡರು.

ಅನಂತರ, ಆ ಕಾಳಗದಲ್ಲಿ ದೊರಕಿದ ಆಭರಣಗಳ ನವರತ್ನಗಳಿಂದ ಎರಡು ಪಾದುಕೆಗಳನ್ನು ಮಾಡಿಸಿಕೊಂಡರು. 'ಮುಂದೆ ಯಾರಾದರೂ ಮತ್ತೆ ಎದುರುಬಿದ್ದರೆ ಅವರ ತಲೆಗಳನ್ನು ಹೀಗೆ ಮೆಟ್ಟುತ್ತೇನೆ!' ಎಂಬ ಹಾಗೆ ಅರ್ಥ ಮಾಡಿಕೊಂಡು, ಶತ್ರುಗಳು ತಣ್ಣಗಾದರು.

ಇವರಾದರೂ ತಮ್ಮ ಹಿಂದಿನ ಒಡೆಯರಂತೆಯೇ ಸಕಲ ದೇವರಲ್ಲಿಯೂ ಭಕ್ತಿಯಿಂದ ನಡೆದುಕೊಂಡರು. ಶ್ರೀಮತಸ್ಥ ಬ್ರಾಹ್ಮಣರಿಗೂ ಜಂಗಮರಿಗೂ ಒಂದೇ ಸಮನಾಗಿ ಸನ್ಮಾನ ಮಾಡಿದರು. ಇದರಿಂದ '**ದೇವ ಬ್ರಾಹ್ಮಣ ಪರಿಪಾಲಕ**' ಎಂಬ ಬಿರುದನ್ನು ಪಡೆದರು.

ಚಾಮುಂಡಿ ಬೆಟ್ಟವನ್ನು ಹತ್ತುವುದಕ್ಕೆ ಅನುಕೂಲವಾಗಲೆಂದು ಸಾವಿರ ಮೆಟ್ಟಿಲುಗಳನ್ನು ಕಟ್ಟಿಸಿದರು ಇವರು. ಬೆಟ್ಟದ ಮಧ್ಯದಲ್ಲಿ ಆಶ್ಚರ್ಯಕರವಾಗಿಯೂ ಅತಿ ಸುಂದರವಾಗಿಯೂ ಇರುವ ದೊಡ್ಡ ಬಸವಣ್ಣನನ್ನು ಶಿಲೆಯಿಂದ ನಿರ್ಮಾಣ ಮಾಡಿಸಿ ಪ್ರತಿಷ್ಠೆ ಮಾಡಿದವರೂ ಇವರೇ.

[ಆಧಾರ : ವಂಶಾವಳಿ]

೧೭. ಚಿಕದೇವರಾಜರು

ದೊಡ್ಡ ದೇವರಾಜ ಒಡೆಯರ ಬಳಿಕ ಅರಸರಾದರು ಚಿಕದೇವರಾಜ ಒಡೆಯರು. ದೇಶದಲ್ಲಿ ಸರ್ವತ್ರ 'ಚಿಕ್ಕ' ಎಂಬ ಹೆಸರಿನಿಂದ ಇವರು ಪ್ರಸಿದ್ಧರಾದರು, ಇವರ ಖ್ಯಾತಿ ರಾಜಒಡೆಯರ ಹಾಗೂ ಕಂಠೀರವ ನರಸರಾಜ ಒಡೆಯರ ಖ್ಯಾತಿಗಿಂತ ದೊಡ್ಡದಾಗಿತ್ತು. ಇವರ ಖ್ಯಾತಿಯ ಪ್ರಭಾವ ದೇಶದಿಂದ ಹೊರಗೂ ವ್ಯಾಪಿಸಿತ್ತು.

ಚಿಕ್ಕಂದಿನಲ್ಲಿ ಇವರು ತುಂಟರೊಡನೆ ಸೇರಿಕೊಂಡು ತುಂಬಾ ತುಂಟಾಟ ಮಾಡುತ್ತಿದ್ದರಂತೆ. ಅದರಿಂದ ಇವರ ತಂದೆ ಇವರನ್ನು ಶ್ರೀರಂಗಪಟ್ಟಣದಲ್ಲಿ ಇರಗೊಡದೆ ಹಂಗಳ ಎಂಬ ಗ್ರಾಮಕ್ಕೆ ಕಳಿಸಿ, ಅಲ್ಲಿ ಅವರು ರಾಜಯೋಗ್ಯವಾದ ವಿದ್ಯೆಗಳನ್ನು ಕಲಿಯುವಂತೆ ಏರ್ಪಾಟುಮಾಡಿದರು. ಹೀಗೆ ಅವರು ಹಂಗಳದಲ್ಲಿರುವಾಗ ತೆರಕಣಾಂಬಿಯ ಲಿಂಗಾಭಟ್ಟನೆಂಬ ಬ್ರಾಹ್ಮಣ ಅವರ ಜಾತಕವನ್ನು ನೋಡಿ, 'ಇಂತಹ ದಿವಸ ಇಷ್ಟನೆಯ ಗಳಿಗೆಯಲ್ಲಿ ನಿಮಗೆ ಶ್ರೀರಂಗಪಟ್ಟಣದಲ್ಲಿ ರಾಜ್ಯಾಭಿಷೇಕವಾಗುತ್ತದೆ. ನೀವು ತುಂಬಾ ಯಶಸ್ಸನ್ನು ಪಡೆಯುತ್ತೀರಿ' ಎಂದು ಭವಿಷ್ಯ ಹೇಳಿದ. ಆ ಭವಿಷ್ಯ ನಿಜವಾಯಿತು. ಲಿಂಗಾಭಟ್ಟನಿಗೆ ತುಂಬ ಸನ್ಮಾನ ದೊರಕಿತು.

ಪಟ್ಟಕ್ಕೆ ಬಂದ ಮೇಲೆ ಪ್ರಭುಗಳು ತಮ್ಮ ಹೊಣೆಯನ್ನು ಅರಿತು, ರಾಜ್ಯದ ಒಳಗೂ ರಾಜ್ಯದ ಹೊರಗೂ ಇದ್ದ ಶತ್ರುಗಳನ್ನೆಲ್ಲ ಎದುರಿಸಿ ಮೆಟ್ಟಿ, ಪುನಃ ತಲೆಯೆತ್ತದಂತೆ ಮಾಡಿದರು. ಶ್ರೀರಂಗಪಟ್ಟಣದ, ಮೈಸೂರಿನ ಕೋಟೆಗಳನ್ನು ಬಲಪಡಿಸಿದರು. ಸೇನೆಯ ಸಂಖ್ಯೆಯನ್ನು ಹೆಚ್ಚಿಸಿದರು. ಪ್ರಜೆಗಳನ್ನು ಉದ್ಯೋಗವಂತರನ್ನಾಗಿ ಮಾಡಿ, ಅವರ ಉತ್ಪನ್ನದ ಮೇಲೆ ಉಚಿತವಾದ ಕಂದಾಯಗಳನ್ನು ವಿಧಿಸಿ, ಬೊಕ್ಕಸವನ್ನು ಬಲಪಡಿಸಿದರು. ಈ ಕಾರ್ಯಕ್ರಮಗಳಿಂದ ಮೈಸೂರುರಾಜ್ಯ ಹಿಂದಿನ ಒಡೆಯರ ಕಾಲದಲ್ಲಿ ಇದ್ದುದಕ್ಕಿಂತ ಇನ್ನೂ ವಿಸ್ತಾರವಾಯಿತು.

ಆಗಿನ ಕಾಲಕ್ಕೆ ಮೈಸೂರು ರಾಜ್ಯಕ್ಕೆ ಕಿರುಕುಳ ಕೊಡುತ್ತಿದ್ದವರಲ್ಲಿ ಮರಾಟಿಗರೂ ಒಬ್ಬರು.

ಒಂದು ಸಲ ಮರಾಟಿ ಸಂಸ್ಥಾನದ ಶಾಹುರಾಯನ ದಳವಾಯಿಗಳು, ಜಯಾಜಿಘಾಟಿ ಮತ್ತು ಸಿಂಬಾಜಿ ಘಾಟಿ ಎಂಬ ಇಬ್ಬರು ಸರದಾರರು ಅನೇಕ ಸೈನ್ಯವನ್ನೂ ಸಾಮಗ್ರಿಗಳನ್ನೂ ತೆಗೆದುಕೊಂಡು ದಿಳ್ಳಿಯನ್ನು ಆಕ್ರಮಿಸುವುದಕ್ಕೆ ಹೋಗಿದ್ದರು. ಪುನಃ ಯುದ್ಧ ಮಾಡುವುದಕ್ಕೆ ಸಮಯವನ್ನು ಕಾಯುತ್ತಾ, ಆ ಪ್ರಾಂತದ ಹಳ್ಳಿಗಳ ಮೇಲೆ ದಾಳಿಮಾಡಿ ಲೂಟಿಮಾಡುತ್ತಿದ್ದರು.

ಆ ವೇಳೆಯಲ್ಲಿ ಮೈಸೂರಿನ ಸೇನೆ ಕಣಿವೆಯ ಕೆಳಗೆ ಹೋಗಿರುವುದೆಂಬ ಸುದ್ದಿ ಈ ಸರದಾರರಿಗೆ ಗೊತ್ತಾಯಿತು. 'ಹಾಗಾದರೆ, ಶ್ರೀರಂಗಪಟ್ಟಣದ ಮೇಲೆ ಮುತ್ತಿಗೆಹಾಕುವುದಕ್ಕೆ ಇದೇ ಸಮಯ' ಎಂದು ಆ ಮರಾಟೆ ಸರದಾರರು ತಮ್ಮ ಸೈನ್ಯವನ್ನು ದಕ್ಷಿಣದ ಕಡೆಗೆ ತಿರುಗಿಸಿ ಹೊರಟರು.

ದೊಡ್ಡ ದೇವರಾಜ ಒಡೆಯರ ಕಾಲದಲ್ಲಿ ತಿರುಚನಾಪಳ್ಳಿ, ಮಧುರೆ ಮೊದಲಾದ ಕಡೆಯ ಪಾಳಯಗಾರರು 'ನಮ್ಮ ಸೀಮೆಯ ಉತ್ಪತ್ತಿಯಲ್ಲಿ ಇಷ್ಟನ್ನು ಒಪ್ಪಿಸುತ್ತೇವೆ' ಎಂದು ಒಪ್ಪಂದ ಮಾಡಿಕೊಂಡಿದ್ದರು. ಈಚೆಗೆ ಹತ್ತು ಹನ್ನೆರಡು ವರ್ಷಗಳಿಂದ ಹೇಳಿಕಳಿಸಿದ್ದರೂ ಕೊಟ್ಟಿರಲಿಲ್ಲ.

'ಇವರನ್ನು ಹೀಗೆಯೇ ಬಿಡಬಾರದು. ಇವರನ್ನು ನಿಗ್ರಹಿಸಿ, ಇವರ ಸೀಮೆಯನ್ನು ಕಟ್ಟಿಕೊಳ್ಳಬೇಕು' ಎಂದು ದೊರೆಗಳು ತಮ್ಮ ಕೆಲವು ಸರದಾರರನ್ನೂ ಸೇನೆಯನ್ನೂ ಆ ಕಡೆಗೆ ಕಳಿಸಿದರು.

ಅದೇ ಸಮಯವನ್ನು ಸಾಧಿಸಿ ಮರಾಟೆ ಸರದಾರರು ಶ್ರೀರಂಗಪಟ್ಟಣದ ಮೇಲೆ ಬರುತ್ತಿದ್ದಾರೆಂದು ದೊರೆಗಳಿಗೆ ವರ್ತಮಾನ ಬಂತು. ಕೂಡಲೆ ವೇಗವಾಗಿ ಹೋಗುವ ದೂತರನ್ನು ಕಳಿಸಿ, ಕಣಿವೆಯ ಕೆಳಗಿನಿಂದ ಕೊಂಚ ಸೈನ್ಯವನ್ನು ಕರೆಯಿಸಿಕೊಂಡರು.

ಆ ಸೈನ್ಯ ಬಂದು ಶ್ರೀರಂಗಪಟ್ಟಣದ ಮೂಲಬಲವನ್ನು ಸೇರಿಕೊಳ್ಳುವ ವೇಳೆಗೆ, ಮರಾಟೆಯವರ ಸೈನ್ಯ ಪಟ್ಟಣದ ಸಮೀಪದಲ್ಲಿ, ಕಲಸಗೆರೆ ಕೊತ್ತತ್ತಿ ಎಂಬ ಗ್ರಾಮಗಳ ಬಳಿಯ ಮೈದಾನದಲ್ಲಿ ಬಂದು ಇಳಿದಿತ್ತು.

ದೊರೆಗಳು ಕಣಿವೆಯ ಕೆಳಗಿನಿಂದ ಬಂದ ಸೈನ್ಯಕ್ಕೆ ಹೀಗೆ ಹೇಳಿದರು:—'ಮರಾಟೆಯವರ ಸೈನ್ಯ ನಮ್ಮ ಸೇನೆಗಿಂತ ಹೆಚ್ಚು ಸಂಖ್ಯೆಯಲ್ಲಿರುವ ಕಾರಣ, ಅವರನ್ನು ಉಪಾಯದಿಂದ ಗೆಲ್ಲಬೇಕು. ನೀವು ಯಾರಿಗೂ ತಿಳಿಯದಂತೆ ಕತ್ತಲಾದ ಮೇಲೆ ಆ ಸೇನೆಯ ಸಮೀಪಕ್ಕೆ ಹೋಗಿ ಸೇರಿಕೊಳ್ಳಿ. ನಮ್ಮ ದಂಡಿನಲ್ಲಿ ಎರಡು ಮೂರು ಸಾವಿರ ಹಸು ದನ ಎತ್ತುಗಳಿವೆ. ಎಣ್ಣೆಯಲ್ಲಿ ಅದ್ದಿದ ಪಂಜುಗಳನ್ನು ಅವುಗಳ ಕೊಂಬಿಗೆ ಅಪಾಯವಾಗದಂತೆ ಕಟ್ಟಿ, ಆ ಪಂಜುಗಳನ್ನು ಹತ್ತಿಸಿ, ಆ ದನಗಳನ್ನು ಮರಾಟೆಯವರ ಸೈನ್ಯದ ಕಡೆಗೆ ಮೂರು ದಿಕ್ಕುಗಳಿಂದಲೂ ಓಡಿಸಿ. ಅವರು ಭೀತರಾಗಿ ಭ್ರಾಂತರಾಗಿ ಓಡುವಾಗ ಹಿಂದುಗಡೆಯಿಂದ ಅವರನ್ನು ಕತ್ತರಿಸಿರಿ. ಅಷ್ಟು ಹೊತ್ತಿಗೆ ಶ್ರೀರಂಗಪಟ್ಟಣದಿಂದ ನಿಮ್ಮ ಸಹಾಯಕ್ಕೆ ಅಷ್ಟು ಸೈನ್ಯ ಕಳುಹುತ್ತೇನೆ' ಎಂದರು.

ಅರಸರ ಉಪಾಯ ಫಲಿಸಿತು. ಮರಾಟಾಸೈನ್ಯ ಹಾಳಾಯಿತು. ಅವರ ದಂಡಿನಲ್ಲಿದ್ದ ಆನೆ ಕುದುರೆ ಒಂಟೆ ಮತ್ತು ದ್ರವ್ಯ ಎಲ್ಲ ಮೈಸೂರಿನವರ ವಶವಾಯಿತು. ಜಯಾಜಿ ಘಾಟೆ ಮತ್ತು ಸಿಂಬಾಜಿ ಘಾಟೆ ಎಂಬ ಸರದಾರರ ತಲೆಗಳನ್ನು ತಂದು ಪ್ರಭುಗಳಿಗೆ ಒಪ್ಪಿಸಿದರು. ಪ್ರಭುಗಳು ಅವುಗಳನ್ನು ಶ್ರೀರಂಗಪಟ್ಟಣದ ಕೋಟೆಯ ಮೈಸೂರು ದ್ವಾರಕ್ಕೆ ಕಟ್ಟಿಸಿದರು.

ಈ ಅಪೂರ್ವವಾದ 'ಪಂಜುಗಳ ಯುದ್ಧ'ದಲ್ಲಿ ಸಾಯದೆ ತಪ್ಪಿಸಿಕೊಂಡವರು ಹೋಗಿ ತಮ್ಮ ದೊರೆಯಾದ ಶಂಭುರಾಯನಿಗೆ ವರದಿಯೊಪ್ಪಿಸಿದರು. ತನ್ನ ಸರದಾರರು ಸತ್ತುದಕ್ಕೆ ಅವನಿಗೆ ವ್ಯಸನವಾಯಿತು. ಚಿಕದೇವರಾಯರ ಉಪಾಯವನ್ನು ಕೇಳಿ ಆಶ್ಚರ್ಯವಾಯಿತು.

ಸ್ವಲ್ಪ ಕಾಲದಲ್ಲಿಯೇ ಈ ಸುದ್ದಿ ದೆಹಲಿಗೂ ಮುಟ್ಟಿತು. 'ನಮಗೆ ಶತ್ರುಗಳಾಗಿ ಕಿರುಕುಳ ಕೊಡುತ್ತಿದ್ದ ಆ ಸರದಾರರನ್ನು ಸಂಹಾರ ಮಾಡಿ, ಈ ಒಡೆಯರು ನಮಗೆ ಉಪಕಾರ ಮಾಡಿದ್ದಾರೆ. ಇವರಿಗೆ ನಾವು ಯಾವ ರೀತಿಯಿಂದ ಪ್ರತ್ಯುಪಕಾರವನ್ನು ಮಾಡಬಹುದು?' ಎಂದು ದಿಲ್ಲಿಯ ಬಾದಷಹರು ತಮ್ಮ ವಜೀರರೊಡನೆ ಮಾತನಾಡಿಕೊಂಡರು.

ಇದಾದ ಕೆಲವು ಕಾಲದ ಮೇಲೆ, ದೇಶದಲ್ಲೆಲ್ಲ ನೆಮ್ಮದಿ ನೆಲಸಿರುವಾಗ ಕೆಲವು ತುಂಟ ಪಾಳೆಯಗಾರರು ಪುನಃ ಅಸೂಯೆಯಿಂದ ಮತ್ತೊ

ಪಿತೂರಿ ಮಾಡುತ್ತಿರುವರೆಂದು ಸುದ್ದಿ ಬಂತು.

‘ಇಂತಹ ತುಂಟಾಟಗಳನ್ನು ಅಡಗಿಸಬೇಕಾದರೆ ಇನ್ನು ಮೇಲೆ ನಾವು ನಮಗೆ ಸಮಾನರಾದ ಸಂಸ್ಥಾನಾಧಿಪತಿಗಳಲ್ಲಿ ಸ್ನೇಹವನ್ನು ಬೆಳಸಬೇಕು’ ಎಂದು ತಮ್ಮ ಆಪ್ತಜನರೊಡನೆ ಪ್ರಭುಗಳು ಆಲೋಚನೆ ಮಾಡಿದರು. ಕರಣಿಕ ಲಿಂಗಣ್ಣಯ್ಯ ಎಂಬ ಬುದ್ಧಿವಂತನನ್ನು ದಿಳ್ಳಿಯ ಪಾದಷಹರಲ್ಲಿಗೆ ಕಳಿಸಿದರು.

ಪಾದಷಹರಿಗೂ ಅವರ ಆಸ್ಥಾನದವರಿಗೂ ಉಚಿತವಾದ ವಸ್ತ್ರಾಭರಣಗಳನ್ನೂ ಒಡೆಯರ ಕಡೆಯಿಂದ ಒಂದು ಕುಶಲಪತ್ರಿಕೆಯನ್ನೂ ತೆಗೆದುಕೊಂಡು ಲಿಂಗಣ್ಣಯ್ಯ ಪಾದಷಹರನ್ನು ಕಂಡನು. ಅವರೂ ಈತನನ್ನು ಪ್ರೀತಿಯಿಂದ ಸ್ವಾಗತಿಸಿ, ‘ನಿಮ್ಮ ಒಡೆಯರು ಕ್ಷೇಮವೇ? ಮತ್ತೇನು ಹೇಳಿ ಕಳಿಸಿದ್ದಾರೆ?’ ಎಂದು ಪ್ರಶ್ನಿಸಿದರು.

‘ನಮ್ಮ ಪ್ರಭುಗಳು ಸದಾ ತಮ್ಮ ದವಲತ್ತಿನ ಕ್ಷೇಮಲಾಭ ವೃದ್ಧಿಯನ್ನೇ ಬಯಸುತ್ತಾರೆ’ ಎಂದು ಲಿಂಗಣ್ಣಯ್ಯ ತಾನು ತಂದಿದ್ದ ವಸ್ತ್ರಾಭರಣಗಳನ್ನೂ ಕುಶಲಪತ್ರಿಕೆಯನ್ನೂ ಅವರಿಗೆ ಒಪ್ಪಿಸಿದ.

ಪಾದಷಹರು ಅವನ್ನು ಸ್ವೀಕರಿಸಿ, ‘ನಿಮ್ಮ ದೊರೆಗಳು ಶೂರರು. ಶತ್ರುಗಳನ್ನು ಜಯಿಸಿ, ದೇಶಗಳನ್ನು ಗೆದ್ದು, ಪ್ರಜೆಗಳನ್ನು ಚೆನ್ನಾಗಿ ಕಾಪಾಡುತ್ತಿದ್ದಾರೆ. ಈಗಲಾದರೋ ನಮಗೆ ಶತ್ರುಗಳಾಗಿದ್ದವರನ್ನು ಸಂಹರಿಸಿ ನಮಗೆ ಮಹೋಪಕಾರಿಗಳಾಗಿದ್ದಾರೆ. ಆದ್ದರಿಂದ ನಿಮ್ಮ ಅರಸರು ನಮಗೆ ಮಿತ್ರರಾಗಿದ್ದಾರೆ. ಇನ್ನು ಮುಂದೆ ನಿಮಗೆ ಏನಾದರೂ ಅಗತ್ಯ ಬಿದ್ದರೆ ನಮಗೆ ಹೇಳಿಕಳಿಸಿ. ನಮ್ಮ ಕೈಲಾದ ಸೇವೆ ನಾವೂ ಮಾಡುತ್ತೇವೆ’ ಎಂದರು.

ಅದೇ ವೇಳೆಯಲ್ಲಿ ಚಿಕದೇವರಾಜರಿಗೆ ಪಾದಷಹರು ‘ರಾಜಾ ಜಗದೇವ್’ ಎಂಬ ಬಿರುದನ್ನು ಕೊಟ್ಟರು. ‘ರಾಜಾ ಚಿಕದೇವರಾಜ್ ಬಹದೂರ್‌ಷಾಹಿ’ ಎಂದು ಪಾರಸೀಅಕ್ಷರಗಳಲ್ಲಿ ಕೆತ್ತಿದ ಮುದ್ರೆಯುಂಗುರವನ್ನು ಕೊಟ್ಟರು. ‘ನಿಮ್ಮ ಸಂಸ್ಥಾನಕ್ಕೆ ಈಗ ವರ್ಷದಲ್ಲಿ ಇರುವುದಕ್ಕಿಂತ ಅಧಿಕವಾಗಿ ಇದೊಂದು ನಮ್ಮದಾಗಿ ಇರಲಿ’ ಎಂದು ಒಂದು ಕೆಂಪುಝಂಡೆಯನ್ನು ಕೊಟ್ಟರು. ತಮ್ಮ ಸೀಮೆಯ ಪ್ರಕಾರ ನಗಾರಿ ನೌಬತ್ತುಗಳನ್ನೂ, ಅವರು

ಕಳಿಸಿದ್ದಕ್ಕೆ ಎರಡರಷ್ಟು ವಸ್ತ್ರಾಭರಣಗಳನ್ನೂ ಕುಶಲಪತ್ರಿಕೆಯನ್ನೂ ಕೊಟ್ಟು ಕಳಿಸಿದರು. ಲಿಂಗಣ್ಣಯ್ಯನಿಗೂ ಯಥಾಯೋಗ್ಯವಾಗಿ ಮರ್ಯಾದೆಯಾಯಿತು.

ಲಿಂಗಣ್ಣಯ್ಯ ಪಟ್ಟಣಕ್ಕೆ ಬಂದಾಗ ಊರನ್ನು ತಳಿರುತೋರಣಗಳಿಂದ ಅಲಂಕರಿಸಿದರು. ಪಾದಷಹರು ಕಳಿಸಿದ ಉಂಗುರಕ್ಕೂ ಕುಶಲಪತ್ರಿಕೆಗೂ ಪಲ್ಲಕ್ಕಿಯಲ್ಲಿ ಉತ್ಸವವಾಯಿತು.

ಹೀಗೆ ದಕ್ಷಿಣದ ಮೈಸೂರಿಗೂ ಉತ್ತರದ ದಿಳ್ಳಿಗೂ ಆಗ ಸ್ನೇಹವು ಏರ್ಪಟ್ಟಿತು.

(ಆಧಾರ : ವಂಶಾವಳಿ)

೧೮. ನವಕೋಟಿ ನಾರಾಯಣ

ಚಿಕದೇವರಾಜಒಡೆಯರ ಕಾಲದಲ್ಲಿ ಮೈಸೂರುರಾಜ್ಯವು ಬಹುವಾಗಿ ವಿಸ್ತಾರವಾಯಿತು. ದೇಶ ದೊಡ್ಡದಾದಷ್ಟೂ ಸೇವಕ ಸಿಬ್ಬಂದಿ ಅಧಿಕವಾಗಿ, ಖರ್ಚು ವೆಚ್ಚ ಬೆಳೆಯುತ್ತ ಬೆಳೆಯುತ್ತ ಹೋಯಿತು. ಅದಕ್ಕೆ ತಕ್ಕಂತೆ ಆದಾಯವನ್ನು ಹೆಚ್ಚಿಸಲು ಮಾರ್ಗವನ್ನು ಹುಡುಕಬೇಕಾಯಿತು.

ದೇಶದ ಭೂಮಿಯ ಮೇಲೆ, ಬೆಳೆಗಳ ಮೇಲೆ, ವ್ಯಾಪಾರದ ಮೇಲೆ ಉಚಿತವರಿತು ಅವರು ತೆರಿಗೆಗಳನ್ನು ವಿಧಿಸಿದರು. ಎಲ್ಲಿ ತೆರಿಗೆ ಅಧಿಕ ವೆನಿಸಿತೋ ಅಲ್ಲಿ ಸಂಬಂಧಪಟ್ಟವರು ತಮ್ಮ ಕಷ್ಟಗಳನ್ನು ಹೇಳಿಕೊಂಡರು. ದೊರೆಗಳು ಅವರ ಅಹವಾಲನ್ನು ಕೇಳಿ, ಕೆಲವರಿಗೆ ರಿಯಾಯಿತಿ ತೋರಿಸಿದರು. ಕೆಲವರಿಗೆ ಕಂದಾಯ ಮಾಫಿ ಮಾಡಿದರು.

ಇದರಿಂದ ಕೆಲವು ರೈತರಿಗೆ ಸಲಿಗೆ ಸರಾಗ ಹುಟ್ಟಿಕೊಂಡಿತು. ಕೈಯಲ್ಲಿ ಕೆಲವು ಕಾಸು ಕೂಡಿ, ಅವರಿಗೆ ಕೊಬ್ಬೇರಿತು. 'ಅರಮನೆಗೆ ಪಾಲಿನ ದವಸ, ಕಂದಾಯ ಮುಂತಾದುವನ್ನು ನಾವು ಏಕೆ ಕೊಡಬೇಕು ?' ಎಂದು ಅರಮನೆಗೆ ಕೊಡಬೇಕಾದ್ದನ್ನು ಕೊಡಲು ನಿರಾಕರಿಸಿದರು.

'ಇವರನ್ನು ಹೀಗೆಯೇ ಬಿಟ್ಟರೆ, ಅರಾಜಕತೆ ಹಬ್ಬುತ್ತದೆ' ಎಂದು ಪ್ರಭುಗಳು ಕೆಲವು ತುಂಟ ಮುಖಂಡರನ್ನು ಹಿಡಿದು ಶಿಕ್ಷಿಸಿದರು. ಅವರ ಸರ್ವಸ್ವವನ್ನೂ ಅರಮನೆಗೆ ತೆಗೆದುಕೊಂಡರು. ಉಳಿದವರಿಗೆ ಭಯ ವಾಯಿತು. 'ಅಪ್ಪಣೆಯ ಮೇರೆಗೆ ನಡೆದುಕೊಳ್ಳುತ್ತೇವೆ' ಎಂದು ದೊರೆಗಳ ಕ್ಷಮೆಯನ್ನು ಬೇಡಿದರು. ದೊರೆಗಳು ಅವರ ಜೀವನಕ್ಕೂ ಪುನಃ ಆರಂಬ ಮಾಡುವುದಕ್ಕೂ ಎಷ್ಟು ಬೇಕೋ ಅಷ್ಟನ್ನು ಮಾತ್ರ ಅವರಿಗೆ ಬಿಟ್ಟು, ಉಳಿದ ದವಸಧಾನ್ಯವೆಲ್ಲವನ್ನೂ ಅರಮನೆಗೆ ಸಾಗಿಸಿಕೊಂಡರು.

ಅಲ್ಲಿಂದ ಮುಂದೆ ರೈತರು ಅನುಕೂಲವಾಗಿ ನಡೆದುಕೊಂಡರು.

ದೇಶದ ಬೊಕ್ಕಸವನ್ನು ತುಂಬುವುದಕ್ಕಾಗಿ ಅರಸರು ಇನ್ನೊಂದು ಮಾರ್ಗವನ್ನು ಅನುಸರಿಸಿದರು. ರಾಜ್ಯದ ನೌಕರರಿಗೆ ಸಂಬಳ ಕೊಡುವಾಗ,

ಅದರಲ್ಲಿ ಅರ್ಧವನ್ನು ನಗದಾಗಿಯೂ ಇನ್ನು ಅರ್ಧ ಸಂಬಳಕ್ಕೆ ಅವರವರ ಅಂತಸ್ತಿಗೆ ತಕ್ಕ ಹಾಗೆ ಬತ್ತ ರಾಗಿ ಮುಂತಾದ ಧಾನ್ಯಗಳ ರೂಪದಲ್ಲಿಯೂ ಕೊಡುತ್ತಿದ್ದರು.

'ಈ ಜನ ಅವರವರ ಆದಾಯಕ್ಕೆ ತಕ್ಕಂತೆ ಮನೆಯ ನಿತ್ಯಕಟ್ಟಳೆಯ ವೆಚ್ಚವನ್ನು ಮಾಡಿಕೊಳ್ಳಬೇಕು. ಮದುವೆ ಮುಂಜಿ ಮುಂತಾದ ಶುಭ ಪ್ರಸ್ತುತಗಳಲ್ಲಿ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಮಾತ್ರ ಖರ್ಚು ಮಾಡಬೇಕು—ಎಂದು ನಿಬಂಧನೆಮಾಡಿದರು.

ಹೀಗೆ, ಸಂಬಳವಿದ್ದ ಜನ ಯಾರಾದರೂ ತಮ್ಮ ಸಂಬಳಕ್ಕಿಂತ ಅಧಿಕವಾಗಿ ಖರ್ಚುಮಾಡಿದರೆ, ಅವರನು ಕರೆಯಿಸಿ, 'ಇವಕ್ಕೆ ಹಣ ನಿಮಗೆ ಎಲ್ಲಿಂದ ಬಂತು ?' ಎಂದು ಸಾಕ್ಷಾತ್ತಾಗಿ ವಿಚಾರಣೆ ಮಾಡುವರು. ಅವರು ಸಾಲ ಮಾಡಿದ್ದರಾದರೆ, ಸಾಲ ಕೊಟ್ಟವರಿಗೂ ಸಾಲ ತಂದವರಿಗೂ ದಂಡ ವಿಧಿಸಿ ಶಿಕ್ಷಿಸುತ್ತಿದ್ದರು. ಇದರಿಂದ ಸಾಲ ಮಾಡುವುದಕ್ಕಾಗಲಿ, ಲಂಚ ಲಾವಣಿಗಳಿಗೆ ಕೈ ಒಡ್ಡುವುದಕ್ಕಾಗಲಿ, ಯಾರಿಗೂ ಆಸ್ಪದ ಇರುತ್ತಿರಲಿಲ್ಲ. ಅವರಿಗೆ ಸಲ್ಲಬೇಕಾದ ಹಣ ಕಾಸು, ದವಸ ಧಾನ್ಯ ಎಲ್ಲವೂ ತಪ್ಪದೆ ವಸೂಲಾಗುತ್ತಿತ್ತು.

ಹೀಗೆ ರಾಜ್ಯದ ಆಯವ್ಯಯಗಳನ್ನೆಲ್ಲ ಜೋಪಾನವಾಗಿ ನೋಡಿಕೊಳ್ಳುತ್ತಿರುವಾಗ ಪ್ರಭುಗಳು ಒಮ್ಮೆ ತಮ್ಮ ಭಂಡಾರದಲ್ಲಿದ್ದ ವಸ್ತ್ರಾಭರಣ ದ್ರವ್ಯಗಳನ್ನು ಲೆಕ್ಕ ಮಾಡಿಸಿನೋಡಿದರು. ಒಂಬತ್ತು ಕೋಟಿ ಲೆಕ್ಕ ಸಿಕ್ಕಿತು. ಅಂದಿನಿಂದ ಚಿಕದೇವರಾಜ ಒಡೆಯರಿಗೆ 'ನವಕೋಟಿ ನಾರಾಯಣ' ಎಂಬ ಹೊಸದೊಂದು ಬಿರುದು ಬಂತು.

ಈ ಅರಸರಿಗೆ ರಾಜಕಾರ್ಯವನ್ನು ನಡೆಸಲು ಬೇಕಾದ ಮಂತ್ರಾಲೋಚನೆಯನ್ನು ಒದಗಿಸಿದವರಲ್ಲಿ ಐದು ಜನ ಮುಖ್ಯರು. ಅವರಲ್ಲಿ ಮೊದಲನೆಯಾತ ವಿಶಾಲಾಕ್ಷ ಪಂಡಿತನೆಂಬ ಜೈನ. ಚಿಕದೇವರಾಜನು ಇನ್ನೂ ಬಾಲಕನಾಗಿ ಹಂಗಳದಲ್ಲಿರುವಾಗ, ಅವನಿಗೆ ವಿದ್ಯಾಬುದ್ಧಿಗಳನ್ನು ಹೇಳಿಕೊಟ್ಟ ಗುರು ಈತ. ಆದ್ದರಿಂದ, ಪಟ್ಟಕ್ಕೆ ಬಂದ ಮೇಲೆ ತನ್ನ ಗುರುವನ್ನು ಮಂತ್ರಿಯನ್ನಾಗಿ ನೇಮಕ ಮಾಡಿಕೊಂಡದ್ದು ಸಹಜವಾಗಿತ್ತು. ಆತನೂ ಶಕ್ತನಾಗಿದ್ದ.

ಆದರೆ, ಅರ್ಹತೆ ಎಲ್ಲಿ ಇದ್ದರೆ ಅದರ ಎದುರಿಗೆ ಅಸೂಯೆ ತಲೆಯೆತ್ತದೆ ಇರುವುದಿಲ್ಲ. ಹಾಗಾಗಿ ವಿಶಾಲಾಕ್ಷ ಪಂಡಿತನಿಗೆ ಅನೇಕರು ವಿರೋಧಿಗಳು ಹುಟ್ಟಿಕೊಂಡರು. ಆತನ ವಿರುದ್ಧವಾಗಿ, ಅರಸನ ವಿರುದ್ಧವಾಗಿ ಅಪಪ್ರಚಾರ ಮಾಡತೊಡಗಿದರು. ವಿಶಾಲಾಕ್ಷ ಪಂಡಿತನ ವಿರುದ್ಧವಾಗಿ ಕೆಲವರು ರೈತರೂ ಸೇರಿಕೊಂಡರು. 'ಇವನನ್ನು ಹೀಗೆಯೇ ಬಿಟ್ಟರೆ, ದೇಶ ಅವ್ಯವಸ್ಥವಾಗುತ್ತದೆ' ಎಂದು ಪ್ರಭುಗಳು ಮುಖಂಡರನ್ನು ಹಿಡಿದು ತೀಕ್ಷ್ಣವಾಗಿ ಶಿಕ್ಷಿಸಿದರು. ಆ ಕಾಲದ ಪದ್ಧತಿಯಂತೆ ಕೆಲವರು ಮೂಗು ಕಿವಿ ಕಳೆದುಕೊಂಡರು. ಇದನ್ನು ಕೇಳಿ ಮಿಕ್ಕವರು ತಲೆಮರೆಸಿಕೊಂಡು ತಣ್ಣಗಾದರು.

ಅವರು ತಣ್ಣಗಾಗಬೇಕೆಂದರೂ ಅವರ ಹೊಟ್ಟೆಯುರಿ ತಣ್ಣಗಾಗಲಿಲ್ಲ. ಒಂದು ರಾತ್ರಿ ವಿಶಾಲಾಕ್ಷ ಪಂಡಿತನು ಅರಮನೆಯಿಂದ ಹಿಂದಿರುಗುತ್ತಿರುವಾಗ ಯಾರೋ ಕೆಲವರು ಹಿಂದಿನಿಂದ ಬಂದು ಆತನನ್ನು ಸಾಯುವಂತೆ ಬಡಿದುಹಾಕಿದರು. ಪಂಡಿತನ ಕೂಗನ್ನು ಕೇಳಿ, ಅರಮನೆಯ ಊಳಿಗದವರು ಬಂದು, ಆತನನ್ನು ಆತನ ಮನೆಗೆ ಕೊಂಡೊಯ್ದರು. ಸುದ್ದಿ ಕೇಳಿ ಅರಸರು ತಾವೇ ಪಂಡಿತನ ಮನೆಗೆ ಬಂದು ವಿಚಾರಿಸಿಕೊಂಡರು. ಪಂಡಿತ ಬದುಕುವಂತಿರಲಿಲ್ಲ. 'ನಾನು ಸಾಯುತ್ತೇನೆ, ಪ್ರಭುಗಳೆ. ತಾವು ಇನ್ನೂ ಚಿಕ್ಕವರು. ನನ್ನ ಬಳಿಕ ತಾವು ತಿರುಮಲಾರ್ಯನನ್ನು ಪ್ರಧಾನಿಯಾಗಿ ನೇಮಿಸಿಕೊಳ್ಳಿ. ಆತ ತಮ್ಮ ಜೊತೆಯಲ್ಲಿ ಓದಿದವನು, ತಮಗೆ ಆಪ್ತಸ್ನೇಹಿತನಾದವನು. ದೇವರು ತಮಗೆ ಮಂಗಳವನ್ನು ಉಂಟುಮಾಡಲಿ' ಎಂದು ಹೇಳಿ ಪಂಡಿತನು ಕಣ್ಣು ಮುಚ್ಚಿದನು.

ತಿರುಮಲಾರ್ಯ ಶ್ರೀವೈಷ್ಣವ. ಅರಸನಿಗೆ ಪಾಠ ಹೇಳಿಕೊಟ್ಟ ಇನ್ನೊಬ್ಬ ಗುರು ಚಿಕುಪಾಧ್ಯಾಯ ಅರಸರ ಮಂತ್ರಾಲೋಚನಾಸಭೆಯಲ್ಲಿದ್ದ. ಈ ಇಬ್ಬರ ಶ್ರೀವೈಷ್ಣವರ ಪ್ರಭಾವ ಅರಸರ ಮೇಲೆ ಬೀಳುವುದು ಅನಿವಾರ್ಯವಾಯಿತು. ಅರಸರು ಚಕ್ರಾಂಕನ, ಊರ್ಧ್ವಪುಂಡ್ರಧಾರಣ, ದಾಸನಾಮ, ಮೂಲಮಂತ್ರೋಪದೇಶ ಮತ್ತು ನಾರಾಯಣ ಪೂಜೆ ಎಂಬ ಪಂಚಸಂಸ್ಕಾರಗಳನ್ನು ಹೊಂದಿ ಅಪ್ಪಟ ಶ್ರೀವೈಷ್ಣವರಾಗಿಬಿಟ್ಟರು.

ಅಷ್ಟೇ ಅಲ್ಲ, ತಮಗೆ ಬಂಧು ಬಳಗದವರಾದ ಅರಮನೆತನದವರೆಲ್ಲರೂ ಶ್ರೀವೈಷ್ಣವರಾಗಬೇಕೆಂದೂ, ಅವರು ಹಿಂದೆ ಪೂಜಿಸುತ್ತಿದ್ದ ಮನೆ

ದೇವರುಗಳನ್ನು ಮುರಿತುಬಿಡಬೇಕೆಂದೂ ನಿರೂಪ ಹೊರಡಿಸಿದರು. ಕೆಲವು ಕಾಲ ಕಳೆದ ಮೇಲೆ, ಅದರಿಂದ ಅವರಿಗೆ ತೊಂದರೆಯಾಗುತ್ತಿದೆಯೆಂದು ತಿಳಿದು, ಅವರು ಪುನಃ ಮೊದಲಿನಂತೆ ತಮ್ಮ ದೇವರುಗಳನ್ನೇ ಪೂಜಿಸಿಕೊಳ್ಳಬಹುದೆಂದು ಅನುಮತಿ ಕೊಟ್ಟರು. ತಾವು ಶ್ರೀವೈಷ್ಣವರಾಗಿಯೇ ಬದುಕಿದರು.

ಒಂದು ಸಲ ತಂಜಾವೂರಿನ ಶಹಜಿ ಎಂಬವನು 'ಮೈಸೂರಿನಲ್ಲಿ ಯಾವುದೂ ಒಳ್ಳೆಯ ವಿಷ್ಣುಕ್ಷೇತ್ರವಿಲ್ಲ. ನಮ್ಮ ಸೀಮೆಯಲ್ಲಾದರೋ ಶ್ರೀರಂಗ, ಶ್ರೀಮುಷ್ಣ, ಕುಂಭಕೋಣ ಮೊದಲಾದ ಎಷ್ಟೋ ಇವೆ' ಎಂದು ಹಂಗಿಸಿದನಂತೆ. ಪ್ರಭುಗಳು ಅದನ್ನು ಕೇಳಿ ಕುಪಿತರಾಗಿ, ಶ್ರೀಮುಷ್ಣದ ದೇವಾಲಯದ ಅರ್ಚಕರನ್ನು ಒಲಿಸಿಕೊಂಡು, ಅಲ್ಲಿಯ ಶ್ವೇತವರಾಹ ಸ್ವಾಮಿಯನ್ನು ಶ್ರೀರಂಗಪಟ್ಟಣಕ್ಕೆ ಬರಮಾಡಿಸಿಕೊಂಡು ಬಂದರು.

ಚಿಕದೇವರಾಜರು ಬರುವವರೆಗೂ ಕನ್ನಡದಲ್ಲಿ ಶ್ರೀವೈಷ್ಣವ ಧರ್ಮವನ್ನು ಕುರಿತ ಸಾಹಿತ್ಯವಿರಲಿಲ್ಲ. ಅವರು ಶ್ರೀವೈಷ್ಣವರಾಗಿ ತಾವೇ ಉತ್ಕೃಷ್ಟವಾದ ಎರಡು ಕೃತಿಗಳನ್ನು ರಚಿಸಿದರು. ತಿರುಮಲಾರ್ಯರು ಅವರಿಗೆ ಸಹಾಯ ಮಾಡಿದರು. ಅವರ ಗುರುಗಳಾದ ಚಿಕುಪಾಧ್ಯಾಯರೂ ಹಲವಾರು ಶ್ರೀವೈಷ್ಣವ ಗ್ರಂಥಗಳನ್ನು ಬರೆದರು.

(ಆಧಾರ : ವಂಶಾವಳಿ)

೧೯. ಇಳಿಗಾಲ

ಚಿಕದೇವರಾಜ ಒಡೆಯರ ಆನಂತರ ಪಟ್ಟಕ್ಕೆ ಬಂದವರು ಅವರ ಮಕ್ಕಳಾದ ಕಂಠೀರವ ನರಸರಾಜ ಒಡೆಯರು. ಮೈಸೂರಿನ ಚರಿತ್ರೆಯಲ್ಲಿ ಇವರು 'ಮೂಕ ಅರಸರು' ಎಂದು ಹೆಸರಾದವರು.

ಇವರು ಹುಟ್ಟಿನಿಂದ ಮೂಕರಲ್ಲ. ಮಾತನಾಡುತ್ತಿದ್ದವರಿಗೆ ಬಾಲ್ಯದಲ್ಲಿಯೇ ಮಾತು ನಿಂತುಹೋಯಿತು. ಪ್ರಭುಗಳು ಅನೇಕವಾದ ಔಷಧ, ಯಂತ್ರ, ಮಂತ್ರ, ತಂತ್ರ, ದೇವತಾಪ್ರಾರ್ಥನೆ ಮುಂತಾದವುಗಳನ್ನು ಮಾಡಿಸಿದರೂ ಮಾತು ಬರಲಿಲ್ಲ. ಆಗ 'ಇವರಿಂದ ಮಾತನಾಡಿಸಿದವರಿಗೆ ಬಹುವಾಗಿ ಗ್ರಾಮಭೂಮಿಗಳನ್ನು ಕೊಟ್ಟು ಮರ್ಯಾದೆ ಮಾಡುತ್ತೇವೆ' ಎಂದು ಪ್ರಭುಗಳು ದೇಶದಲ್ಲಿ ಪ್ರಚಾರ ಮಾಡಿಸಿದರು.

ಹೆಗ್ಗಡದೇವನಕೋಟೆಯ ಗೋಪಾಲಭಟ್ಟನೆಂಬ ಬ್ರಾಹ್ಮಣನು ಅದನ್ನು ಕೇಳಿದ. ಆತ ಸೂರ್ಯನ ಉಪಾಸಕ. ಬಹು ದಿವಸ ಉಪವಾಸಮಾಡಿ, 'ದೊರೆಗಳ ಮಕ್ಕಳಿಂದ ಮಾತನಾಡಿಸಲು ನನಗೆ ಸಾಧ್ಯವೆ?' ಎಂದು ಸೂರ್ಯನನ್ನು ಬೇಡಿಕೊಂಡ. ಸೂರ್ಯ ಆತನಿಗೆ ಕನಸಿನಲ್ಲಿ ಕಾಣಿಸಿಕೊಂಡು, 'ನಿನ್ನಿಂದ ಆಗುತ್ತದೆ' ಎಂದು ಅಪ್ಪಣೆಕೊಟ್ಟ.

ಆಗ ಗೋಪಾಲಭಟ್ಟ ಶ್ರೀರಂಗಪಟ್ಟಣಕ್ಕೆ ಬಂದು, 'ನಾನು ಕುಮಾರರಿಂದ ಮಾತನಾಡಿಸುತ್ತೇನೆ' ಎಂದ. ಅರಸರು ಅನುಮತಿಕೊಟ್ಟರು. ಗೋಪಾಲಭಟ್ಟ ಒಂದು ಮಂಡಲದ ಕಾಲ ಉಪವಾಸಮಾಡಿ ಜಪಸಂತರ್ಪಣೆಗಳನ್ನು ನಡಸಿ, ಸೂರ್ಯನನ್ನು ಪ್ರಾರ್ಥಿಸಿದ. 'ನಾಳೆಯ ದಿವಸ ನೀನು ಮಾತನಾಡಿಸಬಹುದು' ಎಂದು ಸೂರ್ಯ ಅನುಜ್ಞೆ ಕೊಟ್ಟ.

ಮಾರನೆಯ ದಿವಸ ಅರಮನೆಯವರೆಲ್ಲ ತುಂಬಿದ ಸಭೆಯಲ್ಲಿ ಭಟ್ಟನು ಕುಮಾರರಿಗೆ ವಿಭೂತಿ, ಫಲ, ಮಂತ್ರಾಕ್ಷತೆ, ತೀರ್ಥ ಪ್ರಸಾದಗಳನ್ನು ಕೊಟ್ಟು, ಮಾತನಾಡಬೇಕೆಂದು ಕೇಳಿಕೊಂಡ.

ಅದುವರೆಗೂ ಮೂಕರಾಗಿದ್ದ ಕುಮಾರರು ಸೂರ್ಯದೇವನ ಅನುಗ್ರಹದಿಂದ ವಾಚಾಲರಾದರು. ತಮ್ಮ ಹಿಂದಿನ ಜನ್ಮಗಳ ಕತೆಯನ್ನು ಹೇಳಿಕೊಂಡರು. ಆಗ ತಾವು ಮಾಡಿದ ದೋಷದಿಂದ ಈ ಜನ್ಮದಲ್ಲಿ ಮೂಕತ್ವ ಉಂಟಾಗಿರುವುದೆಂದು ತಿಳಿಸಿದರು. 'ಈಗ ಸೂರ್ಯನಾರಾಯಣನ ಅನುಗ್ರಹದಿಂದ ಮಾತನಾಡುತ್ತಿದ್ದೇನೆ. ಇನ್ನು ಈ ಜನ್ಮದಲ್ಲಿ ನಾನು ಪುನಃ ಮಾತಾಡುವಂತಿಲ್ಲ' ಎಂದು ಹೇಳಿದೊಡನೆ ಮೂಕರಾದರು.

ಕಂಠೀರವ ನರಸರಾಜರು ಮೂಕರಾದರೂ, ಹೇಳಿದ ವಿಷಯಗಳನ್ನೆಲ್ಲ ಅರ್ಥಮಾಡಿಕೊಳ್ಳುತ್ತಿದ್ದರು. ಯುಕ್ತಾಯುಕ್ತಗಳನ್ನು ಪರ್ಯಾಲೋಚನೆ ಮಾಡಿ, ತಮ್ಮ ಕೈ ಬಾಯಿ ಕಣ್ಣುಗಳ ಸನ್ನೆಯಿಂದಲೇ ಉತ್ತರವನ್ನು ಸೂಚಿಸುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ತಾವು ಹೇಳಬೇಕಾದ್ದನ್ನು ಬರೆದು ತೋರಿಸುತ್ತಿದ್ದರು.

ಇವರ ಕಾಲದಲ್ಲಿ ಮೈಸೂರಿಗೆ ಯಾವ ಹೊಸ ತೊಂದರೆಗಳೂ ತೋರದೆ ಹೋದರೂ, ಹಿಂದಿನವರು ಕಟ್ಟಿದ್ದನ್ನು ಕಾಪಾಡಿಕೊಂಡು, ದೇವತಾ ಕಾರ್ಯಗಳನ್ನೂ ದಾನಧರ್ಮಗಳನ್ನೂ ನಡೆಸುತ್ತ, ಪ್ರಜಾಪಾಲನೆ ಮಾಡುತ್ತಿದ್ದರು.

ಸುಮಾರು ಒಂಬತ್ತು ವರ್ಷ ರಾಜ್ಯವಾಳಿ ಇವರು ತೀರಿಕೊಂಡ ಮೇಲೆ ಇವರ ಮಕ್ಕಳಾದ ದೊಡ್ಡ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದರು.

ಇವರ ಆಳ್ವಿಕೆಯ ಕಾಲದಲ್ಲಿ ಒಮ್ಮೆ ಆರ್ಕಾಟಿನ ನವಾಬನ ಕಡೆಯ ಶಿದ್ದೋಜಿ ಘೋರ್ಪಡೆ ಎಂಬುವನು ಸೈನ್ಯಸಮೇತನಾಗಿ ಬಂದು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ. ದೊರೆಗಳು ತಾವೇ ಸ್ವತಃ ಕೋಟೆಯ ಮೇಲೆ ನಿಂತು, ಗುಂಡು ಹೊಡೆಸಿ ಯುದ್ಧ ಮಾಡಿದರು. ಅವರ ಏಟುಗಳನ್ನು ತಾಳಲಾರದೆ ಶತ್ರುಸೈನ್ಯ ಓಟಕಿತ್ತಿತು. ಪಟ್ಟಣದವರು ಅವರನ್ನು ಅಟ್ಟಿಸಿಕೊಂಡು ಹೋದರು. ಸಿಕ್ಕಿದವರ ಕಿವಿ ಮೂಗುಗಳನ್ನು ಕೊಯಿದು, ದಂಡಿನಲ್ಲಿದ್ದ ಆನೆ ಕುದುರೆ ವಸ್ತ್ರಾಭರಣ ಮುಂತಾದುವನ್ನು ಸೂರೆಮಾಡಿ ತಂದರು.

ಹೀಗಿರಲು ಇನ್ನೊಂದು ಸಲ, ಮರಾಟಿಯವರ ಕಡೆಯ ಬಾಜಿರಾವ್ ಎಂಬ ಸರದಾರ ಬಹಳ ಸೈನ್ಯದೊಡನೆ ಬಂದು ಪಟ್ಟಣಕ್ಕೆ ಮುತ್ತಿಗೆ ಹಾಕಿದ.

ಆಗ ಪಟ್ಟಣದ ಕೋಟೆಯ ಮೇಲಿಂದ ತೋಪು, ಫಿರಂಗಿ, ಗುಂಡು, ಜಂಜಾಲು, ತುಪಾಕಿ, ಮಕರದಬ್ಬಿ, ಜಬರಜಂಗಿ, ಬಾಣ ಮುಂತಾದವುಗಳಿಂದ ಶತ್ರುವಿನ ಸೈನ್ಯವನ್ನು ಸೀಳಿಸಿದರು. ಶತ್ರುಸೈನ್ಯ ಬಹಳವಾಗಿ ಹತವಾಯಿತು. ಬಾಜಿರಾಯ ಇದನ್ನು ನೋಡಿ, 'ನಾವು ಕತ್ತಿಯನ್ನು ಓಡಿಸಿ ಯುದ್ಧ ಮಾಡುವವರು. ಇವರಾದರೋ ಮದ್ದುಗುಂಡುಗಳಿಂದ ನಮ್ಮನ್ನು ಕೊಲ್ಲುತ್ತಿದ್ದಾರೆ. ಇದು ಶ್ರೀರಂಗಪಟ್ಟಣವಲ್ಲ, ಇದು ಫಿರಂಗಿ ಪಟ್ಟಣ' ಎಂದು ಹೇಳಿಕೊಂಡು, ಬಂದ ದಾರಿಗೆ ಸುಂಕವಿಲ್ಲವೆನ್ನುತ್ತ ಹಿಂದಿರುಗಿದ.

ಬರುಬರುತ್ತ ಈ ರಾಜರಿಗೆ ರಾಜ್ಯಭಾರದಲ್ಲಿ ಆಸಕ್ತಿ ಕಡಮೆಯಾಯಿತು. ಸೇನೆಯ ಆಡಳಿತವನ್ನು ಹಿಂದಿನಂತೆ ತಾವೇ ನೋಡಿಕೊಳ್ಳುವುದು ಬಿಟ್ಟು ತಮ್ಮ ಬಂಧುಗಳಿಗೆ ಸೇನಾಧಿಕಾರವನ್ನು ಒಪ್ಪಿಸಿದರು. ತಾವು ಸಂಗೀತ ಸಾಹಿತ್ಯ ನಾಟಕ ಮುಂತಾದ್ದರಲ್ಲಿ ಮಗ್ನರಾದರು.

ಇದರಿಂದ ಪ್ರಾಂತದ ಸೈನ್ಯಾಧಿಪತಿಗಳು ಸ್ವತಂತ್ರರಾದರು. ಮರ್ಯಾದೆಗಳು ಹೆಚ್ಚುಕಡಮೆಯಾದುವು. ತುಂಟ ಜನ ಬೇಕಾದ ಹಾಗೆ ಆಡುವುದಕ್ಕೆ ಅವಕಾಶವಾಯಿತು.

ಒಡೆಯರು ಇದು ಯಾವುದನ್ನೂ ಗಮನಕ್ಕೆ ತಂದುಕೊಳ್ಳದೆ, ತಮ್ಮ ಸುಖಸಂತೋಷಗಳಲ್ಲಿ ತಾವು ಮುಳುಗಿಹೋಗಿದ್ದರು. ತಾವು ಇಟ್ಟುಕೊಂಡಿದ್ದ ಮೃಗಶಾಲೆಯೊಂದಕ್ಕೇ ಪ್ರತಿವರ್ಷ ಲಕ್ಷ ವರಹಗಳನ್ನು ವೆಚ್ಚ ಮಾಡುತ್ತಿದ್ದರು. ಆ ಮೃಗಶಾಲೆಯಲ್ಲಿ ಹುಲಿ, ಕರಡಿ, ಸಿವಂಗಿ, ಕಾಡೆಮ್ಮೆ, ಹುಲ್ಲೆ, ಕಡವೆ, ಸಾರಂಗ, ಕಪಿ, ಗಿಣಿ, ಮುಂಟೀಸ, ಕಾಳಿಂಗ, ನವಿಲು, ಪುನುಗಿನ ಬೆಕ್ಕು, ಗೌಜಲ ಹಕ್ಕಿ, ಲಾವಗೆ ಹಕ್ಕಿ, ಗಿಡಗ, ಘೈಂ ಮೊದಲಾದ ನಾನಾ ಬಗೆಯ ಪ್ರಾಣಿಗಳು ಇದ್ದುವು. ರಾಜರಿಗೆ ಪ್ರಜೆಗಳ ಸಹವಾಸಕ್ಕಿಂತ ಮೃಗಪಕ್ಷಿಗಳ ಸಹವಾಸವೇ ಹೆಚ್ಚು ಪ್ರಿಯವಾಗಿತ್ತು.

ಯದುರಾಯರ ಕಾಲದಿಂದ ವೀರ್ಯ ಶೌರ್ಯ ಪರಾಕ್ರಮಗಳಿಗೆ ಹೆಸರಾಗಿದ್ದ ಒಡೆಯರ ಚರಿತ್ರೆಗೆ ಇಲ್ಲಿಂದ ಇಳಿಗಾಲ ಪ್ರಾಪ್ತವಾಯಿತು. ಮುಂದಿನ ರಾಜರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು, ಪರಾವಲಂಬಿಗಳಾದರು.

ದೊಡ್ಡ ಕೃಷ್ಣರಾಜ ಒಡೆಯರು ಸಂತಾನವಿಲ್ಲದೆ ತೀರಿಕೊಂಡರು. ಅನಂತರ ಅವರ ಹಿರಿಯ ಕುಟುಂಬ ದೇವಾಜಮ್ಮಣ್ಣಿಯವರು ತಮ್ಮ ಜ್ಞಾತಿಯೊಬ್ಬರ ಮಗನನ್ನು ದತ್ತು ತೆಗೆದುಕೊಂಡರು. ಅವರೇ ಚಾಮರಾಜ ಒಡೆಯರು. ಆ ಕಾಲದಲ್ಲಿ ದಳವಾಯಿಯಾಗಿದ್ದ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ ಮತ್ತು ಕರಾಚೂರಿ ನಂಜರಾಜಯ್ಯ ಎಂಬ ಮೂವರು ಅರಸರನ್ನು ಕೈಗೊಂಬೆ ಮಾಡಿಕೊಂಡು, ರಾಜ್ಯದ ಆದಾಯವನ್ನು ತಾವು ತಾವೇ ತಿನ್ನತೊಡಗಿದರು. ಅರಸರು ಧೈರ್ಯಮಾಡಿ ಪ್ರತಿಭಟಿಸಿದಾಗ ಅವರನ್ನು ಸೆರೆಹಿಡಿದು ಕಬ್ಬಾಳದುರ್ಗದಲ್ಲಿ ಬಂಧಿಸಿದರು. ಮೂರು ವರ್ಷದ ಇನ್ನೊಂದು ಮಗುವನ್ನು ದತ್ತು ಕೊಡಿಸಿ, ಆ ಮಗುವನ್ನು ನೆಪಮಾತ್ರಕ್ಕೆ ರಾಜನೆಂದಿರಿಸಿಕೊಂಡು, ತಮ್ಮ ದುರ್ಮಾರ್ಗಗಳಲ್ಲಿ ತಾವು ಮುಂದುವರಿದರು.

ಈ ಮೂರು ಜನ ದ್ರೋಹಿಗಳಿಗೆ ಬುದ್ಧಿ ಕಲಿಸುವುದಕ್ಕೋಸ್ಕರ ಬಂದ ಹಾಗೆ ಮೈಸೂರಿನ ಆಡಳಿತದಲ್ಲಿ ಹೈದರನ ಪ್ರವೇಶವಾಯಿತು. ಈತ ಇಮ್ಮಡಿ ಕೃಷ್ಣರಾಜ ಒಡೆಯರು, ನಂಜರಾಜ ಒಡೆಯರು, ಖಾಸಾ ಚಾಮರಾಜ ಒಡೆಯರು—ಇವರುಗಳಿಗೆ ಬಾಲ್ಯವಾದ್ದರಿಂದ ಸ್ವಾಮಿಕಾರ್ಯವನ್ನೂ ಸ್ವಕಾರ್ಯವನ್ನೂ ಯಶಸ್ವಿಯಾಗಿ ನೆರವೇರಿಸಿ, ತುಂಬ ಪ್ರಸಿದ್ಧಿಗೆ ಬಂದ. ಈತನ ಕಾಲದಲ್ಲಿ ಮೈಸೂರು ಮತ್ತೂ ವಿಸ್ತಾರವಾಯಿತು.

ಹೈದರ್ ಆದ ಮೇಲೆ ಆತನ ಸ್ಥಾನಕ್ಕೆ ಬಂದಾತ ಆತನ ಮಗ ಟಿಪ್ಪೂ ಸುಲ್ತಾನ್. ಈತನ ಕಾಲದಲ್ಲಿ ಮೈಸೂರಿನ ಕಡೆಗೆ ಇಂಗ್ಲಿಷರ ಆಗಮನವಾಯಿತು. ೧೭೯೯ರಲ್ಲಿ ಟಿಪ್ಪೂ ಮಡಿದುಹೋದ ಮೇಲೆ, ಮೈಸೂರು ಇಂಗ್ಲಿಷರ ವಶವಾಯಿತು. ಆದರೂ, ರಾಜಭಕ್ತರಾದ ಹಲವರು ಮೈಸೂರಿನವರ ಪ್ರಯತ್ನದಿಂದ ರಾಜ್ಯ ಪುನಃ ನಮ್ಮ ಒಡೆಯರ ವಶಕ್ಕೇ ಬಂತು.

(ಆಧಾರ : ವಂಶಾವಳಿ)

ನಮ್ಮ ಒಡೆಯರ ಕತೆಗಳು ಮುಗಿದುವು.

ಮೈಸೂರಿನ ಒಡೆಯರನ್ನು ಕುರಿತು ಆರು ನಾಟಕಕಥೆಗಳು

೧. 'ಬಿರುದಂತೆಂಬರ ಗಂಡ' ನಾಟಕದ ಕಥೆ
೨. 'ಸುಗುಣಗಂಭೀರ' ನಾಟಕದ ಕಥೆ
೩. 'ಬೆಟ್ಟದ ಅರಸು' ನಾಟಕದ ಕಥೆ
೪. 'ವಿಗಡ ವಿಕ್ರಮರಾಯ' ನಾಟಕದ ಕಥೆ
೫. 'ಮಂತ್ರಶಕ್ತಿ' ನಾಟಕದ ಕಥೆ
೬. 'ವಿಜಯ ನಾರಸಿಂಹ' ನಾಟಕದ ಕಥೆ

ಈ ಆರು ನಾಟಕಗಳನ್ನು ಬರೆದವರು 'ಸಂಸ'. ಸಂಸ ಎಂಬುದು ಇವರ ಕಾವ್ಯನಾಮ. ಇವರ ಪೂರ್ತಿಯಾದ ಹೆಸರು 'ಎ. ಎನ್. ಸ್ವಾಮಿ ವೆಂಕಟಾದ್ರಿ ಅಯ್ಯರ್.' ಇವರು ಅಚ್ಚ ಕನ್ನಡಿಗರು. ಕೊಳ್ಳೇಗಾಲದ ಬಳಿಯ ಅಗರವೆಂಬ ಗ್ರಾಮ ಇವರ ಜನ್ಮಸ್ಥಳ. ೧೩-೧-೧೮೯೮ರಲ್ಲಿ ಹುಟ್ಟಿದ ಇವರು ೧೪-೨-೧೯೩೯ರಂದು ಕಾಲವಾದರು.

ಮೈಸೂರಿನ ಒಡೆಯರನ್ನು ಕುರಿತು ಇವರು ಬರೆದಿರುವ ಹಾಗೆ, ಇವರು ಬರೆದಿರುವಷ್ಟು ನಾಟಕಗಳನ್ನು ಇನ್ನು ಯಾರೂ ಬರೆದಿಲ್ಲ. ಮೇಲೆ ಹೇಳಿದ ಆರು ನಾಟಕಗಳು ಮಾತ್ರ ನಮಗೆ ಲಭಿಸಿವೆ. ಆರೂ ಅಚ್ಚಾಗಿವೆ. ಇವಲ್ಲದೆ—ಸುಜನಪ್ರಭು, ದೃಷ್ಟಿದಾನ, ಶರಣಾಗತಸಂಪಾಲಕ, ರತ್ನಸಿಂಹಾಸನಾರೋಹಣ, [illegible], ರಾಜಬಿರುದೋತ್ಸವ, ತೆರಕಣಾಂಬಿ, ಅನಂಗಕಾಮಾಯಣ, ಚೊಕ್ಕಕಳ, ಜಗಜಟ್ಟಿ, ಚಲಗಾರ ಚನ್ನಯ್ಯ, ಮುಸ್ತ್ರಿಘವಿಜಯ, ತುಂಗಸಿರ್ಯಾತನ, ನಂಜುಂಡಸರಿ, ಶಪಥಮಂಗಳ, ಹುಂಗಳ, ಸಂಚೆಯ ಯೋಗಿ ಎಂಬ ಇನ್ನೂ ಹದಿನೇಳು ನಾಟಕಗಳನ್ನು ಬರೆದಿದ್ದರಂತೆ. ಅವು ನಮಗೆ ದೊರಕಿಲ್ಲ.

ದೊರಕಿರುವ ಆರು ನಾಟಕಗಳ ಕಥೆಗಳನ್ನು ಮುಂದೆ ಕೊಟ್ಟಿದೆ. ಅಲ್ಲಿನ ಅಂಕಿಗಳು ನಾಟಕದ ಪ್ರವೇಶಗಳನ್ನು ಸೂಚಿಸುತ್ತವೆ.

೧. 'ಬಿರುದಂತೆಂಬರ ಗಂಡ' ನಾಟಕದ ಕಥೆ

ಮೈಸೂರಿನ ಕವಡೆ ವ್ಯಾಪಾರಿಯಾದ ಸಂಜಸೆಟ್ಟಿಗೆ ತನ್ನ ರಾಜನೆಂದರೆ ತುಂಬ ಭಕ್ತಿ. ಆದರಿಂದಾಗಿ ತನ್ನ ತನ್ನ ಬಿರುದಾವಳಿಗಳನ್ನು ಹೊಗಳಿಸಿಕೊಂಡ ಇತರ ಪಾಳೆಯಗಾರರ ಎದುರು "ಬಿರುದು ಅಂತು ಎನ್ನುವವರನ್ನು ಎದುರಿಸುವವನು ನಮ್ಮ ರಾಜರು" ಎಂಬ ಅರ್ಥ ಬರುವಂತೆ ತನ್ನ ರಾಜರಿಗೆ "ಬಿರುದಂತೆಂಬರ ಗಂಡ" ಎಂಬ ಬಿರುದನ್ನು ಉದ್ಘೋಷಿಸಿ, ಇತರರು ಕ್ರುದ್ಧರಾಗಿ ಬಂದರೆ ಅವರನ್ನು ತನ್ನ ಕತ್ತಿಯಿಂದ ನಿವಾರಿಸಿ, ಮೈಸೂರಿನ ಕೀರ್ತಿಯನ್ನು ಕಾಪಾಡುತ್ತಾನೆ.

ಅವನ ಈ ವೀರವರ್ತನೆಗೆ ಮೈಸೂರಿನ ದೊರೆ ಸುಪ್ರೀತರಾಗಿ ಸೆಟ್ಟಿಯನ್ನು ಮೆಚ್ಚಿಕೊಂಡದ್ದರಿಂದ, ಅವನಿಗೆ ರೆಕ್ಕೆ ಬಂದಂತೆ ಆಗುತ್ತದೆ. ಅದೇ ವೇಳೆಯಲ್ಲಿ ತನ್ನ ಬಿರುದುಗಳನ್ನು ಹೊಗಳಿಸಿಕೊಂಡು ಅಲ್ಲಿಗೆ ಬಂದ ಉನ್ಮತ್ತಳಾದ ಪಾಳಯಗಾತಿಯನ್ನು ಹಾಗೆಯೇ ಕೆರಳಿಸಿ, ತನ್ನ ದೊರೆಯ ರಕ್ಷಣೆಯನ್ನು ಮರೆಯುವ ಅತ್ಯುತ್ಸಾಹದಿಂದ, ದೊರೆಯನ್ನು ಪ್ರಾಣಾಪಾಯದ ಶೀಲಸಂಕಟಕ್ಕೆ ಸಿಲುಕಿಸುತ್ತಾನೆ.

ದೊರೆ ತನ್ನ ಉದಾತ್ತವಾದ ವರ್ತನೆಯಿಂದ ಆ ಪಾಳಯಗಾತಿಯನ್ನು ತನ್ನ ರಾಜೋಚಿತವಾದ ವರ್ತನೆಯಿಂದ ಆಕೆಯ ಗರ್ವವನ್ನು ಸೋಲಿಸಿ, ಉನ್ಮತ್ತರನ್ನು ತನಗೆ ಅಡಿಯಾಳು ಮಾಡಿಕೊಳ್ಳುತ್ತಾರೆ.

ಅರಕ್ಷಿತಳಾದ ಸ್ತ್ರೀಯನ್ನು ಹಾಗೆ ಕೆರಳಿಸಿದ್ದು ಅನುಚಿತವೆಂದು ದೊರೆಗೆ ಸಂಜಸೆಟ್ಟಿಯು ನೇರ ಅಪರಾಧಿಯಾಗಿ ತೋರುತ್ತಾನೆ. ಆ ಸೆಟ್ಟಿಯ ದೇಶಾಭಿಮಾನವನ್ನೂ ರಾಜಭಕ್ತಿಯನ್ನೂ ಕಂಡು ದೊರೆ ಶಿಕ್ಷಿಸ ಹೋಗಲಿಲ್ಲ. ಆತನು ಪ್ರೀತಿಯಿಂದ ಕೊಟ್ಟ 'ಬಿರುದಂತೆಂಬರ ಗಂಡ' ಎಂಬ ಹೊಸ ಬಿರುದನ್ನು ಸ್ವೀಕರಿಸಿದ್ದರ ಜೊತೆಗೆ, ಸಂಜಸೆಟ್ಟಿಯು ಅರ್ಪಿಸಿದ "ಅಪ್ಪಣ್ಣ" ಎಂಬುದನ್ನೂ ತನ್ನ ಬಿರುದಾಗಿ ತಾನೇ ಕೊಂಡು, ಅಂದಿನಿಂದ ತಿಮ್ಮರಾಜ ಒಡೆಯರು "ಅಪ್ಪಣ್ಣ ತಿಮ್ಮರಾಜ ಒಡೆಯರು' ಆಗುತ್ತಾರೆ.

೨. "ಸುಗುಣಗಂಭೀರ" ನಾಟಕದ ಕಥೆ.

೧. ತೊರೆಮಾವಿನ ಹಳ್ಳಿಯ ಗೋಪಾಲಶಾಸ್ತ್ರಿಯ ಪತ್ನಿಯಾದ ತೇಜಸ್ವಿನಿಯನ್ನು ರೇಮಟಿ ವೆಂಕಟಾದ್ರಿನಾಯಕನ ಮಗ ಭಾಮನಾಯಕನು ಬಯಸಿ, ಆವಳಿಂದ ತಿರಸ್ಕೃತನಾಗುತ್ತಾನೆ. ಭಾಮನು ಗೋಪಾಲಶಾಸ್ತ್ರಿಯನ್ನು ಕೊಲೆಮಾಡಲು ಸಿದ್ಧಯಿಸಿ ಹೋಗುತ್ತಾನೆ.

೨. ಶ್ರೀರಂಗಪಟ್ಟಣದಿಂದ ಹಳ್ಳಿಗೆ ಹಿಂದಿರುಗುವ ಮಾರ್ಗದಲ್ಲಿ ಗೋಪಾಲಶಾಸ್ತ್ರಿಯನ್ನು ಭಾಮನು ಕೊಲೆಮಾಡಿದ್ದಾನೆ. ಭಾಮನ ಮಾತುಗಳಿಂದ ಭೀತಿಗೊಂಡ ತೇಜಸ್ವಿನಿ ಬಂದು, ಪತಿಯ ಕೊಲೆಯನ್ನು ಕಂಡು, ಕೊಲೆಗಾರನಾದ ಭಾಮನ ವಂಶವನ್ನೇ ನಿರ್ಮೂಲವಮಾಡುವೆನೆಂದು ಶಪಥ ತೊಡುತ್ತಾಳೆ. ಅದಕ್ಕಾಗಿ ಸಂನ್ಯಾಸಿಯ ವೇಷವನ್ನು ಧರಿಸುತ್ತಾಳೆ.

ಆರು ವರುಷ ಕಳೆಯುತ್ತದೆ.

೩. ಮೈಸೂರಿನ ಅರಮನೆಯಲ್ಲಿ, ರಾಜಸಭೆಯಲ್ಲಿ, ದಳವಾಯಿಯ ನೇಮಕವನ್ನು ಕುರಿತು ಚರ್ಚೆಗಳಾಗುತ್ತಿವೆ. ಆ ವೇಳೆಗೆ ತೊರೆಮಾವಿನ ಹಳ್ಳಿಯಿಂದ, ದುರ್ಗೇಶ್ವರನ ಮಗಳಾದ ಅಂಬಿಕೆಯನ್ನು ಯುವರಾಜನಿಗೆ ಅರ್ಪಿಸುವ ಪತ್ರಿಕೆ ಬರುತ್ತದೆ. ಈ ಮದುವೆಯ ಸಂಬಂಧಕ್ಕೆ ವೃದ್ಧಮಂತ್ರಿ ಒಪ್ಪುವುದಿಲ್ಲ. ಅದಕ್ಕೆ ಕಾರಣವಾಗಿ ರೇಮಟಿ ವಂಶದ ಕಳಂಕವನ್ನು ಸಾಕ್ಷೀಕರಿಸಲು ಶ್ರೀಮದಾನಂದ ಸಂನ್ಯಾಸಿ (ವೇಷಾಂತರದಲ್ಲಿರುವ ತೇಜಸ್ವಿನಿ) ಯನ್ನು ಕರೆಸುತ್ತಾರೆ. ಮದುವೆಯ ಮಾತು ಮುರಿದುಬೀಳುತ್ತದೆ.

೪. ಅಂಬಿಕೆಯನ್ನು ತಾನು ಮದುವೆಯಾಗುವುದು ಸಾಧ್ಯವಿಲ್ಲವೆಂದು ತಿಳಿದು ಯುವರಾಜ ಚಿಟ್ಟದ ಚಾಮರಾಜ ಒಡೆಯನು ಹತಾಶನಾಗಿದ್ದಾನೆ. ಆತನ ಸ್ನೇಹಿತನಾದ ಸೂರಣ ಆತನನ್ನು ತನ್ನ ವಿನೋದಗಳಿಂದ ಸಂತೈಸುತ್ತಿದ್ದಾನೆ. ಯುವರಾಜನು, ತನಗೆ ಮುಂದೆ ಬರಲಿರುವ ರಾಜ್ಯಾಧಿಕಾರವನ್ನು ತನ್ನ ತಮ್ಮನಿಗೆ ವಹಿಸಿಬಿಡುವ ವಿರಾಗವನ್ನು ತಳೆದಿದ್ದಾನೆ.

೫. ತೇಜಸ್ವಿನಿಯನ್ನು ಮರೆಯಲಾರದೆ ಹೋದ ಭಾಮನು ಜೀವನದಲ್ಲಿ ಜುಗುಪ್ಸೆಯನ್ನು ತಳೆದು, ಅಪಾಯದ ಲಕ್ಷ್ಯವಿಲ್ಲದೆ ಬೇಟೆಯಲ್ಲಿ ನಿರತನಾಗಿದ್ದಾನೆ. ತನ್ನ ಬದುಕಿನಲ್ಲಿ ತನಗೆ ಬೇಸರ ಬಂದಿದೆ. ಅಷ್ಟು ಹೊತ್ತಿಗೆ ಮೈಸೂರಿಂದ ಓಬಳರಾಯನು ಸುದ್ದಿ ತರುತ್ತಾನೆ : ಮೈಸೂರಿನವರು ತಮ್ಮ ಸಂಬಂಧವನ್ನು ಒಲ್ಲೆವೆಂದು ಮಾಡಿದ ಅಪಮಾನವನ್ನು. ಭಾಮನಿಗೆ ಮೈಸೂರಿನವರ ಮೇಲೆ ಪ್ರತೀಕಾರಬುದ್ಧಿ ಹುಟ್ಟುತ್ತದೆ. ಮೈಸೂರಿನ ಅರಸರ ಆಶ್ರಯದಲ್ಲಿರುವ ತನ್ನ ತಮ್ಮನನ್ನು ಕರೆದುತರುವಂತೆ ಓಬಲನಾಯಕನಿಗೆ ಆಜ್ಞೆ ಮಾಡಿ, ತಾನು ಸಮಯವನ್ನು ನಿರೀಕ್ಷಿಸುತ್ತಾನೆ.

೬. ಭಾಮನ ತಮ್ಮನನ್ನು ಎತ್ತಿಕೊಂಡು ಹೋಗಲು ಓಬಲನ ಕಡೆಯವರು ಮೈಸೂರಿನ ಬೆಟ್ಟದ ಬಳಿ ಕಾದಿದ್ದಾರೆ. ಮೈಸೂರಿನ ಅರಸರು ಉಚಿತ ಪರಿವಾರದೊಂದಿಗೆ ಬೆಟ್ಟವೇರಲು ಬಂದಿದ್ದಾರೆ. ಆ ದಿನ ಏನೋ ಅಪಾಯದ ಸೂಚನೆ ಕಾಣಿಸಿಕೊಂಡಿದೆ. ಬೆಟ್ಟವನ್ನು ಹತ್ತುತ್ತ ಹೋಗುತ್ತಿರುವಾಗ ಭಯಂಕರವಾದ ಸಿಡಿಲು ಬಡಿಯುತ್ತದೆ.

೭. ಮೊದಲು ಚೇತರಿಸಿಕೊಂಡು ಎದ್ದ ವೃದ್ಧಮಂತ್ರಿ ದೊರೆಗೆ ಏನಾಯಿತೋ ಎಂದು ಕಾತರನಾಗಿರುವಾಗ, ದೊರೆ ಎಚ್ಚರುತ್ತಾರೆ. ತಲೆಯ ಕೂದಲು ಸುಟ್ಟು ಹೋಗಿರುವುದು ಬಿಟ್ಟರೆ ಅರಸರು ಕ್ಷೇಮವಾಗಿದ್ದಾರೆ. ಆಗ ವೃದ್ಧಮಂತ್ರಿಯನ್ನು ಮೈಮರೆಸಿ, ಚಾಮುಂಡೇಶ್ವರಿ ಅರಸರಿಗೆ ಮಾತ್ರ ಪ್ರತ್ಯಕ್ಷಳಾಗಿ, ಅಭಿನಂದಿಸಿ ಹೋಗುತ್ತಾಳೆ.

೮. ಅರಮನೆಯ ಅಂತಃಪುರದಲ್ಲಿ ಅರಸರ ತೈಲಚಿತ್ರಕ್ಕೆ ನಂದಾದೀವಿಗೆ ತಗುಲಿ, ಅದು ಉರಿದುಹೋಗುತ್ತದೆ. ಅರಸರ ಅಗ್ನಿಕಂಟಕ ಅಷ್ಟರಿಂದಲೇ ತೀರಿಹೋಯಿತೆಂದು ಅರಮನೆಯವರು ದೇವಿಯನ್ನು ಬೇಡುತ್ತಾರೆ.

೯. ಹಿಂದೆ ಗೋಪಾಲರಾಜನನ್ನು ಕೊಂದ ಪಾತಕಕ್ಕಾಗಿ ಪರಿತಪಿಸುತ್ತ ತೊರೆನೂರಿನ ಬಳಿಯ ದುರ್ಗದ ಬಳಿಗೆ ಭಾಮನು ಬಂದಿದ್ದಾನೆ. ಅವನ ಬಳಿಗೆ ಶ್ರೀಮದಾನಂದ ಸನ್ಯಾಸಿ ಬರುತ್ತಾನೆ. ತಮ್ಮ ವಂಶದ ಮೇಲೆ ಇವನೇ ಕಳಂಕವನ್ನು ಹೊರಿಸಿದವನೆಂದು ಭಾಮನು ಅವನನ್ನು ವಧಿಸಲು ಹೋದಾಗ, ಆಗಲೇ ಸಂನ್ಯಾಸಿಯ ವೇಷದಲ್ಲಿರುವ ತೇಜಸ್ವಿನಿಯೆಂದು ಭಾಮನು

ನಿಗೆ ತಿಳಿಯುತ್ತದೆ. ಅವನ ಪಶ್ಚಾತ್ತಾಪದ ಪರಮಾವಧಿಯನ್ನು ಕಂಡು ತೇಜಸ್ವಿನಿಯೂ ಕರಗಿ, ಅವನನ್ನು ಕ್ಷಮಿಸುತ್ತಾಳೆ.

೧೦ ಇತ್ತ ತನ್ನ ಅಂತಃಪುರದಲ್ಲಿ ಅಂಬಿಕೆ ಭಾನುರಾಜನ ನಾಮೋಚ್ಚಾರ ಮಾಡುತ್ತ, ವಿರಹತಪ್ತೆಯಾಗಿದ್ದಾಳೆ. ಆಗ, ಅಲ್ಲಿಗೆ ತೇಜಸ್ವಿನಿಯ ಕರುಣೆಯಿಂದ ಕಣ್ಣು ಹೋದ ಭಾನು ಬರುತ್ತಾನೆ. ಅಜ್ಞಾನ ಕಷ್ಟಕ್ಕೆ ಕಾರಣವೇನೆಂದು ಅಂಬಿಕೆ ಕೇಳಿ ತಿಳಿಯುತ್ತಾಳೆ. ಮೈಸೂರಿನವರ ಮೇಲೆ ಅವನಿಗಿರುವ ತೀವ್ರವಾದ ವೈರವನ್ನು ತಪ್ಪಿಸಲು ಯತ್ನಿಸುತ್ತಾಳೆ. ಕಡೆಗೆ, ತಂಗಿಯ ಪ್ರಾರ್ಥನೆಗಳಿಗೆ ಕಟ್ಟುಬಿದ್ದು, ತಾನಾಗಿ ಮೈಸೂರಿನವರ ಮೇಲೆ ಕೈ ಮಾಡುವುದಿಲ್ಲವೆಂದು ನಂಬಿಸುತ್ತಾನೆ. ಅಷ್ಟು ಹೊತ್ತಿಗೆ ಓಬಳರಾಯನಿಂದ ಮೈಸೂರಿನ ಸುದ್ದಿ ತಿಳಿದುಬರುತ್ತದೆ: ಆ ದಿವಸ ಬಿದ್ದ ಸಿಡಿಲಿಗೆ ಸಿಕ್ಕಿ ಭಾನುನಾಯಕನ ತಮ್ಮನಾದ ಚಂದ್ರನು ಬಲಿಯಾದನಂತೆ. ಆ ಸುದ್ದಿಯನ್ನು ಕೇಳಿ ಭಾನುವು ತಾನು ತಂಗಿಗೆ ಮಾಡಿದ ವಾಗ್ದಾನವನ್ನು ಮರೆತು, ಮೈಸೂರಿನ ಮೇಲೆ ಜೈತ್ರಯಾತ್ರೆಗೆ ಆಜ್ಞೆ ಮಾಡುತ್ತಾನೆ.

೧೧. ಮೈಸೂರಿನ ಸೈನ್ಯಾಧಿಪತಿಯ ಮನೆಯಲ್ಲಿ ಯುದ್ಧಕ್ಕೆ ಬೇಕಾದ ಮಂತ್ರಾಲೋಚನೆ ನಡೆಯುತ್ತಿರುತ್ತದೆ. ಆಗ ಶ್ರೀಮದಾನಂದ ಸಂನ್ಯಾಸಿ ಬಂದು, ನಾಡಿದ್ದಿನ ದಿನಕ್ಕೆ ಶತ್ರುಸೈನ್ಯ ಬರುವುದೆಂದು ತಿಳಿಸಿ ಹೋಗುತ್ತಾನೆ.

೧೨. ಅದುವರೆಗೆ ಮೈಸೂರಿಗೂ ಕೋರೆಮಾವಿನಹಳ್ಳಿಗೂ ಯುದ್ಧವನ್ನು ಏರ್ಪಡಿಸಲು ಹವಣಿಸಿದ ಶ್ರೀಮದಾನಂದಸಂನ್ಯಾಸಿಗೆ ಈಗ ಪರಿತಾಪವುಂಟಾಗಿದೆ. ಹಗೆ ತೀರಿಸಿಕೊಳ್ಳುವ ಕಾತರ ಕಡಿಮೆಯಾಗಿದೆ.

೧೩. ಯುದ್ಧವನ್ನು ನಿಲ್ಲಿಸಬೇಕೆಂದು ಅಂಬಿಕೆ ತವಕಪಡುತ್ತಿದ್ದಾಳೆ. ಆದರೆ, ಭಾನುವು ಅವಳಿಗೆ ಮುಖ ತೋರಿಸದೆ ತಪ್ಪಿಸಿಕೊಳ್ಳುತ್ತಿದ್ದಾನೆ. ತಾನೇ ಏನಾದರೂ ಪ್ರಯತ್ನ ಮಾಡಿ, ಯುದ್ಧ ನಿಲ್ಲಿಸುವಂತೆ ಮೈಸೂರಿನ ಅರಸರನ್ನು ಬೇಡುವುದಕ್ಕೆ ಪುರುಷವೇಷದಲ್ಲಿ ಹೋಗಬೇಕೆಂದು, ಅಂಬಿಕೆ ಭಾನುನಾಯಕನ ಉಡುಪನ್ನು ಧರಿಸಿಕೊಳ್ಳುತ್ತಾಳೆ.

೧೪. ಕೋರೆಮಾವಿನ ಹಳ್ಳಿಯ ದುರ್ಗದ ದ್ವಾರದ ಹೊರಗೆ ಮೈಸೂರಿನ ಸೈನಿಕರು ಕಾದಿದ್ದು, ಹೊತ್ತುಹೋಗಲು ಹಾಡುತ್ತ ವಿನೋದಪಡಿಸುವಾಗ, ಕೋಟೆಯ ಬಾಗಿಲು ತೆರೆಯುವ ಪ್ರಯತ್ನವಾಗುವುದು. ಸೈನಿಕರು

ಯುವರಾಜನಿಗೆ ಆ ಸುದ್ದಿ ಕೊಡುವರು. ಯುವರಾಜನು ಬಂದು, ಬಾಗಿಲನ್ನು
ತೆಗೆದುಹಾಕುವುದಕ್ಕೆ ಸಹಾಯ ಮಾಡಿ, ಹೊರಗೆ ಬಂದ ಪುರುಷವೇಷದ
ವ್ಯಕ್ತಿ ತನ್ನ ಅಂಬಿಕೆಯೆಂದು ಅರಿಯುವನು. ಮೂರ್ಛಿತೆಯಾದ ಅಂಬಿಕೆ
ಯನ್ನು ತನ್ನ ತಂದೆಯ ಪಾದಕ್ಕೆ ಒಪ್ಪಿಸಲು ಎತ್ತಿಕೊಂಡು ಹೋಗುವನು.

೧೫. ಮೈಸೂರಿನ ಸೈನ್ಯದ ಶಿಬಿರದಲ್ಲಿ ಮಹಾರಾಜರು ಮಂತ್ರಿಯೊ
ಡನೆ ಮಾತನಾಡುತ್ತಿರುವಾಗ ಯುವರಾಜನು ಅಂಬಿಕೆಯನ್ನು ಎತ್ತಿಕೊಂಡು
ಬರುತ್ತಾನೆ. ಎಚ್ಚರಗೊಂಡ ಮೇಲೆ ಅಂಬಿಕೆಯು ಯುದ್ಧವನ್ನು ನಿಲ್ಲಿಸುವಂತೆ
ದೊರೆಯನ್ನು ಪ್ರಾರ್ಥಿಸುತ್ತಾಳೆ. ಅರಸರು ತಮ್ಮ ಅಸಹಾಯತೆಯನ್ನು
ಸೂಚಿಸಿ ಅಂಬಿಕೆಯನ್ನು ವಾತ್ಸಲ್ಯದಿಂದ ಸಂತೈಸುತ್ತಾರೆ.

೧೬. ಯುದ್ಧದಲ್ಲಿ ಎರಡೂ ಕಡೆ ಆದ ಸಾವುಗಳಿಂದ ಶ್ರೀಸದಾನಂದ
ಸಂನ್ಯಾಸಿ ವಿಹ್ವಲನಾಗಿಹೋಗಿದ್ದಾನೆ. ಅಷ್ಟರಲ್ಲಿ ಭಾಮನಿಗೂ ಯುವರಾಜ
ಬೆಟ್ಟದ ಚಾಮರಾಜನಿಗೂ ದ್ವಂದ್ವಯುದ್ಧ ಆಗುವುದನ್ನು ಕಂಡು, ಅದನ್ನು
ತಪ್ಪಿಸಬೇಕೆಂದು ಧಾವಿಸುತ್ತಾನೆ.

೧೭. ಕೋಟೆಮಾದಿನಹಳ್ಳಿಯ ದುರ್ಗದ ಒಳಗೆ ಭಾಮನಾಯಕನು
ವಿಜಯಪ್ರಯಾಣದ ಮುಹೂರ್ತವನ್ನು ನಿರೀಕ್ಷಿಸುತ್ತಿದ್ದಾನೆ. ತನ್ನ ತಂದೆಯ
ದುಃಖಕ್ಕಾಗಿ ಮರುಗುತ್ತಿದ್ದಾನೆ. ಅಂಬಿಕೆಯು ಚಾಮರಾಜನಿಗೆ ಸೆರೆಯಾದಾ
ಳೆಂದು ಭ್ರಮಿಸಿ ಅಸ್ವಸ್ಥನಾಗಿದ್ದಾನೆ. ತನ್ನ ಜೀವನವು ವ್ಯರ್ಥವಾಯಿತೆಂದು
ಆತ್ಮಹತ್ಯೆಗೆ ಉದ್ದೇಶಿಸಿದ್ದಾನೆ. ಆದರೂ ಕ್ಷತ್ರಿಯನಂತೆ ಚೇತರಿಸಿಕೊಂಡು,
ಸೈನಿಕರನ್ನು ವೀರವಾಕ್ಯಗಳಿಂದ ಪ್ರೋತ್ಸಾಹಗೊಳಿಸುತ್ತಾನೆ.

೧೮. ಯುದ್ಧದಲ್ಲಿ ವಿಜಯವನ್ನು ಪಡೆದಿರುವ ಯುವರಾಜನ ಕಿವಿಗೆ
ಯುದ್ಧರಂಗದಲ್ಲಿ ಯಾವುದೋ ಕ್ಷೀಣಕಂಪಿತಸ್ವರ ಕೇಳಿಬರುತ್ತದೆ. ಅದು
ಯಾರೆಂದು ಹೋಗಿ ನೋಡಿದರೆ, ಅಂಬಿಕೆಯದು. ಅಣ್ಣನು ಯುದ್ಧ ಮಾಡು
ವುದನ್ನು ನೋಡಬೇಕೆಂದು ಗುಡಾರದಿಂದ ಬಂದವಳು ಗಾಯಪಟ್ಟು ಬಿದ್ದಿ
ದ್ದಾಳೆ, ಚಾಮರಾಜನ ತೋಳುಗಳಲ್ಲಿ ಆಕೆ ಮರಣಹೊಂದುತ್ತಾಳೆ. ಅಷ್ಟು
ಹೊತ್ತಿಗೆ, ತನ್ನ ಹತಭಾಗ್ಯವನ್ನು ಹಳಿಯುತ್ತ ಬಂದ ಭಾಮನು ಚಾಮ
ರಾಜನನ್ನು ಕಂಡು ಕ್ರೋಧಗೊಂಡು, ತಂಗಿಯ ಸಾವಿನಿಂದ ಶೋಕ ಕೆರಳಿ,
ಚಾಮರಾಜನನ್ನು ಮೂದಲಿಸಿ ಯುದ್ಧಕ್ಕೆ ಕರೆಯುತ್ತಾನೆ. ಮೃತಳಾದ

ಅಂಬಿಕೆಯು ಮುಂದೆ ಕಾದಾಡುವುದು ಸಲ್ಲದೆಂದು ಯುವರಾಜನು ಭಾನುವನ್ನು ಬೇರೆ ಸ್ಥಳಕ್ಕೆ ಕರೆದೊಯ್ಯುತ್ತಾನೆ.

೧೯. ರಣರಂಗದ ಮತ್ತೊಂದು ಕಡೆ ಭಾನುವು ಖಡ್ಗ ನಾಟಿ ಬಿದ್ದಿದ್ದಾನೆ. ಭಾನುವನ್ನು ತಾನು ಸಂಹರಿಸಿದೆನೆಂದು ಸ್ಪರ್ಧೆಪಡುತ್ತ ಯುವರಾಜನು ಅಂಬಿಕೆಯು ಇರುವ ಕಡೆಗೆ ಹೋಗುತ್ತಾನೆ. ಇತ್ತ, ಭಾನುವು ಇನ್ನೂ ಗತಪ್ರಾಣನಾಗಿಲ್ಲ. ಆ ವೇಳೆಗೆ ಶ್ರೀಮದಾನಂದ ಸಂನ್ಯಾಸಿ ಅಲ್ಲಿಗೆ ಬರುತ್ತಾನೆ. ಅವನ ಕರುಣೆ ಭಾನುವಿಗೆ ವಿಷಪ್ರಾಯವಾಗಿದೆ. ಆ ಸಂನ್ಯಾಸಿಯು ವೇಷವನ್ನು ಕಿತ್ತೊಗೆದು ತೇಜಸ್ವಿನಿ ಹಿಂದಿನಂತೆ ಸುಂದರಿಯಾಗಿರುವುದನ್ನು ನೋಡಬೇಕೆಂದು ಅವನ ಕಡೆಯ ಆಸೆ. ಅವನ ಕಾಮುಕತೆಯನ್ನು ಕಳೆಯಬೇಕೆಂದು ತೇಜಸ್ವಿನಿ ಪ್ರಯತ್ನಿಸುತ್ತಿರುವಾಗಲೇ, ವೃದ್ಧ ವೆಂಕಟಾದ್ರಿ ನಾಯಕನು ಬರುವುದನ್ನು ಕೇಳಿ, ತಂದೆಯ ಮುಖವನ್ನು ನೋಡಲಾರದೆ, ಭಾನುವು ನಟ್ಟ ಖಡ್ಗವನ್ನು ಕಿತ್ತು ಸಾಯುತ್ತಾನೆ. ವೃದ್ಧನ ಪುತ್ರಶೋಕವನ್ನು ನೋಡಲಾರದೆ, ತೇಜಸ್ವಿನಿ ಕಣ್ಮರೆಯಾಗುತ್ತಾಳೆ.

೨೦. ತೊರೆಮಾವಿನಹಳ್ಳಿಯ ಪ್ರಭುತ್ವವನ್ನು ವೈಕುಂಠನಿಗೆ ಒಪ್ಪಿಸಿಕೊಟ್ಟು, ತೊರೆಮಂಡನಾಥನು ಇತರರ ಕೈಕೆಳಗೆ ಆಯುಧ ಹಿಡಿಯಲು ಒಪ್ಪದೆ, ನಿರ್ಜನಾರಣ್ಯದಲ್ಲಿ ಸಂನ್ಯಾಸಿಯಾಗಿ ಬದುಕಲು ಹೋಗುತ್ತಾನೆ.

೨೧. ವೈಕುಂಠನ ದೊರೆ, ತೊರೆಮಾವಿನಹಳ್ಳಿಯ ಪ್ರಭುತ್ವವನ್ನು ಸೋತವರ ಮನಸ್ಸುಗಳಿಗೆ ನೋವಾಗದ ರೀತಿಯಲ್ಲಿ ನಡೆಸಿಕೊಳ್ಳುತ್ತಾನೆ.

೩. "ಬೆಟ್ಟದ ಅರಸು" ನಾಟಕದ ಕಥೆ

ದೊರೆಯಾದ ಚಾಮರಾಜನ ಸೌಜನ್ಯವನ್ನೂ ದಳವಾಯಿ ಬೆಟ್ಟದ ಅರಸುವಿನ ಸಜ್ಜನಿಕೆಯನ್ನೂ ದುರುಪಯೋಗಪಡಿಸಿಕೊಂಡು ಧೂರ್ತರಾಗಿದ್ದ ಹಳೆಯ ಪಕ್ಷದವರನ್ನು ನಿರ್ವೀರ್ಯರನ್ನಾಗಿ ಮಾಡಿ ನಿಗ್ರಹಿಸುವುದಕ್ಕೆ ಸಮರ್ಥನೊಬ್ಬನು ಬೇಕಾಗಿತ್ತು. ಅಂತಹವನಾದ ವಿಕ್ರಮರಾಯನಿಗೆ ತೆರವು ಮಾಡಿಕೊಡುವುದಕ್ಕೆ, ತನ್ನ ಮಿತಿಯಿಲ್ಲದ ಧರ್ಮಬುದ್ಧಿಯೇ ತನಗೆ ದುರ್ಬಲತೆಯಾಗಿ ಪರಿಣಮಿಸಿದ ಬೆಟ್ಟದ ಅರಸು ಬಲಿಯಾಗಬೇಕಾಯಿತು. ಬೆಟ್ಟದ ಅರಸುವಿನ ದುರಂತ ಈ ನಾಟಕದ ವಸ್ತು.

೧. ಅರಮನೆಗೆ ಸೇರಿದ ವಿಲಾಸದ ತೊಟ್ಟಿಯವರು, ಮಹಾರಾಣಿಯನ್ನು ಅಪಮಾನಪಡಿಸಲು ಯತ್ನಿಸಿದಾಗ ದಳವಾಯಿ ಬೆಟ್ಟದ ಅರಸು ಬಂದು ರಕ್ಷಿಸುತ್ತಾನೆ. ದೊರೆಗೆ ಈ ಸಂಗತಿ ತಿಳಿದರೂ ಅಪರಾಧಿಗಳು ನಿರ್ಭೀತಿಯಿಂದಿದ್ದಾರೆ. ಅರಮನೆಯಲ್ಲಿ ಕಟ್ಟುಪಾಡು ಅಷ್ಟು ಶಿಥಿಲವಾಗಿ ಹೋಗಿದೆ. ತಿರಕಣಾಂಬಿಯಿಂದ ಬಂದ ರಣಧೀರನೂ ವಿಕ್ರಮರಾಯನೂ ಈ ದೌರ್ಬಲ್ಯವನ್ನು ಕಂಡುಕೊಳ್ಳುತ್ತಾರೆ.

೨. ವಿಲಾಸದವರ ಕೈಯಿಂದ ತನ್ನ ಪತಿಯನ್ನು ಉಳಿಸಿಕೊಳ್ಳುವುದು ಹೇಗೆಂದು ರಾಣಿ ಚಿಂತಿಸುತ್ತಿರುವಾಗ; ರಣಧೀರನು ಯುವರಾಜನೊಡನೆ ಮಹಾಮಾತೃಶ್ರೀಯವರನ್ನು ಸಂದರ್ಶಿಸುವನು. ಅಲ್ಲಿಗೆ ವಿಕ್ರಮರಾಯನೂ ಅತಿಕ್ರಮ ಪ್ರವೇಶ ಮಾಡುವನು.

೩. ರಾಜಸಭೆಯಲ್ಲಿ ಹಳೆಯ ಪಕ್ಷದವರು ಸಭಾಮರ್ಯಾದೆಗಳನ್ನು ಮರೆತು, ಲಾಘವದಿಂದಿರುವುದು ರಣಧೀರನಿಗೆ ಸಹನೆಯಾಗದೆ, ಅವನು ಅವರಿಗೆ ಬುದ್ಧಿ ಕಲಿಸಿ, ಅವರು ವಿಧೇಯರಾಗುವರು. ದೊರೆ, ರಾಜಸಭೆಗೆ ಬಂದ ಪ್ರಜೆಗಳ ಸುಖದುಃಖಗಳನ್ನು ವಿಚಾರಿಸುವರು. ರಾಜ್ಯದ ರಕ್ಷಣೆಗೆ ಬೇಕಾದ್ದನ್ನು ಆಜ್ಞೆ ಮಾಡುವರು. ಆದರೂ ದೊರೆಯ ಹೃದಯ ವಿರಾಗಕ್ಕೇ ಒಲಿದಿದೆ.

೪. ಈ ವೇಳೆಗೆ ವಿಕ್ರಮರಾಯ ಅರಮನೆಯ, ಅರಮನೆಯವರ ಗುಟ್ಟುಗಳನ್ನೆಲ್ಲಾ ಅರಿತುಕೊಂಡು, ಗುರಿಕಾರನಾದ ಲಿಂಗಣ್ಣನನ್ನು ತನ್ನ ಕೈಗೊಂಬೆ ಮಾಡಿಕೊಂಡು, ಸಾಕ್ಷಾತ್ ಮಹಾಮಾತೃಶ್ರೀ ಅವರನ್ನೇ ನಿರ್ಲಕ್ಷ್ಯದಿಂದ ಮೂದಲಿಸಿ ಮಾತನಾಡುವಷ್ಟು ಮಟ್ಟಿಗೆ ಆಗಿದ್ದಾನೆ.

೫. ದೊರೆಯ ಆಜ್ಞೆಯಂತೆ ಕೋಟೆಯ ಯುದ್ಧಕ್ಕೆ ಹೋದ ಲಿಂಗಣ್ಣ, ತನ್ನ ಕರ್ತವ್ಯವನ್ನು ನಡೆಸುವುದರಲ್ಲಿ, ವಿಕ್ರಮರಾಯನು ಕಳಿಸಿದ ಒಂದು ಸುಳ್ಳು ಓಲೆಯಿಂದ, ಕರ್ತವ್ಯಭ್ರಷ್ಟನಾಗುತ್ತಾನೆ.

೬. ಮಹಾಪ್ರಧಾನರಾಗಲೀ ಮಾತೃಶ್ರೀಯವರಾಗಲೀ ದೊರೆಯ ಬುದ್ಧಿಯನ್ನು ತಿದ್ದಬೇಕೆಂದು ಹೆಣಗಾಡಿದವರೂ ಹಳೆಯ ಮಂತ್ರಿಯವರೂ ವ್ಯರ್ಥವಾಗಿ ಶ್ರಮಪಡುತ್ತಾರೆ. ಆದರೆ ದೊರೆಯೂ ಯುವರಾಜನೂ ತಮ್ಮ ಅಂತಃಸತ್ತ್ವದಿಂದ ಪತಿತರಾಗದೆ ಉಳಿದಿದ್ದಾರೆ. ದೈವ ಸಂಕಲ್ಪದಿಂದ ಹಳೆಯ ಸೇವಕನ ದ್ರೋಹ ದೊರೆಗೆ ಗೊತ್ತಾಗುತ್ತದೆ.

೭. ವಿಲಾಸದ ಬಣ್ಣ ಸಿಂಗಾರವನ್ನು ದೊರೆಯ ಮೇಲೆ ಅತಿ ಘೋರವಾದ ಅಪಾದನೆ ಹೊರಿಸಿ, ತನ್ನ ಬೊಕ್ಕಸವನ್ನು ತುಂಬಿಕೊಂಡಾಗ, ದೊರೆಗೆ ಆ ಮಂತ್ರಕ್ಕನ ದ್ರೋಹವೆಲ್ಲ ಮನವರಿಕೆಯಾಗಿ, ಅದಕ್ಕೆ ಬೇಕಾದ ಪರಿರಕ್ಷೆಗಳನ್ನು ಸಿದ್ಧಪಡಿಸಿ ದೇವರಾಣೆ ಬೆಟ್ಟದ ಅರಸಿನ ನ್ಯಾಯವನ್ನು ಬಯಸುತ್ತಾರೆ. ಹಳೆಯ ಮಂತ್ರಿಯವರ ಪ್ರಾಣಬಲಿ ತಗ್ಗಬಹುದೆಂದು ಸೂಚನೆ ಬರುತ್ತದೆ.

೮. ಹಳೆಯ ಮಂತ್ರಿಯವರ ದ್ರೋಹವನ್ನು ತಿಳಿದುಕೊಂಡು, ವಿಕ್ರಮರಾಯನು ಆಸನವೆಲ್ಲ ತನ್ನ ಕೈವಶ ಮಾಡಿಕೊಂಡಿದ್ದಾನೆ. ಅದನ್ನು ತನ್ನ ಕಾರ್ಯಗಳಿಗೆ ಕೂಡಿಕೊಂಡು, ದೊರೆಯ ರಕ್ಷಕರನ್ನು ಕೂಡ ಎತ್ತಿಹಾಕಲು ಹೊರಡುತ್ತಾನೆ.

೯. ತನ್ನ ಸಹಾಯಕರಾರೂ ತನ್ನ ಕರ್ತವ್ಯಪಾಲನೆಗೆ ಸಹಕಾರ ಮಾಡುತ್ತಿಲ್ಲವೆಂದು ಬೆಟ್ಟದ ಅರಸು ಅಸಮಾಧಾನದಿಂದ ತ್ರಿಶೂಲಧಾರಿಯಾಗಿ, ನಿಂತು ತಾವು ಹಿಂದಿನ ದಿವಸ ಮಾಡಿದ ಆಜ್ಞೆಗಳು ಬದಲಾಗಿ, ಪುನಃ ಹಳೆಯ ಮಂತ್ರಿಯವರು ಪ್ರಬಲರಾದರೆಂದು ಕೇಳಿ ಪಿಸುಗುಡುತ್ತಾನೆ. ಆದರೆ ಈಗ ಪ್ರಮಾದದಿಂದ

ಸ್ವೈರಣಿಗೆಟ್ಟು ದೊರೆಗೆ ಸಾವನ್ನು ಬಯಸುತ್ತಾನೆ. ಅದು ಅಂತಃಪುರಕ್ಕೂ ಹಳೆಯ ಪಯ್ಯದವರಿಗೂ ವಿಕ್ರಮರಾಯನಿಗೂ ತಿಳಿಯುತ್ತದೆ.

೧೦. ಅದನ್ನೇ ನೆಪ ಮಾಡಿಕೊಂಡು, ಪಟ್ಟದ ಅರಸರನ್ನು ದಳವಾಯಿತನದಿಂದ ನಿವೃತ್ತಿಮಾಡಿ ಶಿಕ್ಷಿಸಬೇಕೆಂದು ವಿಕ್ರಮರಾಯ ನಿರ್ಧರಿಸಿ, ಅದಕ್ಕೆ ಬೇಕಾದ ಏರ್ಪಾಟುಗಳನ್ನು ನಡೆಸುತ್ತಾನೆ.

೧೧. ರಾಜನ ವಿಲಾಸಗೋಷ್ಠಿಯಲ್ಲಿ ದಳವಾಯಿಯ ದ್ರೋಹದ ಪ್ರಸ್ತಾಪ ಬಂದರೂ, ದೊರೆಗೆ ಆ ಮಾತಿನಲ್ಲಿ ನಂಬಿಕೆಯಿಲ್ಲ. ಆದರೆ ಹಳೆಯ ಪಯ್ಯದವರು ಪಟ್ಟದ ಅರಸುವನ್ನು ಇಳಿಸಿ, ವಿಕ್ರಮರಾಜಯ್ಯನನ್ನು ವಹಿಸಿಕೊಂಡು ಮಾತನಾಡಿದ್ದರಿಂದ ದೊರೆಗೆ ಇನ್ನಷ್ಟು ಶಂಕೆ ಬಲಿಯುತ್ತದೆ. ಹಳೆಯ ಪಯ್ಯದವರ ಮಾತಿಗೆ ಬೆಲೆಯಿಲ್ಲವಾಗುತ್ತದೆ.

೧೨. ವಿಕ್ರಮರಾಯನು ದೊರೆಯ ಹೆಸರಿನಲ್ಲಿ ಒಂದು ಸುಳ್ಳು ರಾಯಸವನ್ನು ಸೃಷ್ಟಿಸಿ, ಅದರ ಬಲದಿಂದ ದಳವಾಯಿಯನ್ನು ಬಂಧಿಸಿ, ಅವನಿಗೆ ಭಾಂಡಕಪೂರದ ಶಿಕ್ಷೆಯನ್ನು ವಿಧಿಸುವನು.

೧೩. ಬೊಮ್ಮರಸನ ಔಷಧಪ್ರಯೋಗದಿಂದ ದೊರೆಗೆ ದೇಹಾಲಸ್ಯವುಂಟುಮಾಡಿ, ಆ ದಿನದ ರಾಜಸಭೆಗೆ ವಿಕ್ರಮರಾಯ ತಾನೆ ಸರ್ವಪ್ರವರ್ತಕನಾಗಿ, ಪಟ್ಟದ ಅರಸುವನ್ನೂ ಆತನವರನ್ನೂ ದ್ರೋಹಿಗಳೆಂದು ಸಾರಿ, ಅವರಿಗೆ ಪ್ರಾಣಾಂತ ಶಿಕ್ಷೆಯನ್ನು ವಿಧಿಸುವನು.

೧೪. ವಿಕ್ರಮರಾಯನ ರಾಜದ್ರೋಹಗಳಿಗೆ ಬೇಸತ್ತ ಲಿಂಗಣ್ಣಯ್ಯನು ಅವನನ್ನು ಕೊಂದುಬಿಡಬೇಕೆಂದು ಬಂದು, ವಿಕ್ರಮನ ಆಶ್ರಿತನಾದ ತುಂಗರಾಯನ ಮಾತುಗಳಿಂದ ಮೋಹಿತನಾಗಿ, ವಿಕ್ರಮನಿಗೆ ತಾನು ಸಂಪೂರ್ಣ ವಶನಾಗಿಬಿಡುತ್ತಾನೆ. ವಿಕ್ರಮನ ಅನುಗ್ರಹದಿಂದ, ಅದುವರೆಗೆ ಸೇನಾಪತಿಯಾಗಿದ್ದ ಲಿಂಗಣ್ಣನು ಅಂದಿನಿಂದ ಪಟ್ಟದ ಅರಸುವಿಗೆ ಬದಲಾಗಿ ತಾನು ದಳವಾಯಿ ಆಗುತ್ತಾನೆ.

೪. 'ವಿಗಡ ವಿಕ್ರಮರಾಯ' ನಾಟಕದ ಕಥೆ.

ಸನ್ಮಾರ್ಗಿಯಾದ ಒಬ್ಬ ದಳವಾಯಿ—ಬೆಟ್ಟದ ಅರಸು—ಹಾಗೆ ಅನ್ಯಾಯದಿಂದ ಪದಚ್ಯುತನಾಗಿ ಕಣ್ಣುಗಳನ್ನು ಕಳೆದುಕೊಂಡರೆ, ದುರ್ಮಾರ್ಗಿಯಾದ ಇನ್ನೊಬ್ಬ ದಳವಾಯಿ ವಿಕ್ರಮರಾಯ—ತನ್ನಂತಹ ವೀರನಿಗೆ ಉಚಿತವಲ್ಲದ ರೀತಿಯಲ್ಲಿ ಕಗ್ಗೊಲೆಯಾದ ನ್ಯಾಯ ಈ ನಾಟಕದಲ್ಲಿ ಚಿತ್ರಿತವಾಗಿದೆ. ಹಿಂದಿನ ನಾಟಕದಲ್ಲಿ ಅರಸುವಿನ ಪತನವೂ ವಿಕ್ರಮರಾಯನ ಉದಯವೂ ಚಿತ್ರಿತವಾದಂತೆ—ಈ ನಾಟಕದಲ್ಲಿ ವಿಕ್ರಮರಾಯನ ಪತನವೂ ಅವನಂತಹ ಉದ್ವೃತ್ತರನ್ನು ದಮನಮಾಡಿ ಮೈಸೂರಿನಲ್ಲಿ ರಾಜ್ಯಭಾರದ ಸ್ಥಿರತೆಯನ್ನು ಸಾಧಿಸಲು ತೊಡಗಿದ ಕಂಠೀರವನ ಉದಯವೂ ಚಿತ್ರಿತವಾಗಿದೆ.

ಮೊದಲನೇ ಪ್ರವೇಶ ಪ್ರಾರಂಭವಾಗುವ ವೇಳೆಗಾಗಲೇ—ಇಮ್ಮಡಿ ರಾಜ ಒಡೆಯರು ವಿಕ್ರಮರಾಯನು ಇಲ್ಲದಿದ್ದ ಸಮಯವನ್ನು ಸಾಧಿಸಿ, ಕರಣಿಕರ ಚಾವಡಿಗೆ ಬಂದು, ಅಲ್ಲಿನ ರಾಜ್ಯಾದಾಯವ್ಯಯಗಳ ಮುಖ್ಯ ಲೆಕ್ಕಪತ್ರಗಳನ್ನೆಲ್ಲಾ ಪರಾಂಬರಿಸಿ, ಅರ್ಥಮಾಡಿಕೊಂಡು ಹೋಗಿದ್ದಾರೆ.

೧. ಸ್ವಾಮಿಯಾದ ತನಗೆ ಕರಣಿಕರು ಮಾಡಿದ ದ್ರೋಹಕ್ಕಾಗಿ ವಿಕ್ರಮರಾಯನು ಅವರನ್ನು ದಂಡಿಸುತ್ತಾನೆ. ಆ ಹೊತ್ತಿಗೆ ಸ್ವತಃ ಮಹಾರಾಜರು ತಾವೇ ಅಲ್ಲಿಗೆ ಬಂದು, ವಿಕ್ರಮರಾಯನ ಅವಿನಯವನ್ನು ಎಂದಿನಂತೆ ಸಹಿಸದೆ, ಮರುದಿನ ಪ್ರಾತಃಕಾಲದ ರಾಜಸಭೆಯಲ್ಲಿ ಲೆಕ್ಕಪತ್ರಗಳನ್ನು ತಂದೊಪ್ಪಿಸಬೇಕೆಂದು ಆಜ್ಞೆ ಮಾಡಿ ಹೋಗುತ್ತಾರೆ. ಗುಪ್ತವಾದ ಲೆಕ್ಕಪತ್ರಗಳನ್ನು ನಾಶಪಡಿಸುವಂತೆ ದಳವಾಯಿ ಕರಣಿಕರಿಗೆ ಆಜ್ಞೆ ಮಾಡುತ್ತಾನೆ.

೨. ರಾಜರಾದ ತಾವು ರಾಜ್ಯವಾಳಬೇಕೆಂಬ ಸದ್ಬುದ್ಧಿ ಉಂಟಾದ ಮಹಾರಾಜರು ತಮ್ಮ ಅರಮನೆಯ ಶೃಂಗಾರವಿಲಾಸದ ನಾಟ್ಯಶಾಲೆಯ ಅಪ್ಸರೆಯರನ್ನೆಲ್ಲಾ ಉಚಿತ ಪರಿಹಾರದಾನದಿಂದ ವಿಸರ್ಜಿಸುತ್ತಾರೆ. ಮಹಾರಾಜರ ತಾಯಿ ಮಗನ ಉದ್ಧಾರಕ್ಕೆ ಸಂಭ್ರಮಿಸಿ ಅಲ್ಲಿಗೆ ಬರುತ್ತಾರೆ. ಮಹಾ

ರಾಜರು ದೇಹಾಯಾಸದಿಂದ ಮಲಗುತ್ತಾರೆ. ತಾಯಿ ವೈದ್ಯನಿಗೆ ಹೇಳಿ ಕಳಿಸುತ್ತಾರೆ.

೩. ತನ್ನ ಮೋಸಗಳು ಬಯಲಾಗಬಹುದೆಂಬ ಭಯದಿಂದ ವಿಕ್ರಮರಾಯನು ರಾಜರನ್ನು ಕೊಲ್ಲಿಸಬೇಕೆಂದೂ, ಅನಂತರ ತಾನು ಆಳಿ, ಕಂಠೀರವ ನರಸರಾಜನನ್ನು ಪಟ್ಟಕ್ಕೆ ತರಬೇಕೆಂದೂ ನಿಶ್ಚಯಿಸುತ್ತಾನೆ. ಅದರಂತೆಯೇ ತನ್ನ ನಿಶ್ಚಯವನ್ನು ನೆರವೇರಿಸಬೇಕೆಂಬ ತೀರ್ಮಾನದಿಂದ, ಮಹಾರಾಜರು ಮೃತರಾದರೆಂದು [illegible] ಪತ್ರ ಬರೆದು, ತುಂಗರಾಯನನ್ನು ಅಟ್ಟುತ್ತಾನೆ. ಅನಂತರ, ಅರಮನೆಗೆ ಹೊರಟಿದ್ದ ವೈದ್ಯ ಬೊಮ್ಮರಸನನ್ನು ಕರೆದು, ಹಾವಿನ ರಾಜಬೆಗ್ಗರದಿಂದ ತೆಗೆದ ಜೀವಘಾತಿಯನ್ನು ಅವನಲ್ಲಿ ಇತ್ತು ಬೇಡಿ, ಮಹಾರಾಜರಿಗೆ ವಿಷ ಕೊಡುವಂತೆ ಪ್ರೇರಿಸಿ, ಅವನನ್ನು ಒಪ್ಪಿಸುತ್ತಾನೆ. ಬೊಮ್ಮರಸನ ವಿಷಪ್ರಯೋಗದಿಂದ ಮಹಾರಾಜರು ಮೃತರಾದೊಡನೆ ತಾನು ಹೋಗಿ, ಅರಾಜಕವಾದ ರಾಜ್ಯವನ್ನು ಕೈಕೊಳ್ಳಲು ಸಿದ್ಧನಾಗುತ್ತಾನೆ.

೪. ವಿಕ್ರಮರಾಯನ ಆತ್ಮ ಹನನಾದಿರ ಭೀತಿಭೂತಕ್ಕೆ ಬಲಿಯಾಗಿ, ಬೊಮ್ಮರಸನು ಮಹಾರಾಜರಿಗೆ ವಿಷಕೊಡುತ್ತಾನೆ. ಅವನ ಸಗುಣ ಕೃತಿಗಳಿಂದ ಆ ಕಾರ್ಯವನ್ನು ಬಹುದೊಂದು, ರಾಜಮಾತೆ ತಾವೇ ಅದನ್ನು ಮಗನಿಗೆ ಕೈಯಾರೆ ಕುಡಿಸುತ್ತಾರೆ. ಮಹಾರಾಜರು ಮೃತರಾಗುತ್ತಾರೆ. ಆ ವೇಳೆಗೆ ವಿಕ್ರಮರಾಯನು ಬಂದು, ಅವನ ಪೌರಜನವನ್ನು ಕರೆದು, ರಾಜಚಿಹ್ನೆಗಳನ್ನು ಕೈಗೊಂಡು, ರಾಜ್ಯಾಡಳಿತ ಮಂತ್ರಾಲೋಚನೆಗೆ ತೊಡಗುತ್ತಾನೆ. ಅವನೊಡನೆ ಬಂದಿದ್ದ ಎಲ್ಲ ಬೊಮ್ಮರಸನನ್ನು ರಾಜಮಾತೆ ನಿಲ್ಲಿಸಿಕೊಂಡು, ಅವನನ್ನು ಭಯಗೊಳಿಸಲು, ವಿಕ್ರಮರಾಯನ ಆಜ್ಞೆಯ ಪ್ರಕಾರ ಮಹಾರಾಜರಿಗೆ ವಿಷವನ್ನು ಕೊಟ್ಟೆನೆಂದು ಬೊಮ್ಮರಸ ಒಪ್ಪಿಕೊಳ್ಳುತ್ತಾನೆ.

೫. ವಿಕ್ರಮರಾಯನು ಅಟ್ಟಿದ ಓಲೆಯನ್ನು ತಂದ ತುಂಗರಾಯನು ರಣಧೀರನ ಸನ್ನಿಧಿಗೆ ಬಂದು ಅದನ್ನು ಕೊಡುತ್ತಾನೆ. ರಣಧೀರನು ಆ ಓಲೆಯನ್ನು ಓದಿ ಕೇಳಿ, ಸಂದೇಹಗೊಂಡು, ತನ್ನ ತಂದೆಯ ಸಲಹೆಯನ್ನು ಪಡೆದು, ಮೈಸೂರಿಗೆ ಹೊರಡಲು ಸಿದ್ಧನಾಗುತ್ತಾನೆ. ರಣಧೀರನ

ನಚ್ಚಿನ ಒಡನಾಡಿಗಳಾದ ನಿರೀಶ, ಸತ್ಯವಂತಾದವರು ಮೈಸೂರಿನಲ್ಲಿ ತಮ್ಮ ರಣಧೀರನಿಗೆ ಏನು ಕೇಡು ಒದಗುವುದೋ ಎಂಬ ಶಂಕೆಯಿಂದ, ವೇಷ ಮರಸಿಕೊಂಡು ಹೋಗಿ ಅವನ ಸಹಾಯಕ್ಕೆ ಸನ್ನದ್ಧರಾಗಿರಬೇಕೆಂದು ನಿಶ್ಚಯಿಸಿಕೊಳ್ಳುತ್ತಾರೆ. ಈ ಗುಟ್ಟನ್ನು ಜನಮಲ್ಲನೊಬ್ಬನಿಗೆ ಮಾತ್ರ ತಿಳಿಸುವುದಿಲ್ಲ.

೬. ರಣಧೀರನು ತೆರಕಣಾಂಬಿಯಿಂದ ಮೈಸೂರಿಗೆ ಬಂದನೆಂಬುದನ್ನು ಕೇಳಿ, ರಾಜಮಾತೆ ತನ್ನ ಆಪ್ತೆಯರೊಡನೆ ಮೈಸೂರಿಗೆ ತೆರಳುತ್ತಾರೆ.

೭. ರಣಧೀರನ ಆಪ್ತರಾದ ನಿರೀಶಾದಿಗಳು ಮೈಸೂರಿಗೆ ಬಂದು, ರಣಧೀರನೆಂದರೆ ಮೈಸೂರಿನ ಪ್ರಜೆಗಳಿಗೆ ಎಷ್ಟು ಅಭಿಮಾನವೆಂಬುದನ್ನು ಕಿವಿಯಾರೆ ಕೇಳಿ ಸಂತೋಷಗೊಳ್ಳುತ್ತಾರೆ. ಅದೇ ಸಂದರ್ಭವನ್ನು ಉಪಯೋಗಿಸಿಕೊಂಡು, ನಿರೀಶನು, ತಮ್ಮ ಅಚ್ಚುಮೆಚ್ಚಿನ ರಣಧೀರನನ್ನು ಮೈಸೂರಿಗೆ ಬರಮಾಡಿಕೊಳ್ಳುವಾಗ ವಿಕ್ರಮರಾಯನು ಹೇಗೆ ಮೈಸೂರಲ್ಲಿ ನಿಲ್ಲದೆ ಕನ್ನಂಬಾಡಿಗೆ ಹೋದನೆಂದೂ, ರಣಧೀರನಿಗೆ ರಾಜಮರ್ಯಾದೆಯನ್ನು ತೋರಿಸದೆ ಕೈಸೆರೆಯ ಬಂದಿಯನ್ನು ಕರೆದೊಯ್ಯುವಂತೆ ಅವನನ್ನು ಒಯ್ದುದಿಂದೂ ವರ್ಣಿಸಿ ವರ್ಣಿಸಿ, ವಿಕ್ರಮರಾಯನ ಅನ್ಯಾಯಗಳಿಗೆ ಆ ಪ್ರಜೆಗಳು ರೋಸಿ ಕೆರಳುವಂತೆ ಮಾಡುತ್ತಾನೆ. ವಿಕ್ರಮರಾಯನ ದುರಧಿಕಾರವನ್ನು ನಾಶಮಾಡಬೇಕೆಂದು ಒದರಿ ಎದ್ದ ಪೌರರು ಅಜ್ಞಾತವೇಷದ ನಿರೀಶನನ್ನು ತಮ್ಮ ನಾಯಕನನ್ನಾಗಿ ಆರಿಸಿಕೊಳ್ಳುತ್ತಾರೆ.

೮. ಕನ್ನಂಬಾಡಿಗೆ ಹೋಗಿ, ಅಲ್ಲಿನ ಗೌಡರನ್ನು ದಂಡಿಸುತ್ತಿದ್ದ ವಿಕ್ರಮರಾಯನು—ಓಡಿಬಂದ ತುಂಗರಾಯನಿಂದ, ಮೈಸೂರಿನಲ್ಲಿ ನಡೆದ ವಿದ್ಯಮಾನಗಳನ್ನು ಕೇಳಿ, ಅದೇ ದಿನ ಸಂಜೆಯ ವೇಳೆಗೆ ಮೈಸೂರಿಗೆ ತಾನು ಬರುವೆನೆಂದೂ, ತನಗೆ ದ್ರೋಹಿಗಳಾದವರನ್ನು ಆ ಹೊತ್ತಿಗೆ ಶಿಕ್ಷಿಸಿರಬೇಕೆಂದೂ ಆಜ್ಞೆ ಮಾಡಿ ಕಳಿಸುತ್ತಾನೆ.

೯. ಮೈಸೂರಿನ ಅರಮನೆಯಲ್ಲಿ, ರಾಜಮಾತರಾದ ಚೆನ್ನರಂಗರು ರಣಧೀರನನ್ನು ನೋಡುವುದಕ್ಕೆ ಬಂದ ರಾಜಮಾತೆಯನ್ನು ಒಳಗೆ ಕರೆಸುತ್ತಾರೆ. ಇಮ್ಮಡಿ ರಾಜಒಡೆಯರು ಹೇಗೆ ವಿಕ್ರಮರಾಯನ ವಶಕ್ಕೆ ಬಲಿ

ಯಾದರೆಂಬುದನ್ನು ರಣಧೀರನು ರಾಜಮಾತೆಯ ಮುಖದಿಂದಲೇ ತಿಳಿಯುತ್ತಾನೆ. ವಿಕ್ರಮರಾಯನನ್ನು ತೀರಿಸಿಬಿಡಲು ಅಪ್ಪಣೆಕೊಟ್ಟರೆ ಸಾಕೆಂದು ಚಿನ್ನರಂಗರು ಬೇಡುತ್ತಾರೆ. ಆ ಉಪಾಯವು ಬೇಡವೆಂದು ರಣಧೀರನು ತಡೆದರೂ, ರಾಜಮಾತೆ ಅವರಿಗೆ ಪ್ರೋತ್ಸಾಹಕೊಡುತ್ತಾರೆ. ಆ ವೇಳೆಗೆ ಮುಚ್ಚಿದ್ದ ಬಾಗಿಲನ್ನು ತುಂಗರಾಯನು ತಟ್ಟುತ್ತಾನೆ. ಬಾಗಿಲು ತೆಗೆಯುವ ಮುಂಚೆ ರಾಜಮಾತೆಯೂ ಅಪ್ಪಯ್ಯನೂ ಮರೆಯಾಗುತ್ತಾರೆ. ತುಂಗರಾಯನು ಒಳಗೆ ಬಂದು ಶೋಧಿಸಿ, ಏನೂ ಕಾಣದೆ ಹೋದರೂ, ಸಂಶಯ ಶಾಂತವಾಗದೆ ಹಾಗೆಯೇ ಹೋಗುತ್ತಾನೆ.

೧೦. ಕನ್ನಂಬಾಡಿಯಲ್ಲಿ ಹೇಳಿದಂತೆ, ವಿಕ್ರಮರಾಯನು ಸಂಜೆಯ ವೇಳೆಗೆ ಬಂದು, ರಣಧೀರನನ್ನು ತನ್ನ ಬಲೆಯಲ್ಲಿ ಬೀಳಿಸಿಕೊಳ್ಳಲು ಯತ್ನಿಸುತ್ತಾನೆ. ತನ್ನ ಆಟ ಆಕರ್ಷಣೆಗಳಿಗೆ ರಣಧೀರನು ಒಳಗಾಗದುದನ್ನು ಕಂಡು, ಹೊರಗೆ ತೋರಿಕೆಯ ವಿನಯವನ್ನು ನಟಿಸಿದರೂ, ರಣಧೀರನನ್ನು ಮುಗಿಸಿಬಿಡಬೇಕೆಂದು ಮನಸ್ಸಿನಲ್ಲಿ ಗುಣಾಕಾರ ಹಾಕಿಕೊಳ್ಳುತ್ತಾನೆ.

೧೧. ರಾತ್ರಿ ವಿಕ್ರಮರಾಯನು ತನ್ನ ಮನೆಯ ಮುಂದೆ, ತನಗೆ ಎದುರಾದ ಅಳಗರಾಜನ ಮೂಲಕ, ಪ್ರತಿಪಕ್ಷವನ್ನು ಅಡಗಿಸುವುದಕ್ಕೆ ಮಾಡಬೇಕಾದುದನ್ನು ಆಜ್ಞಾಪಿಸಿ ಮುಂದೆ ಹೋಗುತ್ತಿರುವಾಗ, ಮರೆಯಲ್ಲಿ ಅಡಗಿದ್ದ ಚಿನ್ನರಂಗರ ಕೈಗೆ ಬೀಳುತ್ತಾನೆ. ವಿಕ್ರಮನು ರಂಗನನ್ನು ಕೆಳಗೆ ಕೆಡವಿಕೊಂಡರೂ ಚಿನ್ನನ ಕತ್ತಿಯಿಂದ ವಿಕ್ರಮನ ತಲೆ ಹರಿದುಬೀಳುತ್ತದೆ.

೧೨. ರಣಧೀರನನ್ನು ಇವನ ಕಡೆಯಿಂದ ಬಲವಂತವಾಗಿಯಾದರೂ ಕದಲಿಸಬೇಕೆಂದು ತುಂಗರಾಯನು ಪ್ರಯತ್ನಿಸುತ್ತಿರುವಾಗಲೇ ಜಯಶಾಲಿಯಾದ ಸಿರೀಶನು ಅಲ್ಲಿಗೆ ಬಂದು, ಪಟ್ಟಣವು ತಮ್ಮ ಕೈವಶವಾದುದನ್ನು ತಿಳಿಸುತ್ತಾನೆ. ತುಂಗರಾಯನು ಸೆರೆಯಾಗುತ್ತಾನೆ. ಸಿರೀಶನ ಪ್ರತಾಪವನ್ನು ರಣಧೀರನು ಹಸನ್ಮುಖದಿಂದ ಕೇಳುತ್ತಿರುವಾಗಲೇ ಪಕ್ಕನು ಚಿನ್ನರಂಗರನ್ನು ಕರೆತರುತ್ತಾನೆ. ಚಿನ್ನರಂಗರ ಗೆಯ್ಮೆಯನ್ನು ರಣಧೀರನು ಮೆಚ್ಚುವುದಿಲ್ಲ. ಅಷ್ಟು ವೇಳೆಗೆ ವಿಕ್ರಮರಾಯನ ಸಂಹಾರವಾರ್ತೆಯನ್ನು ಕೇಳಿದ ರಾಜಮಾತೆ ಅಲ್ಲಿಗೆ ಬರುತ್ತಾರೆ. ವಿಕ್ರಮರಾಯನು ಬದುಕಿರುವವರೆಗೂ ಅವನ

ಮೇಲಿನ ಕ್ರೋಧದಿಂದ ಮುಚ್ಚಿಹೋಗಿದ್ದ ಅವರ ದುಃಖ ಈಗ ಹೊದಿಕೆ ಕಳೆದುಕೊಂಡು ಅಧಿಕವಾಗಿ, ಅವರು ಮೂರ್ಛೆಹೋಗುತ್ತಾರೆ. ವಿಕ್ರಮರಾಯನ ಕಳೇಬರಕ್ಕೆ ಮರ್ಯಾದಾಪೂರ್ವಕವಾಗಿಯೇ ಸಂಸ್ಕಾರವಾಗಬೇಕೆಂಬ ರಣಧೀರನ ಇಂಗಿತವನ್ನು ತಿಳಿದು, ಸಿರೀಶನು ಆಜ್ಞೆ ಮಾಡುತ್ತಾನೆ.

ಮಾರನೆಯ ದಿನವೇ ದತ್ತುಸ್ವೀಕಾರವಾಗಬೇಕೆಂದು ರಾಜಮಾತೆ ಇಷ್ಟಪಡುತ್ತಾರೆ. ರಣಧೀರನು ರಾಜನಾಗುತ್ತಾನೆ.

೫. 'ಮಂತ್ರಶಕ್ತಿ' ನಾಟಕದ ಕಥೆ

ರಣಧೀರನ ಪ್ರಭುಶಕ್ತಿ, ಉತ್ಸಾಹಶಕ್ತಿ, ಮಂತ್ರಶಕ್ತಿಗಳೆಂಬ ಶಕ್ತಿತ್ರಯಗಳನ್ನು ಕುರಿತಾಗಿ, ನಾವು ಬರೆಯಬೇಕೆಂದು ತಿಳಿದುಕೊಂಡಿರುವ ಮೂರು ನಾಟಕಗಳಲ್ಲಿ—ಅವರು ತಮ್ಮ ಮರಣಕ್ಕೆ ಮುಂಚೆ ಬರೆದ ನಾಟಕ ಈ "ಮಂತ್ರಶಕ್ತಿ". ತಮ್ಮ ಅಚ್ಚುಮೆಚ್ಚಿನ ದೊರೆಯಾದ ರಣಧೀರನ ಉದಾತ್ತ ಗುಣಗಳನ್ನೆಲ್ಲ ಅವರು ಇಲ್ಲಿ ಕೇಂದ್ರೀಕರಿಸಿದ್ದಾರೆಂದು ಹೇಳಬಹುದು.

೧. ವಿಜಯನಗರದ ವೆಂಕಟಪತಿರಾಯನು ಶ್ರೀರಂಗಪಟ್ಟಣದ ರಾಜ್ಯ ಸಿಂಹಾಸನವನ್ನು ಯಾವ ಒಪ್ಪಂದಗಳ ಮೇಲೆ ರಾಜಒಡೆಯರಿಗೆ ಒಪ್ಪಿಸಿದನು ಎಂಬುದಕ್ಕೆ ಸನದೂ ಶಾಸನಗಳುಂಟೇ ಎಂದು ಶೋಧನೆಯಾಗುತ್ತಿದೆ. ಇದ್ದರೆ, ಅದರಂತೆ ನಡೆಯಲು ರಣಧೀರನು ನಿರ್ಧರಿಸಿದ್ದಾನೆ. ಹಿರಿಯ ಅಯ್ಯನವರು ಅವನ ಇಷ್ಟಕ್ಕೆ ಅನುವರ್ತಿಗಳಾಗಿದ್ದಾರೆ. ಆದರೆ ಹಳೆಯ ಅಯ್ಯನ ಗುಂಡಪ್ಪಯೋಗಿಯು ಮಾತ್ರ ವಿರೋಧಿಸುತ್ತಿದ್ದಾನೆ. ಶಾಸನದ ಪ್ರಕಾರ ಒಡೆಯರು ರಾಜ್ಯವನ್ನು ವೆಂಕಟಪತಿರಾಯನ ವಂಶದವರಿಗೆ ಒಪ್ಪಿಸಬೇಕಾದರೆ, ಆ ಶಾಸನವನ್ನೇ ನಾಶಮಾಡಿಸಲೂ ಅವನು ಸಿದ್ಧ. ಹೀಗೆ ಶೋಧಿಸುವಾಗ, ಬಿಟ್ಟಿದ್ದ ಅರಸಿನ ದುರಂತಕ್ಕೆ ಪಶ್ಚಾತ್ತಾಪವನ್ನು ಸೂಚಿಸುವ ಅದುವರೆ ಚಾಮರಾಜರ ಶಾಸನವೊಂದು ದೊರೆತು ಬೇರೇನೂ ದೊರಕದೆ ಹೋದರೂ, ಶ್ರೀರಂಗರಾಯನು ವೆಂಕಟಪತಿರಾಯನ ವಂಶಸ್ಥನಾದ್ದರಿಂದ, ತನಗೆ ಅಧಿರಾಜನೆಂಬುದನ್ನು ರಣಧೀರ ಒಪ್ಪಬೇಕಾದ. ಅದ್ದರಿಂದಲೇ, ಈ ಶೋಧನೆಯನ್ನು ನಡೆಸುವವನು ತಪ್ಪು ಬಂದು ನೋಡುತ್ತಿದ್ದರೂ, ಅವನನ್ನು ಶಿಕ್ಷಿಸದೆ ಬಿಟ್ಟಿರುತ್ತಾನೆ.

೨. ಮಧುರೆಯ ತಿರುಮಲನಾಯಕನಿಗೆ ಅಪ್ತನಾಗಿ, ಮಹಾರಾಜನಿಗೆ ಬಹಿಷ್ಕಾರವನ್ನು ಸಾಧಿಸುವ ಕಾರ್ಯದಲ್ಲಿ, ರಣಧೀರನನ್ನು ಸೆರೆಹಿಡಿಯುವ ಪ್ರಯತ್ನಕ್ಕಾಗಿ ಮಂತ್ರತಂತ್ರಗಳ ವಿದ್ಯೆಯನ್ನು ಪ್ರಯೋಗಿಸುತ್ತಿರುತ್ತಾನೆ. ಆದರೆ ಆಕೆ ರಣಧೀರನಿಗೆ ತಾನೇ ಮರುಳಾಗಿದ್ದಾಳೆ. ಆಕೆಯ ಮನೆಗೆ

ರಣಧೀರನು ಮೊಸೆಗಾರನೆಂದು ವೇಷಾಂತರದಲ್ಲಿ ಬಂದರೂ, ಆಕೆಗೆ ಅವನ ಗುಟ್ಟು ಗೊತ್ತಾಗುತ್ತದೆ.

೩. ರಣಧೀರನನ್ನು ಕೊಲ್ಲಬೇಕು; ಇಲ್ಲದಿದ್ದರೆ, ಅವನ ಬಳಿಗೆ ಬರುತ್ತಿರುವ ಶ್ರೀರಂಗರಾಯನನ್ನಾದರೂ ಕೊಲ್ಲಿಸಿ, ಆ ನೆಪದಿಂದಾಗಿ ರಣಧೀರನ ಮೇಲೆ ಶ್ರೀರಂಗರಾಯನ ಸಾವಿನ ತಪ್ಪು ಹೊರಿಸಬೇಕು—ಎಂದು ಕರುಣಿಯನ್ ತಂತ್ರ ಮಾಡುತ್ತಿದ್ದಾನೆ. ಇದಕ್ಕೆ ರಣಧೀರನ ಬಾಲ್ಯದಿಂದಿನ ಒಡನಾಡಿಯಾದ ಮಲ್ಲಣನು ಸಹಾಯಿ. ನಂಜರಾಜಯ್ಯನೂ ಈ ತಂತ್ರದಲ್ಲಿ ಒಳಗಾಗಿದ್ದಾರೆ. ಆದರೆ ಅನಿರೀಕ್ಷಿತವಾದ ಪ್ರಸಂಗಗಳು ತಾವೂ ರಣಧೀರನಿಗೆ ಸಹಾಯಕವೆಂಬಂತೆ ಈ ವ್ಯೂಹವನ್ನು ಪ್ರವೇಶಿಸುತ್ತಾರೆ.

೪. ಜೂಜಿನಲ್ಲಿ ಇನ್ನೂ ರಣಧೀರನನ್ನು ವಶಪಡಿಸಿಕೊಂಡಿಲ್ಲವೆಂದು ಕರುಣಿಯನ್‌ಗೆ ಅಸಮಾಧಾನ. ಅವನ ರೋಷಾತಿಶಯದಿಂದ ಅವನಿಗೆ ತಲೆ ಕೆಟ್ಟಿದೆ. ಅವನ ಮೂರ್ಖತನದಿಂದ ಸ್ನೇಹ ಕೆಟ್ಟಿದೆ. ಅವನಿಗೆ ತಕ್ಕ ಶಿಕ್ಷೆ ಮಾಡಬೇಕೆಂದು ಅವನು ದಾರಿ ಕಾಯುತ್ತಿದ್ದಾಗ, ಅವನ ಕೈಗೆ ಸಿಕ್ಕಿಬೀಳುವ ಭಯದಿಂದ ಅವನು ಮೊಸೆಗಾರನಿಗಾಗಿ ಕೂಗಿಕೊಂಡಾಗ, ಮೊಸೆಗಾರನು ಬಂದು ಅವನನ್ನು ರಕ್ಷಿಸುತ್ತಾನೆ. ಅವನ ರಾಜಗಾಂಭೀರ್ಯದ ಎದುರು ನಿಲ್ಲಲಾರದೆ ಕರುಣಿಯನ್ ಓಡಿಹೋಗುತ್ತಾನೆ.

೫. ಗುಂಡಪ್ಪಜೋಯಿಸನ ಮನೆಯಲ್ಲಿ ಹಳೆಯ ಪಟ್ಟಿದಾರರ ಸಭೆ ಸೇರಿದೆ. ರಣಧೀರನನ್ನು ಪಟ್ಟಕ್ಕೇರಿಸಬೇಕೆಂದು ಗುಂಡಪ್ಪನ ವಾದ. ಉಳಿದವರಿಗೆ ಅದು ಒಪ್ಪದು. ಅದನ್ನು ಕುರಿತು ವಿವಾದವಾಗುತ್ತಿರುವಾಗ, ನಂಜರಾಜಯ್ಯನ ಸೂಚನೆಯಂತೆ ಕರುಣಿಯನ್ ಮುಂತಾದವರು ನುಗ್ಗಿ ಬಂದು, ರಾಜಭಕ್ತರಾದ ಹಳೆಯ ಪಟ್ಟಿದಾರರನ್ನು ನಿರ್ಬಂಧಿಸುವರು. ಆಗ ಅವರಿಗೆ ನಂಜರಾಜಯ್ಯನ ದ್ರೋಹದ ಸ್ವರೂಪ ಗೊತ್ತಾಗುವುದು. ನಂಜರಾಜಯ್ಯನು ಕರುಣಿಯನ್ನು ನಂಬಿದ ಫಲ ಕಂಡಿದ್ದರೂ, ಅವನ ನಂಬಿಕೆಗೆ ಒಳಗಾಗಿರುವನು. ನಂಜರಾಜಯ್ಯನಿಗೆ ತಾನು ಸರ್ವಾಧಿಕಾರಿಯಾಗಬೇಕೆಂದು ದುರಾಸೆ. ಹಳೆಯ ಪಟ್ಟಿದಾರರ ಮುಖಂಡ ತಾನಾಗಬೇಕೆಂದು ಗುಂಡಪ್ಪಜೋಯಿಸನಿಗೆ ದುರಾಸೆ. ಅದನ್ನು ಕಾರ್ಯಗತಗೊಳಿಸುವುದಕ್ಕೆ ಅಡ್ಡಿಯಾಗಿರುವ ರಣಧೀರನನ್ನು ಕೊಲ್ಲಬೇಕೆಂದು ಇಬ್ಬರೂ ಒಪ್ಪಂದ ಮಾಡಿಕೊಳ್ಳುವರು.

೬. ಮೊನೆಗಾರನು ದೊಡ್ಡಮ್ಮನ ಮನೆಯಲ್ಲಿ ಮಲಗಿ ನಿದ್ರಿಸುತ್ತಿರುವನು. ಆತನನ್ನೇ ಕುರಿತು ನೋಡುತ್ತ ಸಂಮಿಶ್ರಭಾವನೆಗಳಿಗೆ ಒಳಗಾಗಿದ್ದಾಳೆ, ದೊಡ್ಡಮ್ಮ. ಅಲ್ಲಿಗೆ, ಸೇನಾಪತಿ ಲಿಂಗರಾಜ ಬಂದು, ನಂಜರಾಜಯ್ಯನ ದ್ರೋಹವನ್ನು ತಿಳಿಸುವನು. ಅಷ್ಟು ವೇಳೆಗೆ ಶ್ರೀರಂಗರಾಯನನ್ನು ಎದುರುಗೊಳ್ಳುವ ನೆಪದಿಂದ ಸೇನಾಸಮೇತನಾದ ನಂಜರಾಜಯ್ಯ ಬರುತ್ತಾನೆ. ತನ್ನ ಅಂತ್ಯ ರಣಧೀರನಿಂದಾಗಲಿದೆಯೆಂದು ಗೊತ್ತಾದೊಡನೆ ಅವನನ್ನು ಸಂಹರಿಸಲು ನುಗ್ಗುತ್ತಾನೆ. ವಿಫಲನಾಗಿ ಸೆರೆಸಿಕ್ಕುತ್ತಾನೆ. ಲಿಂಗರಾಜನು ದಳವಾಯಿಯಾಗುತ್ತಾನೆ. ಅಷ್ಟು ಹೊತ್ತಿಗೆ ಶ್ರೀರಂಗರಾಯಾದಿಗಳು ಸೆರೆಸಿಕ್ಕಿದ ವರ್ತಮಾನ ಬಂದು, ರಣಧೀರನು ಅವರ ಬಿಡುಗಡೆಗೆ ಧಾವಿಸುತ್ತಾನೆ.

೭. ರಣಧೀರನಿಗೆ ಬದಲಾಗಿ ಶ್ರೀರಂಗರಾಯಾದಿಗಳನ್ನು ಹಿಡಿದು ತಂದಿದ್ದಾರೆಂದು ಕುರುವಿಯನ್ನ ಮೇಲಾರೋಪ. ಆ ದೋಷಕ್ಕೆ ಅವರು ಆಹುತಿಯಾಗಬೇಕು—ಅಷ್ಟು ಹೊತ್ತಿಗೆ, ರಣಧೀರನು ಹಠಾತ್ತನೆ ಬಂದು, ಶ್ರೀರಂಗರಾಯಾದಿಗಳನ್ನು ಬಿಡಿಸಿ, ಕುರುವಿಯನ್ನನ ಕಡೆಯವರನ್ನು ಸೆರೆಹಿಡಿಸುವನು. ಕೊಂಗರ ಹೇಡಿತನಕ್ಕೆ ಹೇಸಿದ ತೊಟ್ಟಿಲಯ್ಯ, ರಣಧೀರನ ವೀರಗುಣಕ್ಕೆ ಮಾರುಹೋಗಿ ಅವನ ಸೇವೆಗೆ ನಿಲ್ಲುವನು. ಅದೇ ವೇಳೆಗೆ ಇಕ್ಕೇರಿಯ ರಾಯಭಾರವೊಂದು ಶ್ರೀರಂಗರಾಯನಲ್ಲಿಗೆ ಬರುತ್ತದೆ. ಅದು ರಣಧೀರನಿಗೆ ಪ್ರತಿಕೂಲವಾಗಿರುವುದಾದರೂ, ರಣಧೀರನು ಆ ನಿಯೋಗದವರನ್ನು ಔದಾರ್ಯದಿಂದ ಉಪಚರಿಸುತ್ತಾನೆ.

೮. ಗುಂಡಪ್ಪಜೋಯಿಸನ ಮನೆಯಲ್ಲಿ ಹಳೆಯ ಪಟ್ಟವರ ಸಮ್ಮೇಳನ. ಅಲ್ಲಿಗೆ ಮೊನೆಗಾರನ ಪ್ರವೇಶ. ದ್ರೋಹಿಗಳ ರಹಸ್ಯವನ್ನೆಲ್ಲ ತಿಳಿದ ಮೊನೆಗಾರ, ಗುಂಡಪ್ಪನಿಗೆ ನಂಬಿಕೆಯುಂಟಾಗುವಂತೆ, ನಂಜರಾಜನು ಹೇಳಿಕಳಿಸಿದನೆಂಬಂತೆ, ಮಾತನಾಡಿದಾಗ, ಗುಂಡಪ್ಪನು ಆ ಬಲೆಗೆ ಬಿದ್ದು, ತನ್ನ ಪಕ್ಷದವರ ಮಂತ್ರತಂತ್ರಗಳನ್ನೆಲ್ಲ ಮೊನೆಗಾರನ ಕಿವಿಗಳಿಗೆ ಪ್ರಕಟಮಾಡುವನು.

೯. ವಿರಹದಿಂದ ಸಂತಪ್ತೆಯಾಗಿರುವ ದೊಡ್ಡಮ್ಮನ ಮನೆಗೆ ರಣಧೀರ ಬರುತ್ತಾನೆ. ಅವರು ತಾವು ಶಯ್ಯೆಯನ್ನು ಏರುವ ಹೊತ್ತಿನಲ್ಲಿ, ಅಲ್ಲಿಗೆ

ಕದ್ದು ಬರುತ್ತಿದ್ದ ಕರುವಿಯನ್ ಮುಂತಾದವರನ್ನು ರಣಧೀರನು ಕಾಣುತ್ತಾನೆ. ದೊಡ್ಡಮ್ಮನೊಂದಿಗೆ ಶೃಂಗಾರಚೇಷ್ಟೆಗಳನ್ನು ನಟಿಸುತ್ತ, ಅವಳಿಂದ 'ಪೊನೆಗಾರ'ನ ಹೆಸರನ್ನು ಹೊರಗಿನವರಿಗೂ ಕೇಳಿಸುವಂತೆ ಗಟ್ಟಿಯಾಗಿ ಕೂಗಿಸುತ್ತಾನೆ. ಆ ಕೂಗಿಗೆ ಉತ್ತರವಾಗಿ, ಲಿಂಗರಾಜನು ಸೇನಾಸಮೇತನಾಗಿ ಒಳಗೆ ಬರುತ್ತಾನೆ. ರಣಧೀರನ ನೇತೃತ್ವದಲ್ಲಿ ಕರುವಿಯನ್ ಮೊದಲಾದವರು ಸೆರೆ ಸಿಕ್ಕುತ್ತಾರೆ.

೧೦. ಗುಂಡಪ್ಪಜೋಯಿಸನೂ ಅವನ ಪಕ್ಷದವರೂ ಆಯುಧಶಾಲೆಯ ಆಯುಧಗಳನ್ನು ಕೆಡಿಸುತ್ತಿದ್ದಾರೆ. ಅಲ್ಲಿಗೆ ಮೊನೆಗಾರ ಬಂದು, ದೊಡ್ಡಮ್ಮನ ಮನೆಯ ಸುದ್ದಿಯನ್ನು ತಿಳಿಸುವ ಹೊತ್ತಿಗೆ, ಲಿಂಗರಾಜನು ರಾಜಭಕ್ತರಾದ ಹಳೆಯ ಪಯ್ಯದವರನ್ನು ಬಿಡಿಸಿಕೊಂಡು ಬರುತ್ತಾನೆ ಮೊನೆಗಾರನು ರಣಧೀರನಾಗಿ, ಅಂದಿನಿಂದ ಹಳೆಯ ಪಯ್ಯದವರ ಸಭೆಯನ್ನು ವಿಸರ್ಜನೆ ಮಾಡಿಬಿಡುತ್ತಾನೆ. ರಾಜದ್ರೋಹಿಗಳಿಗೆ ನಿಸ್ತೇಜವಾಗುತ್ತದೆ.

೧೧. ದೊಡ್ಡಮ್ಮನ ಅಂತರ್ಯದ ಪರೀಕ್ಷೆ ನಡೆಯುತ್ತದೆ. ದೊಡ್ಡಮ್ಮ ರಣಧೀರನ ಭಂಗಾರದವಳಾಗಿರಲು ಅಪೇಕ್ಷೆಪಟ್ಟು, ಅರಮನೆಗೆ ತೆರಳುತ್ತಾಳೆ.

೧೨. ರಾಜಒಡೆಯರಿಗೆ ಶ್ರೀರಂಗಪಟ್ಟಣದ ರಾಜ್ಯ ಹೇಗೆ ಬಂದಿತೆಂಬುದಕ್ಕೆ ಪ್ರಮಾಣಪತ್ರ ಯಾವುದೂ ದೊರಕದೆ ಇದ್ದರೂ, ಅದರ ನಿಜಾಂಶವೇನೆಂಬುದು ಅಸಂದಿಗ್ಧವಾಗಿ ತಿಳಿಯದ ಕಾರಣದಿಂದ, ನೆತ್ತದ ಅದೃಷ್ಟಪರೀಕ್ಷೆಯನ್ನು ಒಡ್ಡಿರುವುದಾಗಿದೆ. ಗೆದ್ದವರಿಗೆ ರಾಜ್ಯ ವಶವಾಗತಕ್ಕದ್ದು ಎಂದು ಒಪ್ಪಿಗೆಯಾಗಿದೆ. ಅದರಂತೆ ನಡೆದ ಆಟದಲ್ಲಿ ರಣಧೀರನಿಗೆ ಜಯವಾಗುತ್ತದೆ. ತಾನು ಗೆದ್ದರೂ, ಸೋತ ಶ್ರೀರಂಗರಾಯನೇ ತನಗೆ ಇನ್ನೂ ಅಧಿರಾಜನೆಂಬಂತೆ ರಣಧೀರನು ಉದಾರವಾಗಿ ಗಂಭೀರವಾಗಿ ನಡೆದುಕೊಳ್ಳುತ್ತಾನೆ.

ರಣಧೀರನ "ಮಂತ್ರಶಕ್ತಿ"ಯಿಂದ ಮಹೀಶೂರ ರಾಜ್ಯವೂ ರಾಜಸಿಂಹಾಸನವೂ ರಣಧೀರನ ಆಶ್ರಯದಲ್ಲಿ ಸ್ವತಂತ್ರವಾಗಿ ನಿಲ್ಲುತ್ತವೆ.

"ವಿಜಯ ನಾರಸಿಂಹ" ನಾಟಕದ ಕಥೆ

ವಿಜಯ ನಾರಸಿಂಹ ಎಂಬುದು ಮೈಸೂರಿನ ಚರಿತ್ರೆಯಲ್ಲಿ ಪ್ರಸಿದ್ಧವಾದ ಹೆಸರು. ಕ್ರಿ. ಶ. ೧೬೩೮ರಿಂದ ೧೬೫೯ರ ವರೆಗೆ ರಾಜ್ಯವಾಳಿದ ಶ್ರೀ ರಣಧೀರ ಕಂಠೀರವ ನರಸರಾಜ ಒಡೆಯರ ಪ್ರಸಿದ್ಧವಾದ ಕತ್ತಿಯ ಹೆಸರು—ವಿಜಯನಾರಸಿಂಹ.

ಕಂಠೀರವ ನರಸರಾಜರ ತಂದೆಯವರಾದ ಬೆಟ್ಟದ ಚಾಮರಾಜ ಒಡೆಯರು ತಾವು ರಾಜ್ಯವಾಳುವನ್ನೊಲ್ಲದೆ, ತಮ್ಮ ತಮ್ಮಂದಿರಾದ ರಾಜಒಡೆಯರಿಗೆ ಪಟ್ಟಕಟ್ಟಿ, ತಾವು ಲೋಕದಿಂದ ದೂರವಾಗಿ ವಿಶ್ರಾಂತಿ ಪಡೆದರು. ರಾಜಒಡೆಯರು, ಮೈಸೂರಿನ ಚರಿತ್ರೆಯಲ್ಲಿ ಅಭೂತಪೂರ್ವ ಎನ್ನಿಸುವಷ್ಟು ಮಟ್ಟಿನ ದಕ್ಷತೆಯಿಂದ ರಾಜ್ಯವಾಳಿ, ರಾಜ್ಯವನ್ನು ವಿಸ್ತರಿಸಿದರು, ಸ್ಥಿರಗೊಳಿಸಿದರು. ಅವರ ಕಾಲಾನಂತರ ಬಂದ ಚಾಮರಾಜ ಒಡೆಯರೂ ಇಮ್ಮಡಿರಾಜ ಒಡೆಯರೂ ಅರಮನೆಯ ಹಳೆಯಪೈಕದವರ, ಧೂರ್ತದಳವಾಯಿಗಳ ಕೈಯೊಳಗೆ ಸಿಕ್ಕಿಬಿದ್ದು, ತಮ್ಮ ಧರ್ಮರಾಜ್ಯಾಕಾಂಕ್ಷೆಗಳನ್ನು ಈಡೇರಿಸಿ ಕಾಣುವ ಮೊದಲೇ ಇಹಲೋಕದಿಂದ ದೂರವಾದರು. ಇವರ ಅನಂತರ ರಾಜ್ಯವು ಹಿಂದಿನ ಮೊರೆಗೇ ಮರಳಿಬಂತು. ಬೆಟ್ಟದ ಚಾಮರಾಜ ಒಡೆಯರ ಮಕ್ಕಳಾದ ಕಂಠೀರವ ನರಸರಾಜ ಒಡೆಯರು ಮೈಸೂರಿನ ಅರಸರಾದರು.

ಈ ಕಂಠೀರವ ನರಸರಾಜರು ಇನ್ನೂ ಹದಿನೆಂಟು ವರುಷದ ಹುಡುಗರಾಗಿರುವಾಗಲೇ, ಮೈಸೂರಿನ ಹೆಸರನ್ನು ಮೆರೆಸುವುದಕ್ಕಾಗಿ ಹೇಗೆ ತಿರುಚಿನಾಪಳ್ಳಿಗೆ ಹೋಗಿ, ಅಲ್ಲಿನ ಪ್ರಸಿದ್ಧ ಜೆಟ್ಟಿಯನ್ನು ಸಂಹರಿಸಿ ಬಂದರು ಎಂಬುದನ್ನೂ; ಅನಂತರ ಸ್ವಲ್ಪ ಕಾಲದ ಮೇಲೆ, ಮೈಸೂರಿನ ಇಮ್ಮಡಿ ರಾಜಒಡೆಯರನ್ನು ಕೊಲ್ಲಿಸಿದ ದಳವಾಯಿ ವಿಕ್ರಮರಾಯನು ಕಂಠೀರವ ನರಸರಾಜರನ್ನು ತಾನು ಕಟ್ಟಿಕ್ಕೆ 'ಆಯುಷ್ಯ', ಹೇಗೆ ಅವರ ಕೈಯಿಂದ ತಾನು ಮರಣಪಟ್ಟನೆಂಬುದನ್ನೂ, ಚರಿತ್ರೆಯ ಗ್ರಂಥಗಳಲ್ಲಿ ಮಾತ್ರವಲ್ಲದೆ ಇದೇ ಸಂಸರು ಬರೆದು ಪ್ರಕಟವಾಗಿರುವ "ವಿಗಡ ವಿಕ್ರಮರಾಯ"ದಲ್ಲೂ ನೋಡಬಹುದು.

ಸಂಸರು ರಣಧೀರನಿಗೆ ಸಂಬಂಧಿಸಿದ ಚರಿತ್ರೆಯನ್ನು ಆಶ್ರಯಿಸಿ ಒಂದು **'ನಾಟಕಚಕ್ರ'** ವನ್ನು ಬರೆದಿದ್ದರೆಂದೂ ಅವರಲ್ಲಿ ಹತ್ತು ನಾಟಕಗಳು ಇದುವೆಂದೂ ಬೇರೆ ಕಡೆ ಹೇಳಿದೆ. ಈ ಹತ್ತರಲ್ಲಿ **'ವಿಗಡ ವಿಕ್ರಮರಾಯ'** ಆದ ಅನಂತರದ ನಾಟಕ—ಈ **'ವಿಜಯ ನಾರಸಿಂಹ'**.

ಕಂಠೀರವ ನರಸರಾಜರು ಪಟ್ಟಕ್ಕೆ ಬಂದಮೇಲೆ ದ್ರೋಹಿಯಾದ ದಳವಾಯಿ ವಿಕ್ರಮರಾಯನನ್ನು ಕೆಲಸದಿಂದ ತೆಗೆದು, ಅವನಿಗೆ ತಕ್ಕ ಶಿಕ್ಷೆಮಾಡಿದರು; ತಮಗೆ ವಿಧೇಯರಾದಂತಹ ದಳವಾಯಿಗಳನ್ನು ನೇಮಿಸಿಕೊಂಡರು; ಸುತ್ತುಮುತ್ತಿನವರೊಡನೆ ಸೆಣಸಿ, ರಾಜ್ಯದ ಗಡಿಗಳನ್ನು ವಿಸ್ತರಗೊಳಿಸಿದರು. (ಈ ಸಂದರ್ಭದಲ್ಲಿ ಪೆರಿಯಪಟ್ಟಣದ ನಂಜುಂಡ ಅರಸನನ್ನು ಇವರು ಬೇಟೆಯಾಡಿದುದೂ ವಿಜಾಪುರದ ವೀರಸೇನಾನಿಗಳಾದ ರಣದುಲ್ಲಾಖಾನ್ ಖಾನ್ ಖಾನ್ ಮುಸ್ತಾಫ್ ಖಾನ್ ಮುಂತಾದವರನ್ನು ಹಿಮ್ಮೆಟ್ಟಿಸಿದುದೂ ಸಂಸರ ಇನ್ನೊಂದೆರಡು ನಾಟಕಗಳಿಗೆ ವಸ್ತುವಾಗಿದೆ.) ಹೀಗೆ ಹೊರಗಿನ ಶತ್ರುಗಳನ್ನು ಹೊಸಗಿದುದರ ಜೊತೆಯಲ್ಲೇ ರಾಜ್ಯದ ಒಳಗಿನ ರಕ್ಷಣೆಗಳನ್ನು ಬಲಪಡಿಸಿಕೊಳ್ಳುತ್ತಾ ಸರ್ವಸಮೃದ್ಧವಾದ ಆಯುಧಶಾಲೆಯನ್ನು ಕಟ್ಟಿಸಿದರು; ತಾವೇ ತಾವಾಗಿ ಹದಕ್ಕೆ ಬಾರದಿದ್ದ ಗೌಡರಕೊಬ್ಬನ್ನು ಅಡಗಿಸಿ, ತಮಗೆ ಅವರು ವಶವರ್ತಿಯಾಗುವಂತೆ ಮಾಡಿದರು; ಅನೇಕ ದೇವಕಾರ್ಯ ಧರ್ಮಕಾರ್ಯಗಳಿಗೆ ಸುವ್ಯವಸ್ಥೆಮಾಡಿದರು ; ದೇಶದಲ್ಲಿ ನಾನಾಮುದ್ರೆಯ ನಾಣ್ಯಗಳು ಇರುವುದರಿಂದಾಗುವ ಅನನುಕೂಲಗಳನ್ನು ಅರಿತು, ಒಂದೇ ಮುದ್ರೆಯ ನಾಣ್ಯಗಳನ್ನು ಸೃಜಿಸಿಕೊಡುವ ತಮ್ಮದೇ ಸ್ವಂತ ಟಂಕಸಾಲೆಯನ್ನುಸ್ಥಾಪಿಸಿ ಕಂಠೀರಾಯಹಣವನ್ನು ಚಲಾವಣೆಗೆ ತಂದರು.

ಹೀಗೆ ತನ್ನ ರಾಜ್ಯವನ್ನು ಎಲ್ಲ ರೀತಿಯಿಂದಲೂ ಉತ್ತಮಪಡಿಸಿಕೊಂಡು ಬೆಳೆಯುತ್ತಿದ್ದ ರಾಜನನ್ನು ಕಂಡು ಕರುಬಿ, ಹೆದರಿ, ಆತನಿಗೆ ಕೇಡನ್ನು ಬಯಸುತ್ತಿದ್ದವರೂ ಇರಲಿಲ್ಲವೆಂದಲ್ಲ. ಪಟ್ಟವಾಗದ ಮುಂಚೆಯೇ ತನ್ನ ಬಳಿಗೆ ಬಂದು, ತನ್ನ ವೀರ ಜಟ್ಟಿಯನ್ನು ಕೊಂದುಹೋದವನು, ಈಗ ಪಟ್ಟವಾದಮೇಲೆ ಬಿಜಾಪುರದವರನ್ನು ಸೋಲಿಸಿ ಓಡಿಸಿದವನು, ಎಂದು ತನಗೆ ಏನು ಆಪತ್ತು ತರುವನೋ ಎಂದು ತಿರುಚಿನಾಪಳ್ಳಿಯ ಅರಸು ಅಂಜಿ ಕಂಠೀರವನ ಸಂಹಾರಕ್ಕಾಗಿ ೨೫ ಜನ ಕಳ್ಳರನ್ನು ಕಳುಹಿಸಿಕೊಟ್ಟನಂತೆ.

ಆದರೆ ಅವರು, ಕಂಠೀರವನ ಕುಲದೈವವಾದ ಶ್ರೀ ನೃಸಿಂಹನ ಅನುಗ್ರಹ ದಿಂದ, ಕಂಠೀರವನ ಕೈಗತ್ತಿಯಾದ ವಿಜಯನಾರಸಿಂಹಕ್ಕೆ ಬಲಿಯಾದರು.

ಹೀಗೆ ವಿಜಯನಾರಸಿಂಹ ಎಂಬ ಕತ್ತಿಯು ಆ ಹಂತಕರನ್ನು ತುತ್ತು ಗೊಂಡ ಕಥೆಯನ್ನೆತ್ತಿಕೊಂಡು, ಸಂಸರು, ಚರಿತ್ರೆಯ ಇತರ ಅಂಶಗಳನ್ನು ಅದಕ್ಕೆ ಚೌಕಟ್ಟುಮಾಡಿ, ಜೊತೆಗೆ ತಮ್ಮ ಹಿಂದಿನ ರಣಧೀರ ನಾಟಕಗಳಲ್ಲಿ-- ಎಂದರೆ **ಬೆಟ್ಟದ ಅರಸು, ವಿಗಡ ವಿಕ್ರಮರಾಯ** ಇವುಗಳಲ್ಲಿ—ತಾವು ಸ್ವತಂತ್ರವಾಗಿ ಸೃಷ್ಟಿಸಿದ ಪರಿವಾರವನ್ನು ಇಲ್ಲಿಗೂ ನಡಸಿಕೊಂಡು ಬಂದು **ಈ "ವಿಜಯ ನಾರಸಿಂಹ"** ನಾಟಕವನ್ನು ಬರೆದಿದ್ದಾರೆ.

೩

ಈ ನಾಟಕದಲ್ಲಿ ಕವಿಯು ರಣಧೀರನ "ಭೂಮಿನಾಶೋತ್ಸಾಹ ಶಕ್ತಿ ಪ್ರಕರಣ"ವನ್ನು ಉತ್ಪ್ರಹಿಸುತ್ತಿದ್ದಾರೆ.

ಒಂದು ಕಡೆ, ತನ್ನ ಆಸ್ಥಾನದ ಜೆಟ್ಟಿಯಾದ ವೀರಮಲ್ಲನನ್ನು ರಣಧೀರ ಕೊಂದನೆಂಬುದು ತಿರುಚಿನಾಪಳ್ಳಿಯ ಅರಸನನ್ನು ಇನ್ನೂ ಕಿತ್ತು ತಿನ್ನುತ್ತಿದೆ. ಅದಕ್ಕಾಗಿ ಅವನು, ರಣಧೀರನಿಂದ ಮುಂದೆ ತನ್ನ ರಾಜ್ಯಕ್ಕೆ ಒದಗಬಹು ದಾದ ಅಪಾಯವನ್ನು ತಪ್ಪಿಸಿಕೊಳ್ಳಲು ತನ್ನ ನಚ್ಚಿನ ಲೆಂಕನಾದ ಕರುವಿ ಯಾನ್ ಎಂಬವನನ್ನು ಕರೆದು, ಅವನಿಗೆ ಹೊನ್ನಿತ್ತು, ಜೊತೆಗೆ ಇಪ್ಪತ್ತು ಜನ ಜೆಟ್ಟಿಗರನ್ನು ರಣಧೀರನ ಸಂಹಾರಕ್ಕಾಗಿ ಕಳುಹುತ್ತಾನೆ.

ಇನ್ನೊಂದು ಕಡೆ, ಸತ್ತ ವೀರಮಲ್ಲನ ತಮ್ಮನಾದ ಕೆಂಪಯ್ಯಮಲ್ಲನು — ಕೆಂಪು ಕೋವಲಿನ ದಣಿಗ ರಾಕ್ಷಸನು—ತನ್ನ ಅಣ್ಣನನ್ನು ಕೊಂದ ಕಂಠೀರವ ನನ್ನು ಕೊಂದು ಸೇಡು ತೀರಿಸಬೇಕು; ಇಲ್ಲವೆ ರಣಧೀರನಿಗೆ ಸರ್ವರಕ್ಷೆಯಾಗಿ ರುವ ಸಿರೀಶನನ್ನಾದರೂ ಕೊಲ್ಲಬೇಕು—ಎಂದು ಕರುವಿಯನ್ನೊಡನೆ ತಾನೂ ಕೈಕೂಡಿಸಿದ್ದಾನೆ.

ಮತ್ತೊಂದು ಕಡೆ, ಚಂದ್ರಗಿರಿಯ ಇಮ್ಮಡಿ ಶ್ರೀರಂಗರಾಯನ ಮಗಳ ಅಂತಃಪುರವನ್ನು ಕೆಡಿಸಿದ ಜೀವನ್ನಂತನು, ತಾನು ರಣಧೀರನ ಕೊಲೆ ಯನ್ನು ಸಾಧಿಸಿದರೆ ಅದರಿಂದ ಶ್ರೀರಂಗರಾಯನು ಸುಪ್ರೀತನಾಗಿ ತನ್ನ

ಅನ್ಯಾಯವನ್ನು ಮನ್ನಿಸಿದರೆ, ತಾನು ಅವನ ಮಗಳನ್ನು ಮದುವೆಯಾಗಬಹುದೆಂದು ಮುಂಗನಸು ಕಾಣುತ್ತ ಮೈಸೂರಿಗೆ ಬಂದಿದ್ದಾನೆ.

ಬೇರೊಂದು ಕಡೆ, ರಣದುಲ್ಲಾಖಾನನೇ ಮುಂತಾದ ವೀರರಿಗೆ ಆದ ಪರಾಭವದಿಂದಲೂ ಬುದ್ಧಿಗಲಿಯದೆ, ಆದೇ ವಿಜಯಪುರದ ದರಬಾರಿನ ಮನ್ಸಬದಾರನೊಬ್ಬನು, ಹಮೀದ್ ಖಾನ್ ಎಂಬವನು, ತಾನೂ ಗುಪ್ತವಾಗಿ ಬಂದಿದ್ದಾನೆ.

ಹೊರಗಿನ ಇಷ್ಟೆಲ್ಲಾ ಶತ್ರುಗಳ ಜೊತೆಗೆ—ವಿಕ್ರಮರಾಯ ಸತ್ತ ಮೇಲೂ ಅವನ ತೃಪ್ತ್ಯರ್ಥವಾಗಿಯಾದರೂ ರಣಧೀರನನ್ನು ತೀರಿಸಿ ಕೃತಾರ್ಥನಾಗಬೇಕೆಂದು ವಿಕ್ರಮನ ಆಪ್ತೋಪಜೀವಿಯಾದ ತುಂಗರಾಯನು ಒಳಗ ರಾಜನೊಡನೆ ಹೊಂಚುಹಾಕುತ್ತಿದ್ದಾನೆ.

ಈ ಇವರ ಜೊತೆಗೆ ರಣಧೀರನ ಹೊಸ ರಾಜ್ಯಪದ್ಧತಿಯನ್ನು ಅರ್ಥಮಾಡಿಕೊಳ್ಳಲಾರದೆ ಅಸಹನೆಯಿಂದ ಉರಿದೆದ್ದ ನಾಡಗೌಡರೂ ಆತನಿಗೆ ಎದುರಾಗಿದ್ದಾರೆ.

ಈ ಎಲ್ಲ ಬೆಂಕಿಗಳಿಗೆ ಅನುಕೂಲವಾದ ಗಾಳಿ ಎಂಬ ಹಾಗೆ, 'ವಿಗಡ ವಿಕ್ರಮರಾಯ'ದಲ್ಲಿ ನಾವು ಕಂಡ ತಿರುಕಣಾಂಬಿಯ ಗರುಡಿಯ ಬಸವಮಲ್ಲಯ್ಯ ಅದು ಹೇಗೋ ಏನೋ ಮಾಡಿ ರಣಧೀರನ ಶಯ್ಯಾಗೃಹದ ಕಾವಲ ಮುಖ್ಯಸ್ಥನಾಗಿದ್ದಾನೆ; ಇವನ ಸಹಾಯದಿಂದ ರಣಧೀರನ ಶತ್ರುಗಳೆಲ್ಲರೂ ಶಯ್ಯಾಗೃಹವನ್ನು ಪ್ರವೇಶಿಸುತ್ತಾರೆ; ಅದರ ಮುಂದಿನ ಕಥೆ—ಚರಿತ್ರೆಯಲ್ಲಿ ಕಂಡಂತೆಯೇ, ವಿಜಯ ನಾರಸಿಂಹದ ರುಚಿ ಕಾಣುತ್ತಾರೆ.

೪

ಈ ಉತ್ಪಾತಪಂಕ್ತಿಯ ಕಥೆ ಈ ನಾಟಕದ ವಸ್ತು. ಇದನ್ನು ಇಪ್ಪತ್ತು ಪ್ರವೇಶಗಳಲ್ಲಿ ಬಿಡಿಸಿ ಬೆಳೆಸಿದ್ದಾರೆ.

ಪ್ರವೇಶ ೧: ಕರ್ಪೂರವಳ್ಳಿ ಎಂಬ ಗ್ರಾಮದ ಗೌಡ, ಮನ್ನಮ ರಾಜಗೌಡ, "ಈ ದೌರ್ಭಾಗ್ಯಲೋಕದ ಅಸುಖ ಬೇನೆ ತಪನ ಸಂತಾಪ ಆಧಿವ್ಯಾಧಿಗಳನ್ನು ತಗ್ಗಿಸಲು ನಿರ್ವಂಚನೆಯಿಂದ ಕಷ್ಟಪಡುತ್ತಿರುವ ಸಾತ್ವಿಕ ಸಾಧಕ." ಈತನು ಗ್ರಾಮದ ಚಾವಡಿಯಲ್ಲಿ ಬಂದ ವ್ಯವಹಾರಗಳನ್ನು

ಇತ್ಯರ್ಥಪಡಿಸುತ್ತಿರುವಾಗ, ಪಟ್ಟಣದಿಂದ ರಾಜರ ಪರವಾಗಿ ನಿರೀಶನು ಸೈನ್ಯ ಸಮೇತನಾಗಿ ಬಂದು, "ಗ್ರಾಮಕ್ಕೆ ಪಾಳ್ಯವಿತ್ತು ಪಡೆದ ಸರ್ವಸ್ವಾಮಿಯೂ ಗೌಡನೆಂಬ ಅಧಿಕಾರಿಯೂ ಏಕಕಾಲದಲ್ಲಿ ಆಗಿರಲಾರಿರಿ" ಎಂದು ಹೇಳಿದಾಗ. ಮನ್ನಮರಾಜನು ಸ್ವಾಮಿತ್ವವನ್ನಾದರೂ ತೊರೆದು ಗೌಡಿಕೆಯನ್ನು ಉಳಿಸಿಕೊಳ್ಳಲು ಆಶಿಸುತ್ತಾನೆ. ಜನರು ಇದಕ್ಕೆ ಒಪ್ಪದೆ ಪ್ರತಿಭಟಿಸುತ್ತಾರೆ. ಗೌಡನು ಅವರನ್ನು ಸಮಾಧಾನಗೊಳಿಸುತ್ತಾನೆ.

ಪ್ರವೇಶ ೨: ತಿರುಚಿನಾಪಳ್ಳಿಯ ತಿರುಮಲನಾಯಕನು "ನಮ್ಮ ವೀರಮಲ್ಲನನ್ನು ಕೊಂದು, ಮೈಸೂರಿನ ಮಹಾರಾಜನೂ ಆಗಿ, ವಿಜಯಾಪುರದ ಸೈನ್ಯಗಳನ್ನು ಕಷ್ಟವಿಲ್ಲದೆ ಗೆದ್ದು ಓಡಿಸಿ. ಈ ನೆರೆಯದೀ ಮಧುರೆಯ ನಾಡನ್ನೂ ಏನು ಮಾಡಿಬಿಡುವನೋ ಎಂಬ ತಲ್ಲಣದಿಂದ" ಕರುವಿಯನ್ನನ್ನು ರಣಧೀರನ ಕೊಲೆಗೆ ಕಳಿಸುತ್ತಾನೆ. ಕರುವಿಯನ್ ತನ್ನ ಜೊತೆಗೆ ಇಪ್ಪತ್ತು ಜನ ಜಟ್ಟಿಗರನ್ನೂ, ವೀರಮಲ್ಲನ ತಮ್ಮನಾದ, ಹತ್ತು ಜನಗಳ ಬಲವುಳ್ಳ, ಶಿಂದಲ್ಲೈಮಲ್ಲನನ್ನೂ ಕರೆದುಕೊಂಡು ಮೇಲಸೀಮೆಗೆ ಹೊರಡುತ್ತಾನೆ. **(ಈ ಪ್ರವೇಶದ ಕೊನೆಯ ಚೂರು ನಷ್ಟವಾಗಿದೆ.)**

ಪ್ರವೇಶ ೩ : [ಈ ಪ್ರವೇಶದಲ್ಲಿ ಕೊನೆಯ ಹತ್ತು ಪಂಕ್ತಿ ಮಾತ್ರ ಉಳಿದಿದೆ.] ಇದರಲ್ಲಿ ಸಿರೀಶನು ಬಂದು, "ಹೋಗು, ಸಕ್ಕ, ಬೇಗ ಬಾ" ಎಂದು ಸಕ್ಕನನ್ನು ಎಲ್ಲಿಗೋ ಕಳುಹುತ್ತಾನೆ.

ಪ್ರವೇಶ ೪ : ಕರ್ಪೂರಪಳ್ಳಿಯಲ್ಲಿ ಸಿರೀಶನ ಪತ್ನಿಯಾದ ಕಾಗಿಣಿಯನ್ನು ಅವಳ ದೊಡ್ಡ ಅತ್ತೆಯಾದ ಪಾರ್ವತಮ್ಮ ಗದರಿ, ಬೈದು, ಪೀಡಿಸುತ್ತಿದ್ದಾಳೆ. ಆ ವೇಳೆಗೆ ಮನ್ನಮರಾಜನೂ ಆತನ ಕುಲಗುರುವಾದ ಧರ್ಮೇಶ್ವರ ದೀಕ್ಷಿತನೂ ಬರುತ್ತಾರೆ. "ಆಯಾ ಹಳ್ಳಿಯೂರುಗಳಲ್ಲಿ ಗೌಡಂದಿರು ಹಿಂದಣಂತೆ ಪ್ರಬಲರಾಗಿ ಆಳುತ್ತಿದ್ದ ವರೆಗೆ ಊರೊಳಗಣ ದುರ್ಜನರಿಗೂ ಹೊರಗಣ ಸೂರೆಗಳ್ಳರಿಗೂ ಹೆದರಿಕೆಯಿರುತ್ತಿದ್ದಿತು. ಗೌಡರೆಲ್ಲ ಹೀಗೆ ಅಬಲರಾಗಿ ಮೋಚಿಕೊಂಡು ಮೂಲೆಗೆ ಬಿದ್ದರೆ, ಪ್ರತಿಯೊಂದು ಗ್ರಾಮವೂ ತಲೆಯೂರೂ ಗಡಿಯೂ ಸ್ವದೇಶದ ದುಷ್ಟರಿಗೂ ಪರದೇಶದ ಪೌಜುಗಳಿಗೂ ಎದೆಗೊಟ್ಟು, ಆವಾಗಳೂ ಕತ್ತಿಯ ಬಾಯ್ದಾರೆಯ ಮೇಲೆ ಜೀವಿಸುತ್ತಿರಬೇಕಾಗುವುದು" ಎಂದು ಧರ್ಮೇಶ್ವರನು ಹೇಳಿ, ಹಳ್ಳಿಯ ಸ್ವಾಮಿತ್ವವನ್ನೂ

ಗಾಡಿಕೆಯನ್ನೂ ಉಳಿಸಿಕೊಳ್ಳಲು ಮನ್ನಮನೇ ಹೋಗಿ ರಾಜರನ್ನು ಕಂಡು ಬರಬೇಕೆಂದು ಬೋಧಿಸುತ್ತಾನೆ. ಅದೇ ಸಂದರ್ಭದಲ್ಲಿಯೇ, ಶ್ರೀರಂಗಪಟ್ಟಣದಲ್ಲಿರುವ ತನ್ನ ತಮ್ಮನಾದ ವಿಶ್ವನಾಥಶಾಸ್ತ್ರಿಯು ಮನೆಗೆ ಸಿರೀಶನ ಹೆಂಡತಿಯಾದ ಕಾಗಿಣಿಯನ್ನು ಮನ್ನಮನೊಡನೆ ಕಳುಹುತ್ತಾನೆ.

ಪ್ರವೇಶ ೫: ಕರ್ಪೂರವಳ್ಳಿಯಿಂದ ಪಟ್ಟಣಕ್ಕೆ ಹೋಗುವ ದಾರಿಯು ಮಹಾರಣ್ಯದಲ್ಲಿ ಶಿಂಪಲ್ಲೆಮಲ್ಲನೂ ಕರುವಿಯನ್ನನೂ ಮನ್ನಮನಿಗಾಗಿ ಕಾಯುತ್ತಿದ್ದಾರೆ. ತೊರೆಯ ಬಳಿ ಮನ್ನಮನು ಗಾಡಿಯನ್ನು ನಿಲ್ಲಿಸಿ, ಕಾಗಿಣಿಗೆ ಪಂಟಿಯನ್ನು ಕಾವಲಿರಿಸಿ ಹೋದ ಹೊತ್ತಿನಲ್ಲಿ ಶಿಂಪಲ್ಲೆಮಲ್ಲನು ಪಂಟಿಯನ್ನು ಹಿಂದಿನಿಂದ ಕೊಂದು, ಕಾಗಿಣಿಯನ್ನು ಎಳೆದುಕೊಂಡು ಹೋಗುತ್ತಾನೆ. ಮನ್ನಮನು ಹಿಂದಿರುಗಿ ಬಂದಮೇಲೆ, ಕರುವಿಯನ್ ಆಗಂತುಕನಂತೆ ಅವನ ಜೊತೆಸೇರಿ, ಅವನಿಗೆ ದಾರಿ ತಪ್ಪಿಸಿ, ಶ್ರೀರಂಗಪಟ್ಟಣಕ್ಕೂ ಮೈಸೂರಿಗೂ ನಡುವೆ ಕೈಬಿಡುತ್ತಾನೆ.

ಪ್ರವೇಶ ೬ : ಅದೇ ಅರಣ್ಯದ ಮತ್ತೊಂದು ಕಡೆ. ರಣಧೀರನನ್ನು ಕೊಲ್ಲಲು ಆಗದಿದ್ದರೆ, ಸಿರೀಶನನ್ನಾದರೂ ತೀರಿಸಬೇಕೆಂದು ಶಿಂಪಲ್ಲೆ ಕರ್ಪೂರವಳ್ಳಿಗೆ ಹೋಗಿದ್ದನೆಂದೂ, ಆದರೆ ಸಿರೀಶನು ನೆನ್ನೆ ಕರ್ಪೂರವಳ್ಳಿಯಿಂದ ಪಟ್ಟಣಕ್ಕೆ ಹೋದನೆಂಬುದನ್ನು ತಿಳಿದು, ಸಿರೀಶನ ಪತ್ನಿಗಾಗಿ ಅವನು ಹೊಂಚುತ್ತಿದ್ದನೆಂದೂ ಇಲ್ಲಿ ತಿಳಿಯುತ್ತದೆ.

ಪ್ರವೇಶ ೭ : ಮೈಸೂರಿಗೂ ಶ್ರೀರಂಗಪಟ್ಟಣಕ್ಕೂ ನಡುವಿನ ದಾರಿ. ಚಂದ್ರಗಿರಿಯ ಜೀವನ್ನ ಪಂತನೂ ವಿಜಾಪುರದ ಹಮೀದ್‌ಖಾನನೂ ಮಾತನಾಡುತ್ತಿರುವಾಗ ಮೈಸೂರಿಂದ ಪಟ್ಟಣದ ಉಗ್ರಾಣಕ್ಕೆ ಬೋನ ಬರುತ್ತದೆ. ಹಮೀದ್‌ಖಾನ್ ಆ ಅಡುಗೆಯ ಶಿಷ್ಟಾಚಾರವನ್ನು ಅಪ್ಪಗಟ್ಟಿ ಆ ಅಡುಗೆಯನ್ನು ರುಚಿನೋಡುತ್ತಾನೆ. ಅದೇ ವೇಳೆಗೆ ಅಲ್ಲಿ ಕರುವಿಯನ್ನು ಮತ್ತು ಮನ್ನಮ ಬಂದು ಸೇರುತ್ತಾರೆ. ಅರಮನೆಗೆ ಆದ ಅಪಚಾರವನ್ನು ಕಂಡು ಮನ್ನಮನು ಜೀವನ್ನ ಪಂತನನ್ನು ಕುರಿತು 'ನೀವು ಮೈಸೂರಿನ ಪ್ರಜೆಯಲ್ಲದ್ದು ಮಹಾಸ್ವಾಮಿಯವರ ಸೌಭಾಗ್ಯ' ಎನ್ನುತ್ತಾನೆ. ಸ್ವಲ್ಪ ಹೊತ್ತಿನಲ್ಲಿ ತುಂಗರಾಯನು ಅಳಗರಾಜರೊಡನೆ ಅಲ್ಲಿ ಬರುತ್ತಾನೆ. ಮಹಾರಾಜನಿಗೂ ಮನ್ನಮ ರಾಜನಿಗೂ ವೈಮನಸ್ಯವುಂಟಾಯಿತೆಂದು ತುಂಗನು ಹಿಗ್ಗಿದಾಗ,

"ಪ್ರಭುತ್ವದವರು ನನ್ನ ಕೈಗೆ ಭಿಕ್ಷೆಯೋಡನ್ನಿತ್ತು, ಸ್ವದೇಶಭ್ರಷ್ಟನನ್ನಾಗಿ ಅಟ್ಟಿಬಿಟ್ಟರೂ ನಮ್ಮನ್ನಾಳುವ ಶ್ರೀ ರಣಧೀರ ಕಂಠೀರವ ನರಸರಾಜಸ್ವಾಮಿಯವರಿಗೆ ನಾನು ಆಜೀವವೂ ವಿಧೇಯನಾಗಿರುವ ಪ್ರಜೆಯು" ಎಂದು ಮನ್ನ ಮನೆನ್ನುತ್ತಾನೆ. ತುಂಗರಾಯನು ಅವನ ಮನಸ್ಸಿನಲ್ಲಿ ವಿಷವನ್ನು ಬಿತ್ತುವುದಕ್ಕಾಗಿ ಜೊತೆಯಲ್ಲೆ ನಿಲ್ಲುತ್ತಾನೆ.

ಪ್ರವೇಶ ೮ : ಉತ್ತನಹಳ್ಳಿಯ ಜ್ವಲಜ್ಜಿಹ್ವಾದೇವಾಲಯದ ಹಿನ್ನೆಲೆಯ ತೋಪಿನಲ್ಲಿ. ಸಿರೀಶನೂ ರಣಧೀರನೂ ತೋಪಿನ ಕಾವಲಿಗೆ ದಳವಾಯಿ ನಂಜರಾಜಯ್ಯನನ್ನು ನಿಲ್ಲಿಸುತ್ತಾರೆ. ಬೆಟ್ಟದ ಚಾಮರಾಜ ಒಡೆಯರು ನಿರ್ದೇಶಿಸಿದ್ದ ಒಂದು ಕಲ್ಲಿನ ಹಾಸರೆಯನ್ನು ತಾನು ಒಬ್ಬನೇ ಎತ್ತಿ ನಿಲ್ಲಿಸಲು ರಣಧೀರನು ಯತ್ನಿಸುತ್ತಾನೆ. ಯತ್ನಿಸಿ, ಎತ್ತಿ ಎಸೆಯುತ್ತಾನೆ. ಕೆಳಗೆ ಕಂಡುಬಂದ ಬಿಲಮುಖದಲ್ಲಿ ಸಿರೀಶನೂ ರಣಧೀರನೂ ಪ್ರವೇಶಿಸುತ್ತಾರೆ. ನಕ್ರನು ಹೊರಗೆ ಕಾವಲು ನಿಲ್ಲುತ್ತಾನೆ.

ಪ್ರವೇಶ ೯ : ಅದೇ ತೋಪಿನ ಹೊರಗೆ. ಸಿರೀಶನು ತಾನು ಮಾತ್ರ ನಿಂತು, ತನ್ನನ್ನು ಕಳುಹಿದನಲ್ಲಾ ಎಂದು ದಳವಾಯಿ ನಂಜರಾಜಯ್ಯನಿಗೆ ಅಸಮಾಧಾನ. ಅಲ್ಲಿಗೆ ಕಾಗಿಣಿ ಕೆಂದಲ್ಲಿಮಲ್ಲನ ಕೈಯಿಂದ ನುಣಿಚಿಬಂದು, ತಾನು ಕೇಳಿದ ಪ್ರಕಾರ ತಿರುಚಿನಾಪಳ್ಳಿಯ ಜೆಟ್ಟಿಗರ ಆಗಮನವನ್ನು ದಳವಾಯಿಗೆ ತಿಳಿಸಿ ಎಚ್ಚರಿಸುತ್ತಾಳೆ. ಕೆಂದಲ್ಲೆ ಹಿಂದಿನಿಂದ ಬಂದು ಅವಳ ಬಾಯಿಮುಚ್ಚಿ ಒಯ್ಯುತ್ತಾನೆ. ದಳವಾಯಿ ಆ ಕೆಂದಲ್ಲೆಯ ಭೂತಾಕಾರದಿಂದ ಕ್ಷಣಕಾಲ ಸಮ್ಮೋಹಿತನಾಗಿದ್ದು, ಅನಂತರ ಎಚ್ಚತ್ತು, ಅವರ ಬೆನ್ನು ಹತ್ತುತ್ತಾನೆ. ಅವರನ್ನು ಕಾಣದೆ, ತೋಪಿನ ಒಳಗೆ ಮೂವರೇ ಇರುವುದನ್ನು ನೆನೆದು ಅಲ್ಲಿಗೆ ಧಾವಿಸುತ್ತಾನೆ.

ಪ್ರವೇಶ ೧೦ : ಬಿಲಮುಖದಿಂದ ಇಳಿದು ನೆಲಮಾಳಿಗೆಗೆ ಹೋದ ರಣಧೀರ ಸಿರೀಶರು ಅಲ್ಲಿ ಕೊಪ್ಪರಿಗೆಗಳನ್ನು ಕಾಣುತ್ತಾರೆ. ಅಲ್ಲಿಯ ಆಭರಣಗಳ ಜೊತೆಗೆ ಒಂದು ತಾಮ್ರಶಾಸನವಿರುತ್ತದೆ. ಅದರಲ್ಲಿ : ಬೆಟ್ಟದ ಚಾಮರಾಜ ಒಡೆಯರು ತಮಗೆ ಬೇಡದ ರಾಜ್ಯಭಾರವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಒಂದು ಉಪಾಯವನ್ನು ಹೂಡಿದರೆಂದೂ; ಕಂದಾಯದ ಹಣವನ್ನು ಸ್ವಾರ್ಥಕ್ಕೆ ದುರುಪಯೋಗಪಡಿಸಿಕೊಂಡಂತೆ ನಟಿಸಿದಾಗ, ಅದನ್ನು

ನಿಜವೆಂದೇ ನಂಬಿ, ಅರಮನೆಯವರು ಅವರನ್ನು ತಪ್ಪಿಸಿ ರಾಜಒಡೆಯರಿಗೆ ಪಟ್ಟಕಟ್ಟಿದರೆಂದೂ ; ರಾಜ್ಯದ ಕೋಶವನ್ನು ತುಂಬುವುದಕ್ಕಾಗಿ ಅಂತಃಪುರದವರು ತಮ್ಮ ಆಭರಣಾದಿಗಳನ್ನು ಮಾರಿದಾಗ, ಬೆಟ್ಟದ ಚಾಮರಾಜರು ಅವುಗಳನ್ನು ತಮ್ಮ ನಂಬಿಕೆಯ ಶೆಟ್ಟಿಯ ಮೂಲಕ ತಾವೇ ಕೊಂಡುಕೊಂಡು, ತಾವು ಬಚ್ಚಿರಿಸಿದ್ದ ಕಂದಾಯದ ಹಣವನ್ನು ಅದಕ್ಕೆ ಬದಲಾಗಿ ಕೊಟ್ಟರೆಂದೂ; ಈಗ ಅವೇ ಆಭರಣಗಳು ಇಲ್ಲಿಯ ಕೊಪ್ಪರಿಗೆಯಲ್ಲಿ ಇರುವವುಗಳು, ಇವುಗಳನ್ನು ರಣಧೀರನು ಒಪ್ಪಿಸಿಕೊಳ್ಳಬೇಕೆಂದೂ—ಬರೆದಿತ್ತು. ರಣಧೀರನು ಅದುವರೆಗೆ ತಂದೆಯನ್ನು ‘ರಾಜ್ಯವನ್ನಾಳುವುದಕ್ಕೆ ಅರಿಯದ ಆದರ ತಗಡ ಕಸವೆಂಬ ಅಣಕದ ತಿರಸ್ಕಾರದ’ ಭಾವದಿಂದ ನೋಡುತ್ತಿದ್ದವನು ಪಶ್ಚಾತ್ತಾಪಗೊಂಡು, ತಂದೆಯ ಆಜ್ಞೆಯನ್ನು ಪಾಲಿಸಿ ಕೃತಾರ್ಥನಾಗಬೇಕೆಂದು ನಿಶ್ಚೈಸುತ್ತಾನೆ. ಆ ಹೊತ್ತಿಗೆ, ದಳವಾಯಿ ಬಂದು ತಿಳಿಸಿದ ಸುದ್ದಿಯನ್ನು ಕೇಳಿ, ಬಿಲಮುಖದಲ್ಲಿದ್ದ ಸಕ್ಕನು ವಿಪತ್ಸೂಚಕವಾದ ಶಂಖವನ್ನು ಪೂರೈಸುತ್ತಾನೆ.

ಪ್ರವೇಶ ೧೧: ಶ್ರೀರಂಗಪಟ್ಟಣದ ಅರಮನೆಯಲ್ಲಿ ಸಂಜೆಯ ಸನ್ನಿಧಾನದ ತೊಟ್ಟಿ. ಸಭೆಯು ಭಾರತೀ ನಂಜನೆಂಬವನ ಗಮಕದಿಂದ, ಪದ್ಮಣ ಪಂಡಿತನ ಕವಿತೆಯಿಂದ, ನರ್ತನ ಜಡೆಕೋಲಾಟಗಳಿಂದ ಆರಂಭವಾಗುತ್ತದೆ. ಅನಂತರ, ನೆಲಮಾಳಿಗೆಯಲ್ಲಿ ತನಗೆ ದೊರಕಿದ ನಿಧಿಯನ್ನು ಬಳಸಿಕೊಂಡು ಕಂಠೀರವನು ಸೃಜಿಸಿರುವ ಹೊಸ ನಾಣ್ಯಗಳ ಪ್ರಚಾರಕ್ಕಾಗಿ ನಾಳೆಗೆ ಮಾಡಿರುವ ಏರ್ಪಾಡುಗಳನ್ನು ಕುರಿತು ವಿಚಾರಣೆಯಾಗುತ್ತದೆ. ಆ ಬಳಿಕ, ರಣಧೀರನ ಕೆಲವು ಆಸ್ಥಾನದ ಕಟ್ಟುಪಾಡುಗಳನ್ನು ಮೀರಿ ನಡೆದುದಕ್ಕಾಗಿ ಭಾರತಿ ನಂಜನಿಗೂ ಪ್ರಧಾನಿ ನಾರಾಯಣಪ್ಪನಿಗೂ ಓಲಗದ ಪಾತ್ರೆಯರಿಗೂ ದಂಡನೆಯಾಗುತ್ತದೆ. ದಳವಾಯಿಯು ಕಾಗಿಣೆಯ ಮುಖದಿಂದ ತಾನು ಕೇಳಿದ ಕಳ್ಳಚೆಟ್ಟಿಗರ ಸುದ್ದಿಯನ್ನು ಸಮ್ಮುಖದಲ್ಲಿ ತಿಳಿಸುತ್ತಾನೆ: ‘ಇಂಥ ವಿಪರಿಕೆಯ ವೃತ್ತಾಂತವನ್ನು ಆಸ್ಥಾನದ ವರೆಗೆ ತಾರದಿರು’ ಎಂದು ರಣಧೀರನು ಅವನನ್ನು ಗದರುತ್ತಾನೆ. ಅದೇ ವೇಳೆಗೆ, ರಣಧೀರನ ಹೊಸ ನಿಯಮದಿಂದ ಕ್ರುದ್ಧನಾದ ಭೋಳಬೀರೇಗೌಡನೆಂಬವನು ಸಭೆಗೆ ನುಗ್ಗಿ ರಣಧೀರನನ್ನು ಕೊಲ್ಲಲು ಯತ್ನಿಸುತ್ತಾನೆ: ರಣಧೀರನು ಅವನನ್ನು ಸೆರೆಹಿಡಿಸಿ, ಚಿಕ್ಕಗಿಡ್ಡಂಗಿಗೆ ಕಳು

ಹಿಸಿ, 'ರಾಜ್ಯದಾಡಳಿತವು ಈ ಪುಟ್ಟಿಗೆ ಸಡಿಲಾಯಿತೆ?' ಎಂದು ದಳವಾಯಿಗೆ ಛೀಮಾರಿ ಮಾಡುತ್ತಾನೆ. ಸಭೆ ವಿಸರ್ಜನೆಯಾಗುತ್ತದೆ.

ಪ್ರವೇಶ ೧೨: ಶ್ರೀರಂಗಪಟ್ಟಣದ ಅರಮನೆಯ ಮುಮ್ಮೊಗದ, ಟಂಕಶಾಲೆಯ ಮುಂದಣ ತಪಗ. ರಣಧೀರನು ಕಂಠೀರಾಯ ಹಣವನ್ನು ಪ್ರಕಟಿಸುತ್ತಾನೆ. ಆ ಸಮಯದಲ್ಲಿ "ಪರದೇಶದ ಭಯವು ಭಾಷೆಯು ಉಡುಗೆ ತುಡುಗೆಗಳು ಆಚಾರಪದ್ಧತಿಗಳು ಮತವು ನಾಣ್ಯಗಳು ವಿದ್ಯಾಕ್ರಮವು ಎಲ್ಲಿ ನೆಲೆಗೊಂಡಾಳುತ್ತಿರುವುವೋ ಆ ನಿರ್ಭಾಗ್ಯದೇಶೀಯರಿಗೆ ಸ್ವತಂತ್ರತೆಯೆಂಬುದು ಅಪವಾದ ವಿಡಂಬನ ಹೃತ್ಸಂತಾಪಗಳ ಸ್ವರೂಪವು ಮಾತ್ರ; ನಮ್ಮ ರಾಜ್ಯದಲ್ಲಿ ಇಂದಿನವರೆಗೆ ಪರತಂತ್ರ್ಯದ ಲಕ್ಷಣವಾಗಿ ಪ್ರಚಾರದಲ್ಲಿದ್ದ ಒಂದೇ ಸಾಧನವು ಅನೇಕ ದೇಶಗಳ ಅಗಣಿತವಾದ ನಾಣ್ಯಗಳನ್ನೊಪ್ಪಿ, ನಾವು ಉಪಯೋಗಿಸಿಕೊಳ್ಳುತ್ತಿದ್ದುದು. ಈ ನ್ಯೂನತೆಯ ಅಂತಸ್ತಾಪವು ಈಗ ಕಡೆಗಂಡಿತು, ನಮ್ಮ ಪ್ರಜಾವಳಿಯ ಸುಕೃತದಿಂದ, ನಮ್ಮ ಹಿರಿಯರ ನಿಃಸ್ವಾರ್ಥತೆ—ಅವರ ಸುಫಲವಿದಾಗಿ ಈ ರಾಜಧಾನಿಯಲ್ಲಿ ಟಂಕಸಾಲೆಯು ಸ್ಥಾಪಿತವಾಯಿತು.... ನಮ್ಮ ಹೊಸ ನಾಣ್ಯಗಳ ಮೊದಲ ಮುಖದಲ್ಲಿ ಶ್ರೀ ಯೋಗನರಸಿಂಹದೇವನ ದಿವ್ಯಾಂಗಕಮುದ್ರೆಯು, ಹಿಂದಣ ಪುಟದಲ್ಲಿ ಈ ನಾಣ್ಯದ ಪ್ರಚಾರವು ಆಚಂದ್ರಾರ್ಕವೆಂಬರ್ಥಕ್ಕೆ ಸೂರ್ಯಚಂದ್ರ ಚಿಹ್ನೆಗಳೂ ಸೂಚಿತವಾಗಿವೆ.... ಸುಪ್ರಜೆಗಳೇ, ಸ್ವದೇಶವತ್ಸಲತೆಯ ಪರಮೋತ್ಸಾಹವು ಮಹೀಶೂರ ದೇಶದ ಅಭಿಮಾನವು ಸ್ವಾವಲಂಬನವು ಸಂಪತ್ತಿಯು ಧರ್ಮವು ವ್ಯಾಪಾರವು ಶ್ರೀಯಶಸ್ಸು—ಇವು ಅಭ್ಯುದಯಪ್ರಶಸ್ತಿಗಳಿಗೇರಿ. ಈ ನಮ್ಮ ಟಂಕಸಾಲೆಯ ಪ್ರಭಾವತೆಯಿಂದ ನಮ್ಮೆಲ್ಲರ ಜೀವನ ಪ್ರತಿಭೆಯು ಸಾರ್ಥಕವಾಗುವಂತೆ ಶ್ರೀ ನೃಸಿಂಹನು ಕರುಣಿಸಲಿ" ಎಂದು ಭಾಷಣಮಾಡಿ ಹೊಸನಾಣ್ಯಗಳನ್ನು ಹಿಡಿ ಹಿಡಿ ಎರಚುವನು. ಜನ ಅವನ್ನು ಆಯ್ದುಕೊಳ್ಳುವರು.

ಪ್ರವೇಶ ೧೩: ಶ್ರೀರಂಗಪಟ್ಟಣದ ಒಂದು ಬೀದಿ. ಅರಮನೆಯ ಘೋಳಾಯಲವಳದ ರಾವುತನಾದ ಪುಟ್ಟೀರಯ್ಯನೆಂಬವನು ಒಂದು ಹೊಸ ನಾಣ್ಯವನ್ನು ಹಿಡಿದು ಹಿಗ್ಗುತ್ತ ಬರುವನು. ಅರಮನೆಯ ಪುರೋಹಿತನಾದ ಲಿಂಗಾಭಟ್ಟನು "ಇಂದಿನ - ಶ್ರೀ ನೃಸಿಂಹಜಯಂತಿಯ ಶ್ರೀಮನ್ಮಹಾರಾಜರ

ವರ್ಷವರ್ಧಂತ್ಯುತ್ಸವದ ಶ್ರೀ ನಾಣ್ಯ ಪ್ರಚಾರದ ಸಮಾರಂಭದ—ಈ ಮುಮ್ಮಡಿ ಹಬ್ಬದ ದಿವಸ" ಎಂದು ತಾನೂ ಸಂತೋಷದಿಂದ ಬಂದು; ಹಿಂದಿನ ಇಬ್ಬರು ರಾಜರೂ ಸ್ತ್ರೀಲೋಲರಾಗಿ ಸುಂದರೀಉಪಾಸಕರಾಗಿ ಇದ್ದುದು ಹೋಗಿ ಈ ರಣಧೀರನು ದೇವಪೂಜಾವ್ರತಗಳನ್ನೂ ದೇವಾಲಯ ಜೀರ್ಣೋದ್ಧಾರಗಳನ್ನೂ ಕೈಕೊಂಡುದಕ್ಕೆ ಹರ್ಷಿಸಿ; ಇನ್ನು ಮುಂದೆ ಬ್ರಾಹ್ಮಣರ ವರ್ಗವು ಮದುವೆಯಲ್ಲಿ ಧಾರೆಯ ಫಲತಾಂಬೂಲಕ್ಕೆ ಕಂಠೀರವ ರಾಯ ಹಣವನ್ನೇ ದಕ್ಷಿಣೆಯಾಗಿ ಬಳಸುವರೆಂದು ಹೇಳಿ ಹೋಗುತ್ತಾನೆ. ಇತ್ತ, ತನ್ನ ಕೈಯ ನಾಣ್ಯಪಲ್ಲಿಯೇ ಮುಳುಗಿಹೋಗಿದ್ದ ಪುಟ್ಟಗಿರಿಯ ಬಳಿಗೆ ಶಿಂದಲ್ಮೈಮಲ್ಲನು ಬಂದು, 'ಅರಮನೆಯವರು ದೇವಾಲಯಕ್ಕೆ ಹೋಗುವುದು ಎಷ್ಟು ಹೊತ್ತಿಗೆ?' ಎಂದು ಕೇಳುತ್ತಾನೆ. ಅನ್ಯಮನಸ್ಕನಾಗಿ ಉತ್ತರಕೊಡದ ಪುಟ್ಟಗಿರಿಗೂ ಶಿಂದಲ್ಮೈಮಲ್ಲನಿಗೂ ಮಾತು ಬೆಳೆದು ಜಗಳವಾಗುತ್ತದೆ. ಆ ವೇಳೆಗೆ ಸಿರೀಶನು ಅಲ್ಲಿಗೆ ಬಂದು, ಪುಟ್ಟಗಿರಿಯನ್ನು ಗದರಿಸಿ, ಶಿಂದಲ್ಮೈಮಲ್ಲ ನನ್ನು ಗುರುತಿಸುತ್ತಾನೆ. ಶಿಂದಲ್ಮೈಮಲ್ಲನು "ಅವಳು ತೂಗುಯ್ಯಾಲಾಡು ತ್ತಿದ್ದಾಳೆ—ಚಾಮುಂಡಿಯ ಬೆಟ್ಟದ ಕೋಣನ ಅರೆಯ ಮಂಟಪದೊಳಗೆ" ಎಂದು ಹೇಳಿ ಹೊರಡುತ್ತಾನೆ. ಸಿರೀಶನು ಅವನನ್ನು ಹಿಡಿಸಿ, ದೊಡ್ಡ ಗಿಡ್ಡಂಗಿಗೆ ಕಳುಹಿಸಿ, ತನ್ನ ಕತ್ತಿಯನ್ನು ಪುಟ್ಟಗಿರಿಯ ಕೈಲಿಟ್ಟು, ತಾನು ಬೆಟ್ಟಕ್ಕೆ ಓಡುತ್ತಾನೆ.

ಪ್ರವೇಶ ೧೪: ಶ್ರೀರಂಗಪಟ್ಟಣದ ಹೊರಗೆ. ಚಂದ್ರವನದ ಅಂತ ರಾಳ. ಮನ್ನಮರಾಜನಿಗೆ ತಮ್ಮ ಗುಂಪಿನ ಯಜಮಾನ್ಯವನ್ನು ಒಪ್ಪಿಸಿದ್ದ ಕ್ಕಾಗಿ ಕರುಪಿಯನ್ ತುಂಗರಾಯನನ್ನು ಆಕ್ಷೇಪಿಸುತ್ತಾನೆ. "ಗೌಡರ ಯಜಮಾನ್ಯವನ್ನು ತೋರಬಲ್ಲೆವಾದರೆ ನಮಗಾವ ಹಾನಿಯೂ ಇಲ್ಲ" ಎಂದು ತುಂಗರಾಯನು ಸಮಾಧಾನ ಹೇಳುತ್ತಾನೆ. ಆ ವೇಳೆಗೆ ಶಿಂದಲ್ಮೈ, ಹಮೀದ್ ಖಾನ್, ಜೀವನ್ನಪಂತ, ಮನ್ನಮರಾಜರು ಅಲ್ಲಿಗೆ ಬರುತ್ತಾರೆ. ತುಂಗರಾಯ ಜೀವನ್ನಪಂತ ಕರುಪಿಯನ್ ಒಬ್ಬೊಬ್ಬರೂ ರಣಧೀರನ ಸ್ತ್ರೀ ಲೋಲುಪತೆಯ ವಿಷಯವಾಗಿ ಮನ್ನಮನಿಗೆ ಜಾಡ ಹೇಳುತ್ತಾರೆ. ಆರಾರು ಏನೇನು ಹೇಳಿದರೂ ಮನ್ನಮನಿಗೆ ನಂಬಿಕೆಯಾಗದಿರಲು, ತುಂಗರಾಯನು ಬಸವಮಲ್ಲಯ್ಯನನ್ನೂ ಅಳಗರಾಜನನ್ನೂ ಕರೆತರುತ್ತಾನೆ. ಮನ್ನಮನ

ಬಸವಮಲ್ಲನನ್ನು ಬಲ್ಲ. ಬಸವಮಲ್ಲನೂ ಅದೇ ಕಥೆಯನ್ನೇ ಹೇಳಿ, ಬೇಕಾದರೆ ರಾತ್ರಿ ಸೆಜ್ಜೆಗೆ ಬನ್ನಿ, ಕಣ್ಣಾರ ತೋರಿಸುತ್ತೇನೆ, ಎನ್ನುತ್ತಾನೆ. ಇದೂ ಅಲ್ಲದೆ ರಣಧೀರನು ಕಾಗಿಣೆಗಾಗಿ ಆಸೆಪಟ್ಟನೆಂದೂ, ಅದನ್ನು ತಿಳಿದ ಯಾರೋ ಧರ್ಮಾತ್ಮರು ಕಾಗಿಣೆಯನ್ನೂ ವಿಶ್ವನಾಥಶಾಸ್ತ್ರಿಗಳನ್ನೂ ಕರ್ಪೂರದಪಳ್ಳಿಗೆ ಕರೆದೊಯ್ದರೆಂದೂ, ಈ ರಾಜನ ಕಾಮಕ್ಕೆ ಸಿರೀಶ ಬಲಿ ಬಿದ್ದನೆಂದೂ ಹೇಳುತ್ತಾನೆ. ಅದನ್ನು ಕೇಳಿ ಮನ್ನುಗೌಡನು ಕ್ರುದ್ಧನಾಗುತ್ತಾನೆ. ಈ ನಡುವೆ, ಹಬೀಬ್ ಖಾನನು ಅವರ ಗುಟ್ಟನ್ನೆಲ್ಲಾ ರಟ್ಟು ಮಾಡುವನಾದರೂ, ಮನ್ನುಗೌಡನು ತನ್ನ ಕಣ್ಣಾರೆ ಕಂಡೇ ನಂಬುವೆನೆಂದು ಬಸವಮಲ್ಲನೊಡನೆ ಹೋಗುತ್ತಾನೆ. ಅವನು ಅತ್ತ ಹೋದೊಡನೆಯೇ ತುಂಗರಾಯನು ಕರುವಿಯನ್ ಮತ್ತು ಶಿಂಗಲ್ಬೈನುಲ್ಲರ ಸಹಾಯದಿಂದ ಹಬೀಬ್ ಖಾನನನ್ನೂ ಜೀವನ್ನ ಪಂತನನ್ನೂ ಬಂಧಿಸಿಹಾಕುತ್ತಾನೆ.

ಪ್ರವೇಶ ೧೫ : ಪ್ರೈಮೂರು. ಮಹಾಬಲಿಪರ್ವತಕ್ಕೆ ಹೋಗುವ ದಾರಿ. ಚಕ್ಕನು ರಣಧೀರನಿಗೆ ಸಿರೀಶನ ಪೂರ್ವ ವೃತ್ತಾಂತವನ್ನು ಹೇಳುತ್ತಾನೆ. ಧರ್ಮೇಶ್ವರಶಾಸ್ತ್ರಿಗಳ ತಮ್ಮಂದಿರಾದ ವಿಶ್ವೇಶ್ವರಶಾಸ್ತ್ರಿಗಳು—ಇವರೇ ರಣಧೀರನಿಗೆ ತಿರುಚಿನಾಪಳ್ಳಿಯ ಜೆಟ್ಟಿಯ ವಿಷಯ ಹೇಳಿದವರು—ರಣಧೀರನಿಗೆ ಮುಂದೊದಗಬಹುದಾದ ಗಂಡಗಳನ್ನು ಗುಣಿಸಿ ತಿಳಿದು, ಅವನ್ನು ನಿವಾರಿಸಲು ತಮ್ಮ ಮಗನಾದ ಸಿರೀಶನನ್ನು ಬಲಿದಾನವಾಗಿ ಒಪ್ಪಿಸಿದರಂತೆ. ಆ ಕಾಲದಲ್ಲಿ ಗಂಡಸಿಂದ ದೂರವಾಗಿದ್ದು ಅವನಿಗೆ ನೆರವಾಗಲು ಅವನ ಹೆಂಡತಿಯಾದ ಕಾಗಿಣೆಯೂ ಒಪ್ಪಿದಳಂತೆ. ಚಕ್ಕನು ಈ ಪೂರ್ವಕಥೆಯನ್ನು ಹೇಳಿ, ಮುಂದೆ ಕಾಗಿಣೆ ಕರ್ಪೂರದಪಳ್ಳಿಯಿಂದ ಬರುವ ಮಾರ್ಗದಲ್ಲಿ ಅಪಹೃತಳಾದ ವೃತ್ತಾಂತವನ್ನೂ ದಾರಿಯಲ್ಲಿ ಪುಷ್ಪಗಿರಿ ಶಿಂಗಲ್ಬೈನುಲ್ಲ ಇವರಿಗೆ ಆಗುತ್ತಿದ್ದ ಜಗಳವನ್ನು ಬಿಡಿಸಿಬಂದ ಸಿರೀಶನು ಶಿಂಗಲ್ಬೈನುಲ್ಲನ ಬಾಯಿಂದ ಕಾಗಿಣೆಯ ವೃತ್ತಾಂತವನ್ನು ಕೇಳಿ ಹೋದುದನ್ನೂ ತಿಳಿಸುತ್ತಾನೆ.

ಪ್ರವೇಶ ೧೬: ಮಹಾಬಲಿಗಿರಿ ಕೋಟೆಯ ಅರಿವಿಂಬಿಯ ಪಾಳ್ ದೇಗುಲ. ಅಲ್ಲಿ ಕೈಕಾಲ್ ಜೋಡಿಸಿ ಕಟ್ಟಿದ ಕಾಗಿಣೆಯು ವಿಗ್ರಹ ಪೀಠದಿಂದ ನೇತಾಡುತ್ತಿದೆ. ಸಿರೀಶನು ಅಲ್ಲಿಗೆ ಬರುತ್ತಾನೆ. ನಿಲುವ ಬುದ್ಧಿಯೂ ಶಕ್ತಿಮಯವಾದ ಚಮತ್ಕೃತಿಗೆ, ಇಕ್ಕೆಲದ ನಡುವೆ ಸುಟ್ಟು ಮಾಡಿ. ಬೇರುಸಹಿತ

ಕಿತ್ತ ಕೂದಲು, ರಕ್ತದೊಡನೆ ಚಿಪ್ಪುಗಟ್ಟಿದ ಸುಣ್ಣ, ಸೀಳಿದು ಎಡೆದ ಚರ್ಮ ಇವುಗಳನ್ನು ಒಂದೊಂದಾಗಿ ಕಂಡು, ಮೂರ್ಛೆಹೋಗುತ್ತಾನೆ. ಅನಂತರ ರಣಧೀರನೂ ಸಕ್ಕನೂ ಅಲ್ಲಿಗೆ ಬಂದು, ಸಿರೀಶನಿಗೆ ಉಪಚರಿಸಿ ಎಚ್ಚರಿಸುತ್ತಾರೆ. ರಣಧೀರನು ವಿಜಯ ನಾರಸಿಂಹನಿಂದ ಕಾಗಿಣಿಯನ್ನು ತೂಗುವ ಹಗ್ಗವನ್ನು ಕತ್ತರಿಸುತ್ತಾನೆ; ಸಿರೀಶನು ಆ ದೀಪವನ್ನು ಆತುಕೊಂಡು, ಅಲ್ಲೇ ಎದೆಯೊಡೆದು ಸತ್ತು ಬೀಳುತ್ತಾನೆ. ರಣಧೀರನು ಮುಂದಿನ ಕಾರ್ಯವನ್ನು ಚಿಂತಿಸಿ, ಸಕ್ಕನಿಗೆ ಸಮಾಧಾನ ಹೇಳಿ, ಲಿಂಗಾಭಟ್ಟರು ಬರುವವರೆಗೂ ಅವನನ್ನು ಅಲ್ಲಿಯೇ ಕಾವಲಿಗೆ ಇರಹೇಳಿ, ಹೋಗುತ್ತಾನೆ.

ಪ್ರವೇಶ ೧೭ : ಶ್ರೀರಂಗಪಟ್ಟಣದಲ್ಲಿ ಬಸವಮಲ್ಲಯ್ಯನ ಮನೆ. ರಣಧೀರನ ಸೆಜ್ಜೆಯ ಬಚ್ಚಲ ಕೆಲದಲ್ಲಿ ತೋಡಿರುವ ಕನ್ನದ ಗುರುತನ್ನು ಬಸವಮಲ್ಲನು ಅನಗರಾಜನಿಗೆ ತಿಳಿಯಹೇಳಿ, ಅವನಿಂದ ಒಂದು ಲಕ್ಷದ ದ್ರವ್ಯ ಪಡೆಯುತ್ತಾನೆ. ಅನಗರಾಜನು ಹೊರಟುಹೋದ ಮೇಲೆ ಮನ್ನಮರಾಜ ಗೌಡನು ಬರುತ್ತಾನೆ. ಬಸವಮಲ್ಲನು ಸಿರೀಶನ ಮರಣದ ವಾರ್ತೆಯನ್ನು ತಿಳಿಸಿ, ಸಿರೀಶನ ಮರಣದಿಂದ ರಣಧೀರನ ಸೆಜ್ಜೆಯು ನಿಷ್ಕಂಟಕವಾಯಿತೆಂದು ಹೇಳಿ, ಸಂಜೆಗೆ ಬರುವಾಗ ಮನ್ನಮರಾಜನು ನಿರಾಯುಧನಾಗಿ ಬರಬೇಕೆಂದೂ, ಇಲ್ಲದೆಹೋದರೆ ಅವನು ಆಗ್ರಹದಲ್ಲಿ ಏನಾದರೂ ಕೈಮಾಡಿಬಿಡಬಹುದೆಂದೂ ಅವನನ್ನು ಒಪ್ಪಿಸುತ್ತಾನೆ. ಮನ್ನಮರಾಜ ಗೌಡನು ಬಸವಮಲ್ಲನ ನಡುಡಿಯ ಮೇಲಿನ ಆಣೆಯನ್ನಿಡಿಸಿ, ತಾನೂ ನಿಶ್ಶಸ್ತ್ರನಾಗುತ್ತಾನೆ.

ಪ್ರವೇಶ ೧೮ : ಶ್ರೀರಂಗಪಟ್ಟಣದ ಅರಮನೆಯಲ್ಲಿ ರಣಧೀರನ ಸೆಜ್ಜೆಯ ಶಾಲೆ. ರಾಣಿಯ ಅಪ್ಪೆಯಾದ ಮೀರಪ್ಪೆ ದೀಪ ಹಿಡಿದು ಹೋಗುತ್ತಾಳೆ. ತುಂಗರಾಯ, ಕಂಪಯ್ಯಮಲ್ಲ, ಅನಗರಾಜ, ಕರುಪಿಯನ್, ಉಳಿದ ಕನ್ನ ಚೆಟ್ಟಿಗರು ಒಬ್ಬೊಬ್ಬರಾಗಿ ಒಳಗೆ ಬಂದು ಒಂದೊಂದು ಕಂಬದ ಹಿಂದೆ ಅಡಗಿಕೊಳ್ಳುತ್ತಾರೆ. ಬಸವಮಲ್ಲನು ಮನ್ನಮರಾಜನನ್ನು ಕರೆತಂದು, ಒಂದು ಕಡೆ ಮರೆಮಾಡಿ ನಿಲ್ಲಿಸಿ ಹೋಗುತ್ತಾನೆ. ಮಹಾರಾಣಿ ಆಯಮ್ಮಣ್ಣಿ ತನ್ನ ಅಪ್ಪೆಯಾದ ಮೀರಪ್ಪೆಯೊಡನೆ ಬಂದು ರಣಧೀರನ ವಿಷಯವಾಗಿ ಮಾತನಾಡುತ್ತಿರುತ್ತಾಳೆ. ರಣಧೀರನು ಪ್ರವೇಶಿಸುತ್ತಾನೆ. ಮೀರಪ್ಪೆಯು ನಿಷ್ಕ್ರಮಿಸಿ, ಆ ಬಳಿಕ ಆಯಮ್ಮಣ್ಣಿಯೊಡನೆ ಸಲ್ಲಾಪ

ಮಾಡುತ್ತಿದ್ದಾಗ ರಣಧೀರನು ಕಂಬದ ಹಿಂದೆ ಅವಿತಿರುವ ನೆರಳನ್ನು ಕಾಣುತ್ತಾನೆ. ಸಾವಧಾನದಿಂದ ಅಯ್ಯಮ್ಮಣ್ಣಿಯನ್ನು ಒಂದು ದೊಡ್ಡ ಹರಿಗೆಯ ಹಿಂದೆ ಅವಿತಿರಿಸಿ, ವಿಜಯ ನಾರಸಿಂಹನನ್ನು ಒರೆಯಿಂದ ಉರ್ಚಿಕೊಂಡು, ಒಬ್ಬನನ್ನು ತಿವಿದುಕೊಂದು, ಉಳಿದವರನ್ನು ಕಾಳಗಕ್ಕೆ ಕರೆಯುತ್ತಾನೆ. ಎಲ್ಲರೂ ಒಟ್ಟಿಗೆ ಅವನತ್ತ ನುಗ್ಗುತ್ತಾರೆ. ಆಗ ಮುನ್ನಮರಾಜ ಗೌಡನು ಅವರ ದ್ರೋಹವನ್ನು ತಿಳಿದು, ತಾನೂ ರಣಧೀರನ ಸಹಾಯಕ್ಕೆ ನಿಲ್ಲುತ್ತಾನೆ. ತುಂಗರಾಯನು ಮುನ್ನಮರಾಜ ಗೌಡನತ್ತ ನುಗ್ಗುತ್ತಾನೆ.

ಪ್ರವೇಶ ೧೯ : ಶ್ರೀರಂಗಪಟ್ಟಣದ ಕೋಟೆಯ ಹೊರಗೆ. ಚಂದ್ರವನದ ಒಂದು ದೊಡ್ಡ ಪ್ರೋವರಿನ ಸಮೀಪ. ನಿರೀಶನ ಮರಣದಿಂದ ದಳವಾಯಿ ನಂಜರಾಜಯ್ಯನಿಗೆ ಸ್ವಲ್ಪ ಆಸೂಯೆ ಕಡಮೆಯಾಗಿದೆ. ಬೆಳುದಿಂಗಳಲ್ಲಿ ನಿಂತು ಊರನ್ನು ವರ್ಣಿಸುತ್ತಾ, ನಿರೀಶನು ಸತ್ತಮೇಲೆ ಉಳಿದವರೆಲ್ಲರೂ ತಮ್ಮತಮ್ಮ ಊರುಗಳಿಗೆ ಹೋಗುವುದೇ ಒಳ್ಳಿತೆಂದು ದಳವಾಯಿ ನಕ್ಕನಿಗೆ ಬೋಧೆ ಮಾಡುತ್ತಿದ್ದಾನೆ. ನಕ್ಕನಿಗೂ ಹಾಗೇ ಮನಸ್ಸಾಯಿತೆಂಬುದನ್ನು ಕಂಡು ಅವನು ಊರ ಕಡೆಗೆ ಹೋಗುತ್ತಾನೆ. ಹಿಂದೆ ತುಂಗರಾಯನಿಂದ ಕಟ್ಟುವಡೆದು ಬಿದ್ದಿದ್ದ ಚಿನ್ನಪಂತನು ಪೊದೆಯಿಂದ ಹೊರಟುಬಂದು ಬಿದ್ದು, ಮಹಾರಾಜನಿಗೆ ಅಡಸಿರುವ ಆ ರಾತ್ರಿಯ ವಿಪತ್ತನ್ನು ಗನಹುತ್ತಾನೆ. ನಕ್ಕನು ಒಂದೇ ಉಸಿರಿಗೆ ಅರಮನೆಯ ಕಡೆಗೆ ಓಡುತ್ತಾನೆ.

ಪ್ರವೇಶ ೨೦ : ರಣಧೀರನ ಸೆಜ್ಜೆಯಲ್ಲಿ. ಕೆಲವರು ಸತ್ತುಬಿದ್ದಿದ್ದಾರೆ, ಕೆಲವರು ಗಾಯಗೊಂಡು ಬಿದ್ದಿದ್ದಾರೆ. ಗಾಯಗೊಂಡ ತುಂಗರಾಯನು ಗತಿಸಿದ ವಿಕ್ರಮರಾಯನಲ್ಲಿ ಇಟ್ಟ ಸ್ವಾಮಿಭಕ್ತಿಯನ್ನು ಮೆಚ್ಚಿಕೊಂಡು, ರಣಧೀರನು ಅವನನ್ನು ತಾನು ನೇಮಿಸಿಕೊಳ್ಳಲು ಬಯಸುತ್ತಾನೆ. ಆದರೆ ವಿಫಲಮನೋರಥನಾದ ತುಂಗನು ರಣಧೀರನ ಸೇವೆಮಾಡಲು ಒಲ್ಲದೆ, ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾನೆ. ಮುನ್ನಮರಾಜನು ರಣಧೀರನ ಕ್ಷಮೆಯನ್ನು ಯಾಚಿಸಿ, ತನ್ನದೊಂದು ಶಂಕೆಯನ್ನು ರಣಧೀರನಲ್ಲಿ ಕೇಳುತ್ತಾನೆ : "ಮಹಾಸ್ವಾಮಿಯವರು ಪ್ರತಿಯೊಬ್ಬ ಗೌಡನನ್ನೂ ಐಶ್ವರ್ಯವಿರದ ಆ ಹಿಂದಣ ಅಧಿಕಾರ ಶಕ್ತಿಗಳಿಲ್ಲದ ನಿರ್ಬಲನನ್ನಾಗಿಸಿಬಿಟ್ಟರೆ, ಹಳ್ಳಿಯೂರ್ಗಳೆಲ್ಲ ಸೂರೆಕಾರರ ಆಟವಿಕರ ಪರದೇಶದ ಸೈನ್ಯಗಳ ಕಾಲ್ದಾಳಿಗೆ

ಕಯ್ಯಾಟಕ್ಕೆ ಕಾಲ್ಬಲಿತಕ್ಕೆ ವಶವಾಗಿ ಹಾಳುಬಿದ್ದುಹೋಗಿವೆ ?" ಅದಕ್ಕೆ ರಣಧೀರ ಉತ್ತರ ಹೇಳುತ್ತಾನೆ: "ಸೂರ್ಯ ಪ್ರತಿಬಿಂಬದ ಆವಶ್ಯಕತೆಯುಂಟಾಗಿದೆ, ಗೌಡಪರ್ಯ. ಚಂಚಲವಾಗುವ ಅಸ್ಥಿರ ಸ್ವಭಾವದ ನೀರ ಮಡಕೆಗಳನ್ನು ಬರಿದುಮಾಡಿ ಒಡೆದು ಕಳೆದು ಆಯೆಡೆಗಳಲ್ಲಿ ವಜ್ರದರ್ಪಣವನ್ನು ಸ್ಥಾಪಿಸುವುದು ದುಶ್ಶಾಸನವೆ ?" ಅದು ಕೇಳಿ ಮನ್ನೆಯರಾಜನಿಗೆ ಸಮಾಧಾನವಾಗುತ್ತದೆ. ಅಷ್ಟರಲ್ಲಿ, ರಣಧೀರನು ಹತನಾಗಿರಬೇಕು ಎಂದುಕೊಂಡು, ಬಸವಮಲ್ಲನು ಒಳಗೆ ಬರುತ್ತಾನೆ. ರಣಧೀರನನ್ನು ಕಂಡು, ಸ್ತಬ್ಧನಾಗಿ ಬೆಚ್ಚಿ ಓಡಿಹೋಗುತ್ತಾನೆ. ರಣಧೀರನು ಕಾವಲಿನ ಗೊಲ್ಲರನ್ನು ಕರೆದು, ಗಾಯಗೊಂಡವರ ಚಿಕಿತ್ಸೆಗಾಗಿ ವೈದ್ಯರನ್ನು ಸಕ್ಕನನ್ನೂ ಕರೆದು ತರಬೇಕೆಂದು ಆಜ್ಞೆ ಮಾಡುತ್ತಾನೆ. ಆ ವೇಳೆಗೆ ಸಕ್ಕನು ಅಲ್ಲಿಗೆ ತಾನೇ ಓಡಿಬರುತ್ತಾನೆ. ರಣಧೀರನನ್ನು ಕಂಡು, ತನ್ನ ಕಣ್ಣುಗಳನ್ನು ನಂಬಲಾರದೆ, ಸಲ್ಲಡಿಯಿಂದ ಹೋಗಿ ರಣಧೀರನನ್ನಪ್ಪಿಕೊಂಡು, ಅವನ ಕೈ ಮುಟ್ಟಿ, ಮುಖವನ್ನು ಮುಟ್ಟಿ ನೋಡಿ, ರಣಧೀರನು ಬದುಕಿರುವನೆಂದು ಮನಗಂಡ ಮೇಲೆ 'ರಣಧೀರ! ರಣಧೀರ!' ಎಂದು ಬಿಕ್ಕಿ ಬಿಕ್ಕಿ ಅಳುತ್ತ ಕುಸಿಯುತ್ತಾನೆ. ಅಷ್ಟುವೇಳೆಗೆ ಹೇಳಿಕಳುಹಿಸಿದ್ದ ದಳವಾಯಿ ಬಂದು, ಬಸವಮಲ್ಲಯ್ಯನ ಬೆನ್ನಟ್ಟಿಹೋಗಲು ಬಯಸಿದಾಗ ರಣಧೀರನು "ತಾನಾಗಿ ಬಾರದಿದ್ದರೆ—ಅವನನ್ನು ಹುಡುಕಿ ಹಿಡಿಯಬೇಡಿ. ನನ್ನ ಚಿಕ್ಕಂದಿನ ಗರುಡಿಯ ಸ್ನೇಹ—ಅದು ಅತನಿಗೆ ರಕ್ಷೆಯಾಗಲಿ" ಎಂದು ಆ ದ್ರೋಹಿಯನ್ನು ಕ್ಷಮಿಸುತ್ತಾನೆ. ಇತ್ತ ಸಕ್ಕನು ಹಜಾರದ ಹಿಂದೆ ಯಾರದೋ ಕಾಲಿನ ಚಲನವನ್ನು ಕಂಡು ಅತ್ತ ನುಗ್ಗುತ್ತಾನೆ. "ಹೊರಗೆ ಬಾ, ಆಯಿಮ್ಮ" ಎಂದು ರಣಧೀರನು ಕರೆಯುತ್ತಾನೆ. ಪಟ್ಟದ ಮಹಿಷಿ ಆಯಮ್ಮಣ್ಣಿ ಹರಿಗೆಯಿಂದ ಈಚೆಗೆ ಬಂದು, ರಣಧೀರನನ್ನು ಏಕಾಗ್ರವಾಗಿ ನೋಡುತ್ತಿದ್ದು, ಎಂದಿನಂತೆ 'ಬುದ್ಧಿಯವರು' ಎಂದು ಸಂಬೋಧಿಸುವುದನ್ನು ಮರೆತು, ಸಕ್ಕನಂತೆಯೇ "ರಣಧೀರ! ರಣಧೀರ! ಎಂದು ಬಿಕ್ಕಿ ಬಿಕ್ಕಿ ಅಳುತ್ತ ಅವನ ಪಾದಗಳ ಬಳಿ ಕುಸಿಯುತ್ತಾಳೆ. ರಣಧೀರನು ಅವಳನ್ನು ಸಂತೈಸಿ, "ನಿನಗೆ ನಾವು ರಣಧೀರನಾದ ಧನ್ಯತೆ ಈ ವೀರಯಜ್ಞದ ಅನಿರೀಕ್ಷಿತವಾದ ಪರಮ ಫಲ . . . ಮಹೀಶೂರ ದೇಶದ ನಮ್ಮ ಯದುವಂಶದ ಅಭಿಮಾನ

ಗೌರವ ತೇಜಸ್ವಿತೆಗಳನ್ನು ಕ್ಷೇಮಾಭ್ಯುದಯಗಳನ್ನು ಶ್ರೀ ನೃಸಿಂಹನು ಪರಿಪಾಲಿಸುತ್ತಿರುವನು" ಎಂದು ಹಾಗೇ ಆಶೀರ್ವದಿಸಿದ ಆಯುಷ್ಮತ್ನಿಯ ತೊಡೆಯಲ್ಲಿ ತಲೆಯಿಟ್ಟು ಮಲಗುತ್ತಾನೆ. ಮುನಿರಾಜ ಗೌತಮನು ಆ ದೃಶ್ಯವನ್ನು ಕಂಡು, "ರಾಯರಿಗಿದ್ದಾಂತಲ್ಪ ವಿಜಯಲಕ್ಷ್ಮಿಯ ತೊಡೆಯು ಸ್ಥಿರವಿದೆ. ಹೋಗಿರಿ. ಹಾಡಿರಿ. ಭೃತ್ಯರು ಬಾಯಿಬಿಟ್ಟಿರುವರೇಕೆ!" ಎನ್ನುತ್ತಾನೆ. ಸಮಸ್ತರೂ "ಸ್ವಸ್ತಿ ಶ್ರೀಮಲ್ಲಕ್ಷ್ಮೀನೃಸಿಂಹಪಾದಾರವಿಂದ ಮಧುಕರಾಯಿತಚಿತ್ತ" ಎಂದು ಮೊದಲಾಗಿ ಬಿರುದಾವಳಿಗಳನ್ನು ಹಾಡುತ್ತಾರೆ. ನಾಟಕ ಮುಗಿಯುತ್ತದೆ.

ಮೈಸೂರಿನ ಒಡೆಯರನ್ನು ಕುರಿತು
ಸಂಸರು ಬರೆದಿರುವ
ಆರು ನಾಟಕಗಳ ಕಥೆಗಳು ಮುಗಿದುವು.

ಸತ್ಯನಾರಾಯಣ ಪ್ರೆಸ್, ಅರಳೀಪೇಟೆ, ಬೆಂಗಳೂರು